ಮಂಗಳವಾರ, ಸೆಪ್ಟೆಂಬರ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 243 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂತ್ರಸ್ತರಿಗೆ ಪುನರ್ವಸತಿ



ಜಮ್ಮು–ಕಾಶ್ಮೀರದ ಪ್ರವಾಹ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಮೋದಿ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಲ್ಲಿಗೆ ಸೋಮವಾರ ಭೇಟಿ ನೀಡಿ, ತಿಳಿಸಿದ್ದಾರೆ

ಮುಂದೂಡಿಕೆ



ಅಮೆರಿಕ– ಭಾರತ ನಡುವಿನ ವ್ಯಾಪಾರ ಸಂಬಂಧ ಹದಗೆಟ್ಟಿದ್ದು, ನ್ಯೂಯಾರ್ಕ್‌ನಲ್ಲಿ ಸೆ. 12ರಿಂದ 14ರವರೆಗೆ ನಡೆಯಬೇಕಿದ್ದ ರಂಗೋತ್ಸವವನ್ನು ನೀತಾ ಅಂಬಾನಿ ಮುಂದೂಡಿದ್ದಾರೆ

ಸೆನ್ಸೆಕ್ಸ್ 80,364 | ನಿಫ್ಟಿ 24,625 | $/₹ 88.10 | ಚಿನ್ನ (Std. 10g) ₹1,10,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,32,100 (ಬೆಂಗಳೂರು)

ಪಹಲ್ಗಾಮ್ ದಾಳಿಗೆ ಖಂಡನೆ

ಶಾಂಘೈ ಸಹಕಾರ ಸಂಘದ ಶೃಂಗ ಸಭೆ • ಪ್ರಧಾನಿ ಮೋದಿ–ರಷ್ಯಾ ಅಧ್ಯಕ್ಷ ಪುಟಿನ್, ಚೀನಾದ ಜಿನ್‌ಪಿಂಗ್ ಭೇಟಿ

ತಿಯಾನ್‌ಜಿನ್ (ಚೀನಾ) (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು 'ಶಾಂಘೈ ಸಹಕಾರ ಸಂಘಟನೆ' (ಎಸ್‌ಸಿಒ) ಶೃಂಗಸಭೆಯು ಬಲವಾಗಿ ಖಂಡಿಸಿದೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸದಸ್ಯ ರಾಷ್ಟ್ರಗಳ ಇಬ್ಬಗೆ ನೀತಿಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಸಮ್ಮುಖದಲ್ಲೇ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಶೃಂಗಸಭೆ ಸಮಾರೋಪದಲ್ಲಿ ಮಾತನಾಡಿದ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್, ಅಭಿವೃದ್ಧಿ ಬ್ಯಾಂಕ್ ಸ್ಥಾಪನೆ ಕುರಿತು ಒಲವು ವ್ಯಕ್ತಪಡಿಸಿದರು. ಜಂಟಿ ಬಾಂಡ್ ಬಿಡುಗಡೆಗೊಳಿಸಬೇಕು ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಸಲಹೆ ನೀಡಿದರು. ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿ ಒತ್ತಾಯಿಸಿದರೆ, ಗಾಜಾದ ಮೇಲೆ ಇಸ್ರೇಲ್ ಸೇನಾ ದಾಳಿಯನ್ನು ಸದಸ್ಯ ರಾಷ್ಟ್ರಗಳು ಒಕ್ಕೊರಲಿನಿಂದ ಖಂಡಿಸಿದವು.

ಅಭಿವೃದ್ಧಿ ಬ್ಯಾಂಕ್ ಸ್ಥಾಪನೆಗೆ ಷಿ ಕರೆ: 'ಸದಸ್ಯ ರಾಷ್ಟ್ರಗಳು ಅಭಿವೃದ್ಧಿ ಬ್ಯಾಂಕ್ ಸ್ಥಾಪಿಸಲು ಒತ್ತು ನೀಡಬೇಕು' ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಕರೆ ನೀಡಿದ್ದಾರೆ.

'ಬ್ರಿಕ್ಸ್‌ನ ರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕ್ (ಎನ್‌ಡಿಬಿ) ಹಾಗೂ ಏಷ್ಯನ್ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (ಎಐಐಬಿ) ಮಾದರಿಯಲ್ಲಿ ಹೊಸ ಅಭಿವೃದ್ಧಿ ಬ್ಯಾಂಕ್ ಸ್ಥಾಪನೆಗೆ ಸದಸ್ಯ ರಾಷ್ಟ್ರಗಳು ಒಗ್ಗೂಡಬೇಕು ಎಂದು ಚೀನಾ ಬಯಸುತ್ತಿದೆ. ಇದರಲ್ಲಿ ಭಾರತವು ಎರಡನೇ ಅತಿ ದೊಡ್ಡ ಭಾಗೀದಾರ ರಾಷ್ಟ್ರವಾಗಿರಲಿದೆ' ಎಂದು ಷಿ ತಿಳಿಸಿದ್ದಾರೆ.

ಎಸ್‌ಸಿಒ ವಿಶ್ವದ ಅತಿ ದೊಡ್ಡ ಪ್ರಾದೇಶಿಕ ಒಕ್ಕೂಟವಾಗಿ ಬೆಳೆಯುತ್ತಿದ್ದು, 26 ದೇಶಗಳು ಭಾಗಿಯಾಗುತ್ತಿವೆ. 50 ಪ್ರಮುಖ ಕ್ಷೇತ್ರಗಳಲ್ಲಿ ಸಹಭಾಗಿತ್ವ ಹೊಂದಿದ್ದು, ಸುಮಾರು 30 ಟ್ರಿಲಿಯನ್ ಡಾಲರ್‌ನಷ್ಟು ಉತ್ಪಾದನೆ ಹೊಂದಿವೆ.

ಇದನ್ನು ಗಮನದಲ್ಲಿರಿಸಿಕೊಂಡೇ ಮಾತನಾಡಿದ ಷಿ ಜಿನ್‌ಪಿಂಗ್, 'ಎಸ್‌ಸಿಒದ ಅಂತರರಾಷ್ಟ್ರೀಯ ಪ್ರಭಾವ ಹಾಗೂ ಸ್ವೀಕೃತಿಯು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಸದಸ್ಯ ರಾಷ್ಟ್ರಗಳೆಲ್ಲವೂ ಸ್ನೇಹಿತರು ಹಾಗೂ ಪಾಲುದಾರರು' ಎಂದು ಹೇಳಿದರು.

ಚೀನಾ, ರಷ್ಯಾ, ಕಜಾಕಸ್ತಾನ, ಕಿರ್ಗಿಸ್ತಾನ, ತಾಜಿಕಿಸ್ತಾನ ನೇತೃತ್ವದಲ್ಲಿ ಎಸ್‌ಸಿಒ 2001ರಲ್ಲಿ ಆರಂಭಗೊಂಡಿತ್ತು. ಇದರಲ್ಲಿ ಭಾರತ, ಪಾಕಿಸ್ತಾನ, ಇರಾನ್, ಬೆಲರೂಸ್ ಹಾಗೂ ಉಜ್ಬೆಕಿಸ್ತಾನವೂ ಸೇರ್ಪಡೆಗೊಂಡಿವೆ.

ಸಂಘರ್ಷ ಕೊನೆಗೊಳಿಸಿ: 'ಉಕ್ರೇನ್ ಜೊತೆಗಿನ ಸಂಘರ್ಷವನ್ನು ಮಾನವೀಯ ದೃಷ್ಟಿಯಿಂದ ಆದಷ್ಟು ಬೇಗ ಕೊನೆಗಾಣಿಸಬೇಕು' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಪ್ರಧಾನಿ ಮೋದಿ ಸಲಹೆ ನೀಡಿದ್ದಾರೆ.

ಪ್ರತಿಸುಂಕದ ಕಾರಣದಿಂದಾಗಿ ಅಮೆರಿಕ ಜೊತೆಗೆ ಇತ್ತೀಚೆಗೆ ಭಾರತದ ಸಂಬಂಧ ಕಳೆದೆರಡು ದಶಕಗಳಲ್ಲಿಯೇ ತೀವ್ರವಾಗಿ ಹದಗೆಟ್ಟಿದೆ. ಅದರ ಬೆನ್ನಲ್ಲೇ, ಇಲ್ಲಿ ನಡೆದ ಎಸ್‌ಸಿಒ ಶೃಂಗಸಭೆ ವೇಳೆ ಉಭಯ ನಾಯಕರು ಭೇಟಿಯಾಗಿ ಚರ್ಚೆ ನಡೆಸಿದರು.

▶10



ಚೀನಾದಲ್ಲಿ ನಡೆದ ಎಸ್‌ಸಿಒ ಶೃಂಗಸಭೆಯಲ್ಲಿ ಮಾತುಕತೆಯಲ್ಲಿ ತೊಡಗಿದ್ದ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್; ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ –ಪಿಟಿಐ ಚಿತ್ರ

ಎಸ್‌ಸಿಒ ಶೃಂಗಸಭೆಯ ಪ್ರಮುಖಾಂಶಗಳು

- ಪಹಲ್ಗಾಮ್ ಭಯೋತ್ಪಾದಕರ ದಾಳಿ– ಸದಸ್ಯ ರಾಷ್ಟ್ರಗಳಿಂದಲೂ ಖಂಡನೆ
- ಭಯೋತ್ಪಾದನೆ ವಿರುದ್ಧ ಹೋರಾಟ–ಭಾರತದ ವಾದ ಬೆಂಬಲಿಸಿದ ಸದಸ್ಯ ರಾಷ್ಟ್ರಗಳು
- ದಾಳಿಯಲ್ಲಿ ಮೃತಪಟ್ಟ ಹಾಗೂ ಗಾಯಗೊಂಡವರಿಗೆ ಸಂತಾಪ ಸಲ್ಲಿಕೆ
- ಗಾಜಾದ ಮೇಲೆ ಇಸ್ರೇಲ್‌ನ ಸೇನಾ ದಾಳಿಗೂ ಖಂಡನೆ
- ದಾಳಿ ಎಸಗುವವರು, ಬೆಂಬಲಿಸುವವರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂಬ ಘೋಷಣೆ ಅಂಗೀಕಾರ
- ಭಯೋತ್ಪಾದನೆ ವಿರುದ್ಧ ಹೋರಾಟ, ಪ್ರತ್ಯೇಕತಾವಾದ ಹಾಗೂ ಉಗ್ರವಾದದ ವಿರುದ್ಧ ಹೋರಾಟಕ್ಕೆ ಸದಸ್ಯ ರಾಷ್ಟ್ರಗಳಿಂದ ಬದ್ಧತೆ
- ಮುಂದಿನ ವರ್ಷದಿಂದ ಸದಸ್ಯ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ವಿದ್ಯಾರ್ಥಿವೇತನ
- ಶೈಕ್ಷಣಿಕ ಕ್ಷೇತ್ರದ ಉನ್ನತ ಮಟ್ಟದ ಪ್ರತಿಭೆಗಳಿಗೆ ಪಿಎಚ್‌.ಡಿ. ಕಾರ್ಯಕ್ರಮ, ಜಂಟಿ ತರಬೇತಿ
- ಕೃತಕ ಬುದ್ಧಿಮತ್ತೆ ಸಹಕಾರ ಕೇಂದ್ರದ ಸ್ಥಾಪನೆ

ಪಹಲ್ಗಾಮ್– ಆತ್ಮಸಾಕ್ಷಿ ಮೇಲೆ ನಡೆದ ದಾಳಿ: ಮೋದಿ

'ಪಹಲ್ಗಾಮ್ ದಾಳಿಯು ದೇಶದ ಆತ್ಮಸಾಕ್ಷಿ ಮೇಲೆ ನಡೆದ ದಾಳಿಯಷ್ಟೇ ಅಲ್ಲ, ಮಾನವೀಯತೆ ಮೇಲೆ ನಂಬಿಕೆ ಇಟ್ಟಿರುವ ಪ್ರತಿ ದೇಶಕ್ಕೂ ಎಸೆದ ಬಹಿರಂಗ ಸವಾಲಾಗಿದೆ' ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

'ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ಇಬ್ಬಗೆ ನೀತಿಯನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಅವರು ಬಲವಾಗಿ ಪ್ರತಿಪಾದಿಸಿದರು.

ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸೇರಿದಂತೆ ಹಲವು ರಾಷ್ಟ್ರಗಳ ನಾಯಕರ ಸಮ್ಮುಖದಲ್ಲಿಯೇ ಎಸ್‌ಸಿಒ ವಾರ್ಷಿಕ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಮೋದಿ, ಭಯೋತ್ಪಾದನೆ ವಿರುದ್ಧ ಹೋರಾಡುವುದು ಮಾನವೀಯತೆಯ ಕರ್ತವ್ಯವಾಗಿದೆ' ಎಂದು ತಿಳಿಸಿದ್ದಾರೆ. ಪಾಕಿಸ್ತಾನ ಹಾಗೂ ಅದನ್ನು ಬೆಂಬಲಿಸುವವರಿಗೆ ಮೋದಿ ಈ ಮೂಲಕ ಸ್ಪಷ್ಟವಾದ ಸಂದೇಶ ರವಾನಿಸಿದ್ದಾರೆ.

'ಕೆಲವು ದೇಶಗಳು ಭಯೋತ್ಪಾದನೆಯನ್ನು ಮುಕ್ತವಾಗಿ ಬೆಂಬಲಿಸುತ್ತಿದ್ದು, ಇದು ನಮಗೂ ಸಮ್ಮತವೇ ಎಂದು ಸಹಜ ಪ್ರಶ್ನೆ ಮೂಡುತ್ತದೆ. ಭಯೋತ್ಪಾದನೆ ವಿಚಾರದಲ್ಲಿ ಇಬ್ಬಗೆ ನೀತಿಯನ್ನು ಒಪ್ಪಲು ಸಾಧ್ಯವಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಎಲ್ಲ ಮಾದರಿ ಹಾಗೂ ಸ್ವರೂಪದ ಭಯೋತ್ಪಾದನೆಯನ್ನು ವಿರೋಧಿಸಬೇಕು' ಎಂದು ಮೋದಿ ತಿಳಿಸಿದ್ದಾರೆ.

ಶೆಹಬಾಜ್ ಷರೀಫ್ ಎದುರೇ ಭಯೋತ್ಪಾದನೆ ವಿರುದ್ಧ ಹೋರಾಟಕ್ಕೆ ಸದಸ್ಯ ರಾಷ್ಟ್ರಗಳ ಬೆಂಬಲ ಪಡೆದಿರುವುದು ಭಾರತಕ್ಕೆ ಸಿಕ್ಕ ಅತಿ ದೊಡ್ಡ ಗೆಲುವು ಎಂದು ವಿಶ್ಲೇಷಿಸಲಾಗಿದೆ.

ಪ್ರತಿಭಟನೆ

ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ



ಅಂಬಿಗರ ಚೌಡಯ್ಯನ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಯಾದಗಿರಿಯಲ್ಲಿ ಸೋಮವಾರ ಕೋಲಿ ಕಬ್ಬಲಿಗ, ತಳವಾರ ಸಮುದಾಯಗಳ ಜಂಟಿ ಹೋರಾಟ ಸಮಿತಿಯವರು ಪ್ರತಿಭಟಿಸಿದರು

ಧರ್ಮಸ್ಥಳ ಪರ ಕಮಲ ಕಹಳೆ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ (ದಕ್ಷಿಣ ಕನ್ನಡ): ಹರ ಹರ ಮಹಾದೇವ... ಧರ್ಮಸ್ಥಳ ಮಂಜುನಾಥ ಸ್ವಾಮಿಗೆ ಜೈ...

ಕೇಸರಿ ಶಾಲು ಧರಿಸಿ, ಕೇಸರಿ ಬಾವುಟ ಹಿಡಿದು ಸಾಗಿಬಂದ ಬಿಜೆಪಿ ಕಾರ್ಯಕರ್ತರು ಹಾಗೂ ಕ್ಷೇತ್ರದ ಭಕ್ತರ ಘೋಷಣೆಗಳು ಧರ್ಮಸ್ಥಳದ ಬೀದಿಗಳಲ್ಲಿ ಮಾರ್ದನಿಸಿದವು.

'ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸಲು ಷಡ್ಯಂತ್ರ ನಡೆದಿದೆ' ಎಂದು ಆರೋಪಿಸಿ ಬಿಜೆಪಿ ವತಿಯಿಂದ ಸೋಮವಾರ ಆಯೋಜಿಸಿದ್ದ 'ಧರ್ಮಸ್ಥಳ ಚಲೋ' ಸಮಾವೇಶ ಕ್ಷೇತ್ರದ ಬೀದಿಯನ್ನು ಕೇಸರಿಮಯವಾಗಿಸಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದವರು, ಧರ್ಮಸ್ಥಳದ ಮುಖ್ಯದ್ವಾರದಿಂದ ಕಾರ್ಯಕ್ರಮದ ವೇದಿಕೆಯತ್ತ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಸಾಗಿಬಂದರು. ಧಾರಾಕಾರವಾಗಿ ಸುರಿದ ಮಳೆಯ ನಡುವೆಯೂ ಹುರುಪಿನಿಂದ ಹೆಜ್ಜೆ ಹಾಕಿದರು. ಪಕ್ಷದ ಮುಖಂಡರೂ ಮಳೆಯನ್ನು ಲೆಕ್ಕಿಸದೆ ಸಾಗಿದರು. ಸಮಾವೇಶದ ವೇದಿಕೆಯನ್ನು ತಲುಪುವಷ್ಟರಲ್ಲಿ ಬಹುತೇಕರು ಪೂರ್ತಿ ಒದ್ದೆಯಾಗಿದ್ದರು.

ನಾಯಕರ ಭಾಷಣದ ನಡು ನಡುವೆ 'ಹರ ಹರ ಮಹಾದೇವ...' ಘೋಷಣೆ ಕೂಗಿದರು. ಸಭಿಕರು ಕೇಸರಿ ಶಾಲು ಬೀಸುತ್ತಾ ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ಜೈಕಾರ ಕೂಗಿದರು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೂ ಜಯಘೋಷ ಹಾಕಿದರು. 'ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರದ ನಡೆಸಲಾಗುತ್ತಿದೆ' ಎಂದು ಬಿಜೆಪಿ ಮುಖಂಡರು ಕಿಡಿಕಾರಿದರು.

▶6



'ಧರ್ಮಸ್ಥಳ ಚಲೋ' ಸಮಾವೇಶದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಕ್ಷೇತ್ರದ ಭಕ್ತರು ಕೇಸರಿ ಶಾಲನ್ನು ಬೀಸುತ್ತಾ ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ಹಾಗೂ ವೀರೇಂದ್ರ ಹೆಗ್ಗಡೆ ಕುಟುಂಬಕ್ಕೆ ಸೋಮವಾರ ಜೈಕಾರ ಕೂಗಿದರು

ಸೌಜನ್ಯಾ ಮನೆಗೆ ವಿಜಯೇಂದ್ರ ಭೇಟಿ

ಅತ್ಯಾಚಾರಕ್ಕೊಳಗಾಗಿ ಹತ್ಯೆಯಾದ ವಿದ್ಯಾರ್ಥಿನಿ ಸೌಜನ್ಯಾ ಅವರ, ಪಾಂಗಾಳದಲ್ಲಿರುವ ಮನೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಮಾವೇಶದ ನಂತರ ಭೇಟಿ ನೀಡಿದರು. ಸೌಜನ್ಯಾ ಅವರ ತಾಯಿ ಕುಸುಮಾವತಿ ಅವರೊಂದಿಗೆ ಚರ್ಚಿಸಿದರು.

'ಸೌಜನ್ಯಾ ಪ್ರಕರಣದ ಬಗ್ಗೆ ಸಿಬಿಐ ಕೋರ್ಟ್ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ. ಅದರ ವೆಚ್ಚವನ್ನು ಬಿಜೆಪಿ ಭರಿಸಲಿದೆ. ವೆಚ್ಚದ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಕುಸುಮಾವತಿ ಅವರಿಗೆ ಹೇಳಿದ್ದೇವೆ' ಎಂದು ವಿಜಯೇಂದ್ರ ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೂ ಮುನ್ನ ಬಿಜೆಪಿ ಸಮಾವೇಶದಲ್ಲಿ ಮಾತನಾಡಿದ್ದ ಅವರು, 'ಸೌಜನ್ಯಾ ಹತ್ಯೆ ಪ್ರಕರಣ ಮರು ತನಿಖೆಗೆ ಸರ್ಕಾರ ಕ್ರಮ ವಹಿಸಿ ಆ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಕೊಡುವ ಕೆಲಸ ಮಾಡಲಿ. ಈ ವಿಚಾರದಲ್ಲಿ ಬಿಜೆಪಿ ಸಂಪೂರ್ಣ ಬೆಂಬಲ ಕೊಡುತ್ತದೆ' ಎಂದು ಹೇಳಿದ್ದರು.



ಸಿದ್ದರಾಮಯ್ಯ ಸುತ್ತ ನಕ್ಸಲ್ ಗ್ಯಾಂಗ್, ತಿಮರೋಡಿ ಗ್ಯಾಂಗ್ ಸೇರಿಕೊಂಡಿದೆ. ಇವರೆಲ್ಲ ನಗರ ನಕ್ಸಲರು. ಷಡ್ಯಂತ್ರ ಬಗ್ಗೆ ಎನ್‌ಐಎ ತನಿಖೆ ನಡೆಸಿದರೆ ಮಾತ್ರ ನ್ಯಾಯ ಸಿಗಲಿದೆ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಮತ ಕಳವು: ನರೇಂದ್ರ ಮೋದಿಗೆ ಮುಖ ತೋರಿಸಲು ಆಗಲ್ಲ– ಲೋಕಸಭೆಯ ವಿಪಕ್ಷ ನಾಯಕ

ಹೈಡ್ರೋಜನ್ ಬಾಂಬ್‌ನಂಥ ಮಾಹಿತಿ: ರಾಹುಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ಪಟ್ನಾ: 'ಮತ ಕಳವಿಗೆ ಸಂಬಂಧಿಸಿದಂತೆ ಹೈಡ್ರೋಜನ್ ಬಾಂಬ್‌ನಂತಹ ಮಾಹಿತಿಯು ಶೀಘ್ರದಲ್ಲೇ ಬಹಿರಂಗವಾಗಲಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೋಮವಾರ ಇಲ್ಲಿ ಹೇಳಿದರು.

'ಅಣು ಬಾಂಬ್‌ಗಿಂತ ಹೈಡ್ರೋಜನ್ ಬಾಂಬ್ ದೊಡ್ಡದು. ಶೀಘ್ರದಲ್ಲೇ ಮತ ಕಳ್ಳತನದ ವಾಸ್ತವವು ಜನರಿಗೆ ಗೊತ್ತಾಗಲಿದ್ದು, ಆಗ ದೇಶಕ್ಕೆ ತಮ್ಮ ಮುಖ ತೋರಿಸಲು ಪ್ರಧಾನಿ ನರೇಂದ್ರ ಮೋದಿಗೆ ಸಾಧ್ಯವಾಗದು' ಎಂದು 'ಮತದಾರ ಅಧಿಕಾರ ಯಾತ್ರೆ'ಯ ಸಮಾರೋಪದಲ್ಲಿ ಹೇಳಿದರು.

'ಮತ ಕಳ್ಳತನ ಎಂದರೆ ಹಕ್ಕುಗಳ ಕಳ್ಳತನ. ಪ್ರಜಾಪ್ರಭುತ್ವದ ಕಳ್ಳತನ. ಉದ್ಯೋಗದ ಕಳ್ಳತನ. ಬಿಜೆಪಿಯವರು ನಿಮ್ಮ ಪಡಿತರ ಚೀಟಿ ಹಾಗೂ ಇತರ ಹಕ್ಕುಗಳನ್ನು ಕಸಿದುಕೊಳ್ಳಲಿದ್ದಾರೆ' ಎಂದು ರಾಹುಲ್ ಹೇಳಿದರು.

'ಮಹಾತ್ಮ ಗಾಂಧಿ ಅವರ ಹತ್ಯೆಯ ಹಿಂದಿದ್ದ ಶಕ್ತಿಗಳೇ ಇದೀಗ ಸಂವಿಧಾನದ ಹತ್ಯೆಗೂ ಮುಂದಾಗಿವೆ. ನಾವು ಇದಕ್ಕೆ ಅವಕಾಶ ಕೊಡಲ್ಲ. ಅದಕ್ಕಾಗಿಯೇ ಈ ಯಾತ್ರೆ ನಡೆಸಿದ್ದು, ಜನರಿಂದ ಉತ್ತಮ ಸ್ಪಂದನ ಸಿಕ್ಕಿದೆ. ಅಸಂಖ್ಯಾತ ಜನರು ಮತ ಕಳ್ಳತನದ ವಿರುದ್ಧ ತಮ್ಮ ಧ್ವನಿ ಮೊಳಗಿಸಿದ್ದಾರೆ' ಎಂದರು.

▶7



ಬಿಹಾರದ ಪಟ್ನಾದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ 'ಮತದಾರ ಅಧಿಕಾರ ಯಾತ್ರೆ'ಯ ಸಮಾರೋಪವು ಸೋಮವಾರ ನಡೆಯಿತು ಪಿಟಿಐ ಚಿತ್ರ

ಕಸ ಎಸೆಯುವಲ್ಲಿ ಬಿಸಾಡಲಿವೆ: ಖರ್ಗೆ



'ಸಮಾಜವಾದವನ್ನು ಪ್ರತಿಪಾದಿಸುತ್ತಿದ್ದ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇದೀಗ ಕಮಲದ ಮಡಿಲಲ್ಲಿ ಮಲಗಿದ್ದು, ಆರ್‌ಎಸ್‌ಎಸ್–ಬಿಜೆಪಿಯು ಅವರನ್ನು ಕಸ ಎಸೆಯುವ ಜಾಗಕ್ಕೆ ಬಿಸಾಡಲಿವೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

▶7

ಚಿನಕುರುಳಿ – ಪ್ರಕಾಶ್ ಶೆಟ್ಟಿ



ಅಫ್ಗಾನಿಸ್ತಾನದಲ್ಲಿ ಭೂಕಂಪ: 800 ಸಾವು

ಕಾಬೂಲ್ (ಪಿಟಿಐ): ಹಿಂದು ಕುಶ್ ಪರ್ವತ ಶ್ರೇಣಿಗಳು, ಕುನಾರ್ ಕಣಿವೆಯ ಸೊಬಗಿನ ಪೂರ್ವ ಅಫ್ಗಾನಿಸ್ತಾನವು ಭಾನುವಾರ ತಡರಾತ್ರಿ ಸಂಭವಿಸಿದ ಭೀಕರ ಭೂಕಂಪಕ್ಕೆ ತತ್ತರಿಸಿದೆ. ಭೂಕಂಪದಲ್ಲಿ ಜೀವ ಕಳೆದುಕೊಂಡವರ ಸಂಖ್ಯೆ 800ಕ್ಕೂ ಹೆಚ್ಚು. 2,500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಅಪಾರ ಸಂಖ್ಯೆಯ ಜನರು ನಿರಾಶ್ರಿತರಾಗಿದ್ದಾರೆ.

ರಾತ್ರಿ ಜನರು ನಿದ್ರಿಸುತ್ತಿದ್ದ ವೇಳೆ ಭೂಕಂಪ ಸಂಭವಿಸಿದ್ದರಿಂದ ಅಪಾಯದ ಮುನ್ಸೂಚನೆ ತಿಳಿಯದಾಯಿತು. ಮನೆಗಳಿಂದ ಹೊರಗೆ ಓಡಿಬಂದು ಜೀವ ಉಳಿಸಿಕೊಳ್ಳಲು ಹೆಚ್ಚಿನ ಜನರಿಗೆ ಆಗಲಿಲ್ಲ.

ಹೀಗಾಗಿ ದೊಡ್ಡ ಸಂಖ್ಯೆಯಲ್ಲಿ ಸಾವು–ನೋವು ಸಂಭವಿಸಿದೆ. ಸೋಮವಾರ ಬೆಳಿಗ್ಗೆಯಿಂದ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಸಾವಿನ ಸಂಖ್ಯೆ ಇನ್ನೂ ಏರಿಕೆಯಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

▶10

ಬಿರುಗಾಳಿಯಂತೆ ಶಬ್ದ

'ದೊಡ್ಡ ಬಿರುಗಾಳಿ ಸಮೀಪಿಸುತ್ತಿರುವಂತೆ ಶಬ್ದ ಕೇಳಿಬಂತು. ತಕ್ಷಣವೇ ನಿದ್ರೆಯಲ್ಲಿದ್ದ ಮಕ್ಕಳನ್ನು ಎತ್ತಿಕೊಂಡು ಮನೆಯಿಂದ ಹೊರಗೋಡಿದೆ. ತಿರುಗಿ ನೋಡುವಷ್ಟರಲ್ಲಿ ನನ್ನ ಮನೆ, ನನ್ನ ಕಣ್ಣೆದುರೇ ನೆಲಸಮಗೊಂಡಿತು. ಮನೆಯಲ್ಲಿದ್ದವರು ಮಣ್ಣಿನಡಿ ಸಿಲುಕಿದರು' ಎಂದು ಭೂಕಂಪದಲ್ಲಿ ಜೀವ ಉಳಿಸಿಕೊಂಡ ನುರ್ಗಲ್‌ನ ಮಜಾದರ್ ಪ್ರದೇಶದ ಸಿದ್ದಿಕ್ ಹೇಳಿದರು.

ಅಫ್ಗಾನಿಸ್ತಾನದಲ್ಲಿ 2023ರ ಅಕ್ಟೋಬರ್‌ನಲ್ಲಿ ಸಂಭವಿಸಿದ ರಿಕ್ಟ್ ಮಾಪಕದಲ್ಲಿ 6.3 ತೀವ್ರತೆಯ ಭೂಕಂಪದಲ್ಲಿ 1,500ಕ್ಕೂ ಹೆಚ್ಚು ಜನ ಮೃತಪಟ್ಟಿದ್ದರು. ಇದು ಇದುವರೆಗಿನ ಭೀಕರ ದುರಂತ ಎಂದು ಅಲ್ಲಿನ ಸರ್ಕಾರ ಹೇಳಿದೆ.

ಈ ಸಮಯದಲ್ಲಿ ಬಾಧಿತರಿಗೆ ಸಾಧ್ಯ ಇರುವ ಎಲ್ಲ ಮಾನವೀಯ ನೆರವು, ಪರಿಹಾರ ನೀಡಲು ಭಾರತ ಬದ್ಧವಾಗಿದೆ

ನರೇಂದ್ರ ಮೋದಿ, ಪ್ರಧಾನಿ, (ಎಕ್ಸ್‌ಪೋಸ್ಟ್‌ನಲ್ಲಿ)

ಭೂಕಂಪದಲ್ಲಿ ಮೃತಪಟ್ಟವರಲ್ಲಿ ಹೆಚ್ಚಿನವರು ಕುನಾರ್ ಪ್ರಾಂತ್ಯಕ್ಕೆ ಸೇರಿದವರು. ಈ ಭಾಗದಲ್ಲಿ ಹೆಚ್ಚಿನ ಜೀವ ಹಾನಿ ಸಂಭವಿಸಿದೆ

ಜಬೀಬುಲ್ಲಾ ಮುಜಾಹಿದ್, ತಾಲಿಬಾನ್ ಸರ್ಕಾರದ ವಕ್ತಾರ

ಹಣ ಗಳಿಕೆಗಾಗಿ ಚಿತ್ರೀಕರಣಕ್ಕೆ ಅವಕಾಶ–ದೂರು • ತನಿಖೆಗೆ ಅರಣ್ಯ ಸಚಿವರ ಸೂಚನೆ

ಕಾಳಿಂಗಕ್ಕೆ 'ಫೋಟೊ ಶೂಟ್' ಕಂಟಕ

• ಎಸ್.ರವಿಪ್ರಕಾಶ್

ಬೆಂಗಳೂರು: ಮಳೆ ಕಾಡುಗಳಲ್ಲಿನ ಅಪರೂಪದ ಜೀವಿಯಾದ ಕಾಳಿಂಗ ಸರ್ಪಗಳ ಸಂರಕ್ಷಣೆಯ ಹೆಸರಿನಲ್ಲಿ, ಕಾನೂನು ಬಾಹಿರವಾಗಿ ವನ್ಯಜೀವಿ ಛಾಯಾಗ್ರಾಹಕರಿಗೆ ಛಾಯಾಗ್ರಹಣಕ್ಕೆ ಅವಕಾಶ ನೀಡುತ್ತಿರುವುದು, ಇದೇ ಉದ್ದೇಶಕ್ಕಾಗಿ ಕಾಳಿಂಗ ಮತ್ತು ಅವುಗಳ ಮರಿಗಳನ್ನು ಕೂಡಿಟ್ಟಿರುವ ಪ್ರಕರಣ ಪತ್ತೆಯಾಗಿದೆ.

'ಆಗುಂಬೆ ರೈನ್ ಫಾರೆಸ್ಟ್ ರಿಸರ್ಚ್ ಸ್ಟೇಷನ್' ಸಂಸ್ಥೆಯು ಇತ್ತೀಚೆಗೆ ಚಲನಚಿತ್ರ ಛಾಯಾಗ್ರಾಹಕ ಪ್ರದೀಪ್ ಹೆಗ್ಡೆ ಅವರನ್ನು ಕರೆಸಿ ಎರಡು ದಿನ ಕಾಳಿಂಗ ಸರ್ಪ ಮತ್ತು ಮರಿಗಳ ಚಿತ್ರೀಕರಣಕ್ಕೆ ಅವಕಾಶ ನೀಡಿದೆ. ಈ ಬಗ್ಗೆ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದಾಗ, ಅರಣ್ಯ ಇಲಾಖೆ ಸಿಬ್ಬಂದಿ ಬರುವಷ್ಟರಲ್ಲಿ ಹಾವುಗಳನ್ನು ಮರೆ ಮಾಚಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತರಾದ ದಿನೇಶ್ ಕಲ್ಲಹಳ್ಳಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಮಾಹಿತಿಯನ್ನು ಅರಣ್ಯ ಇಲಾಖೆ ಮೂಲಗಳು ಖಚಿತಪಡಿಸಿವೆ.

'ಈ ಸಂಸ್ಥೆ ವಿರುದ್ಧ ಬಂದಿರುವ ದೂರುಗಳ ಆಧಾರದಲ್ಲಿ, ತನಿಖೆ ನಡೆಸಿ ವರದಿ ನೀಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ. ಅದರ ಅನ್ವಯ ಶಿವಮೊಗ್ಗ ಡಿಸಿಎಫ್ ತನಿಖೆ ನಡೆಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

'ಆಘಾತಕಾರಿ ವಿಷಯವೆಂದರೆ, ಕಾಳಿಂಗ ಸರ್ಪಗಳ ಮಿಲನ, ಗೂಡು ಕಟ್ಟುವುದು, ಮೊಟ್ಟೆ ಇಡುವುದು, ಮರಿಗಳು ಹೊರಬರುವುದರ ಚಿತ್ರೀಕರಣ ನಡೆಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಳಿಂಗ ಸರ್ಪ ಮತ್ತು ಅವುಗಳ ಮರಿಗಳ ವಿಡಿಯೊ–ಚಿತ್ರಗಳಿಗೆ ವಿಪರೀತ ಬೇಡಿಕೆ ಇದೆ. ಇವುಗಳ ವಿಡಿಯೊ ಮತ್ತು ಚಿತ್ರಗಳು ಲಕ್ಷಾಂತರ ರೂಪಾಯಿ ಆದಾಯವನ್ನು ತಂದು ಕೊಡುತ್ತವೆ' ಎಂದು ದೂರಿನಲ್ಲಿ ದಿನೇಶ್ ಹೇಳಿದ್ದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಷೆಡ್ಯೂಲ್ 2ರ ಅಡಿ ಕಾಳಿಂಗ ಸರ್ಪ ವಿಶೇಷ ರಕ್ಷಣೆಗೆ ಒಳಪಡುವ ಜೀವಿ. ಕಾಳಿಂಗ ಸರ್ಪಗಳನ್ನು ಅಕ್ರಮವಾಗಿ ಹಿಡಿದು ವನ್ಯಜೀವಿ ಛಾಯಾಗ್ರಾಹಕರಿಗೆ ಫೋಟೋ, ವಿಡಿಯೊ ಮಾಡಲು ಅವಕಾಶ ನೀಡುವುದು, ಹಾವುಗಳನ್ನು ಹಿಡಿಯುವ ಹೆಸರಿನಲ್ಲಿ ಜನರಿಗೆ ಹಾವು ಮುಟ್ಟಲು ಅವಕಾಶ ನೀಡುವುದು, ಚಿತ್ರೀಕರಣಕ್ಕಾಗಿ ಹಾವುಗಳನ್ನು ಬಿಡುಗಡೆ ಮಾಡಿ, ವಾಣಿಜ್ಯ ಲಾಭ ಪಡೆಯುವುದು, ಅರಣ್ಯ ಇಲಾಖೆ ಅನುಮತಿ ಇಲ್ಲದೇ ಹಾವುಗಳನ್ನು ಬಂಧನದಲ್ಲಿ ಇಡುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಅಪರಾಧ. ಆದ್ದರಿಂದ, ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಚಿತ್ರೀಕರಣಕ್ಕೆ ಬಳಸಿದ ಕ್ಯಾಮೆರಾ ಸೇರಿದಂತೆ ಇತರ ಸಾಧನಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ಒತ್ತಾಯಿಸಿದ್ದರು.

▶6

ಮುಖ್ಯಾಂಶಗಳು

- ಅಕ್ರಮವಾಗಿ ಅರಣ್ಯ ಭೂಮಿ ಬಳಕೆ, ಕಟ್ಟಡ ನಿರ್ಮಾಣ
- ಅನಧಿಕೃತವಾಗಿ ಕಾಟೇಜ್ ನಿರ್ಮಾಣ
- ಕಾಳಿಂಗ ಸರ್ಪಗಳ ವಿಡಿಯೊಗಳಿಗೆ ಭಾರಿ ಬೇಡಿಕೆ

'ಹಣದ ದಾಹಕ್ಕಾಗಿ ಅಪಾಯದಲ್ಲಿ ಕಾಳಿಂಗ'





'ಕಾಳಿಂಗ ಈಗ ಅಂತರರಾಷ್ಟ್ರೀಯ ವಸ್ತು. ಅದರ ಆಕರ್ಷಕ ಚಿತ್ರ, ಗೂಡು ಮಾಡುವ, ಮೊಟ್ಟೆ ಇಡುವ, ಮರಿ ಹೊರಬರುವ ವಿಡಿಯೊ ತುಣುಕುಗಳಿಗೆ ಲಕ್ಷಾಂತರ ಬೆಲೆ ಇದೆ. ಅದರ ಗಾತ್ರ, ಜೀವನ ವಿಧಾನ, ಪರಿಸರ ವ್ಯವಸ್ಥೆಯಲ್ಲಿ ಅದರ ಪಾತ್ರ ಮೊದಲಾದ ಕಾರಣಗಳಿಗೆ ಅದರ ಸಂಶೋಧನೆಗೆಂದು ಕೋಟಿಗಟ್ಟಲೆ ಹಣ ಹರಿದು ಬರುತ್ತದೆ. ಹಣದ ದಾಹಕ್ಕಾಗಿ ಕಾಳಿಂಗ ಅಪಾಯದಲ್ಲಿದೆ' ಎಂದು ಶೃಂಗೇರಿಯ ಬಯೋಡೈವರ್ಸಿಟಿ, ಎನ್ವಿರಾನ್‌ಮೆಂಟ್ ಅಂಡ್ ಅಗ್ರಿಕಲ್ಚರ್ ಸ್ಟಡೀಸ್‌ನ (ಬಿಇಎಎಸ್) ಸಂಸ್ಥಾಪಕ ನಾಗರಾಜ ಕೂವೆ ಹೇಳಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ

ಸಚಿವ ಜಮೀರ್‌ಗೆ ಸಾಲ ರಾಧಿಕಾ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ನಟಿ ರಾಧಿಕಾ ಕುಮಾರಸ್ವಾಮಿ ಅವರ ವಿಚಾರಣೆ ನಡೆಸಿದ್ದಾರೆ. ಜಮೀರ್ ಅವರಿಗೆ ರಾಧಿಕಾ ₹2 ಕೋಟಿ ಹಣಕಾಸು ನೆರವು ನೀಡಿದ್ದರು ಎಂದು ಗೊತ್ತಾಗಿದ್ದು, ಈ ಸಂಬಂಧ ಅವರು ಹೇಳಿಕೆ ದಾಖಲಿಸಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು, ಜಮೀರ್ ಅಹಮದ್ ಖಾನ್ ಅವರ ಆದಾಯದ ಮೂಲಗಳನ್ನು ಶೋಧಿಸಿದಾಗ ಸಾಲ ನೀಡಿದವರ ಪಟ್ಟಿ ದೊರೆತಿದೆ. ಇದರಲ್ಲಿ ನಟಿ ರಾಧಿಕಾ ಕುಮಾರಸ್ವಾಮಿ ಹಾಗೂ ಹಲವರ ಹೆಸರು ಉಲ್ಲೇಖವಾಗಿತ್ತು.

ವಿಚಾರಣೆ ವೇಳೆ ಜಮೀರ್ ಅವರಿಗೆ ಸಾಲ ಕೊಟ್ಟಿರುವುದನ್ನು ಒಪ್ಪಿಕೊಂಡಿರುವ ರಾಧಿಕಾ, ‘ನಾನು 2012ರಲ್ಲಿ ಯಶ್ ಹಾಗೂ ರಮ್ಯಾ ಅಭಿನಯದಲ್ಲಿ ಶಮಿಕಾ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಸಿನಿಮಾ ನಿರ್ಮಾಣ ಮಾಡಿದೆ. ಮನರಂಜನಾ ಚಾನಲ್‌ಗಳಿಗೆ ಈ ಸಿನಿಮಾದ ಸ್ಯಾಟಲೈಟ್ ಹಕ್ಕು, ಚಲನಚಿತ್ರದ ಯಶಸ್ಸಿನಿಂದ ಸಂಪಾದಿಸಿದ ಹಣದಲ್ಲಿ ₹2 ಕೋಟಿ ಸಚಿವರಿಗೆ ನೀಡಿದ್ದೆ’ ಎಂದು ಹೇಳಿಕೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

ಪೆಟ್ರೋಲ್ ಸುರಿದು ಮಹಿಳೆ ಹತ್ಯೆ

ಸಹ ಜೀವನ ನಡೆಸುತ್ತಿದ್ದ 52 ವರ್ಷದ ಕ್ಯಾಬ್ ಚಾಲಕ, 25 ವರ್ಷದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೊಬ್ಬ ವ್ಯಕ್ತಿಯೊಂದಿಗೆ ಸಲುಗೆ ಬೆಳೆಸಿದ್ದಕ್ಕೆ ಮಹಿಳೆಗೆ ಪೆಟ್ರೋಲ್ ಸುರಿದು ಬೆಂಕಿಹಚ್ಚಿ ಕೊಲೆ ಮಾಡಿದ್ದು, ಈ ಸಂಬಂಧ ಆರೋಪಿ ವಿಠಲ್ (52) ಎಂಬಾತನನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

ವನಜಾಕ್ಷಿ (25) ಕೊಲೆಯಾದ ಮಹಿಳೆ.

ವಿಠಲ್ ಹಾಗೂ ವನಜಾಕ್ಷಿ ಆನೇಕಲ್ ತಾಲ್ಲೂಕಿನ ಮಳೆನಲ್ಲಸಂದ್ರದ ನಿವಾಸಿಗಳು.

‘ಆರೋಪಿ ವಿಠಲ್ ಕ್ಯಾಬ್ ಚಾಲನೆ ಮಾಡುತ್ತಿದ್ದ. ಆತನಿಗೆ ಎರಡು ಮದುವೆಯಾಗಿತ್ತು. ಮೊದಲ ಪತ್ನಿ ಮೃತಪಟ್ಟಿದ್ದರಿಂದ ಮತ್ತೊಂದು ಮದುವೆಯಾಗಿದ್ದ. ಪ್ರತಿನಿತ್ಯ ಮನೆಯಲ್ಲಿ ಆರೋಪಿ ಗಲಾಟೆ ಮಾಡುತ್ತಿದ್ದರಿಂದ ಎರಡನೇ ಪತ್ನಿ ಸಹ ಪ್ರತ್ಯೇಕವಾಗಿ ನೆಲಸಿದ್ದರು.



ವನಜಾಕ್ಷಿ

ವನಜಾಕ್ಷಿ ಅವರಿಗೂ ಮದುವೆಯಾಗಿತ್ತು. ಕೆಲವು ತಿಂಗಳ ಹಿಂದೆ ಅವರ ಪತಿ ಮೃತಪಟ್ಟಿದ್ದರು. ಈ ನಡುವೆ ವಿಠಲ್ ಹಾಗೂ ವನಜಾಕ್ಷಿ ನಡುವೆ ಸ್ನೇಹ ಬೆಳೆದು ಸಹಜೀವನ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕಳೆದ ಕೆಲವು ದಿನಗಳಿಂದ ವನಜಾಕ್ಷಿ ಅವರು ವಿಠಲ್‌ನನ್ನು ಕಡೆಗಣಿಸುತ್ತಿದ್ದರು. ಅದೇ ಗ್ರಾಮದ ಮತ್ತೊಬ್ಬ ವ್ಯಕ್ತಿಯೊಂದಿಗೆ ಹೆಚ್ಚು ಸಲುಗೆಯಿಂದ ಇರುತ್ತಿದ್ದರು. ಒಂದು ತಿಂಗಳಿನಿಂದ ಈ ವಿಚಾರಕ್ಕೆ ವಿಠಲ್ ಹಾಗೂ ವನಜಾಕ್ಷಿ ನಡುವೆ ಜಗಳ ವಾಗುತ್ತಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶನಿವಾರ ಮಧ್ಯಾಹ್ನ 12.30ರ ಸುಮಾರಿಗೆ ವನಜಾಕ್ಷಿ ಅವರು ಮತ್ತೊಬ್ಬ ಸ್ನೇಹಿತನ ಜೊತೆ ಬನ್ನೇರುಘಟ್ಟದಿಂದ ಬಸವನಪುರಕ್ಕೆ ಕಾರಲ್ಲಿ ತೆರಳುತ್ತಿದ್ದರು. ಕಾರಿನಲ್ಲಿ ತೆರಳುತ್ತಿರುವುದನ್ನು ಗಮನಿಸಿದ್ದ ಆರೋಪಿ, ಹೊಮ್ಮದೇವನ ಹಳ್ಳಿ ಬಳಿ ಕಾರನ್ನು ಅಡ್ಡಗಟ್ಟಿದ್ದ. ಕಾರು ಚಾಲನೆ ಮಾಡುತ್ತಿದ್ದ ಮುನಿಯಪ್ಪ ಅವರು ಕೆಳಕ್ಕೆ ಇಳಿದಿದ್ದರು. ವನಜಾಕ್ಷಿ ಅವರು ವಿಠಲ್‌ನನ್ನು ಗಮನಿಸಿ, ಕಾರಿನಿಂದ ಇಳಿದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು’ ಎಂದು ಪೊಲೀಸರು ಹೇಳಿದರು.

ಪೆಟ್ರೋಲ್ ಖರೀದಿಸಿದ್ದ ಆರೋಪಿ

‘ವನಜಾಕ್ಷಿ ಅವರನ್ನು ಕೊಲೆ ಮಾಡಲೆಂದೇ ಆರೋಪಿ ಐದು ಲೀಟರ್‌ನಷ್ಟು ಪೆಟ್ರೋಲ್ ಖರೀದಿಸಿಕೊಂಡು ಕ್ಯಾನ್‌ನಲ್ಲಿ ತಂದಿದ್ದ. ಕಾರಿನ ಮೇಲೆಯೇ ಪೆಟ್ರೋಲ್ ಸುರಿಯಲು ಯತ್ನಿಸಿದ್ದ. ಅಷ್ಟರಲ್ಲಿ ಸ್ನೇಹಿತನ ಜೊತೆ ಕಾರಿನಿಂದ ಇಳಿದ ವನಜಾಕ್ಷಿ ಓಡಿ ಹೋಗಲು ಪ್ರಯತ್ನಿಸಿದ್ದರು. ಇಬ್ಬರನ್ನೂ ಹಿಂಬಾಲಿಸಿಕೊಂಡು ಹೋಗಿದ್ದ ವಿಠಲ್, ಬಳಿಕ ವನಜಾಕ್ಷಿ ಮೇಲೆ ಪೆಟ್ರೋಲ್ ಎರಚಿ ಲೈಟರ್‌ನಿಂದ ಬೆಂಕಿ ಹಚ್ಚಿದ್ದ. ಗಂಭೀರವಾಗಿ ಗಾಯಗೊಂಡಿದ್ದ ವನಜಾಕ್ಷಿ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶೇ 60ರಷ್ಟು ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಅವರು ಭಾನುವಾರ ಮೃತಪಟ್ಟಿದ್ದಾರೆ’ ಎಂದು ಮೂಲಗಳು ಹೇಳಿವೆ.



ವಿಠಲ್

ಮುನಿಯಪ್ಪ ಅವರು ನೀಡಿದ ದೂರು ಆಧರಿಸಿ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

ಪತಿ ಕಿರುಕುಳ: ಗೃಹಿಣಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಸಿಡೇದಹಳ್ಳಿಯಲ್ಲಿ ಗೃಹಿಣಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿಯನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಪೂಜಾಶ್ರೀ (28) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ.

ಪತಿ ಕಿರುಕುಳ ನೀಡಿದ್ದರಿಂದ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಪತಿ ನಂದೀಶ್ ಸೇರಿ ಅವರ ಕುಟುಂಬಸ್ಥರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

ಮೂರು ವರ್ಷದ ಹಿಂದೆ ಮನೆಯವರ ನಿಶ್ಚಯದಂತೆ ಪೂಜಾಶ್ರೀ ಅವರು ನಂದೀಶ್ ಅವರನ್ನು ಮದುವೆ ಆಗಿದ್ದರು. ದಂಪತಿಗೆ ಹೆಣ್ಣು ಮಗುವಿದೆ. ದಂಪತಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.



ಪೂಜಾಶ್ರೀ

‘ನಂದೀಶ್ ಅವರು ಬೇರೊಂದು ಯುವತಿಯ ಜತೆಗೆ ಸಲುಗೆಯಿಂದ ಇದ್ದರು. ಈ ವಿಚಾರಕ್ಕೆ ದಂಪತಿ ನಡುವೆ ಗಲಾಟೆ ನಡೆಯುತ್ತಿತ್ತು’ ಎಂದು ಮೂಲಗಳು ಹೇಳಿವೆ.

‘ನಂದೀಶ್ ಅವರು ತವರು ಮನೆಯಿಂದ ವರದಕ್ಷಿಣೆ ತರುವಂತೆ ಜಗಳ ಶುರು ಮಾಡಿದ್ದರು. ಎರಡು ಬಾರಿ ರಾಜಿ ನಡೆದಿತ್ತು. ಕಿರುಕುಳ ನೀಡುವುದಿಲ್ಲ. ಉತ್ತಮ ಜೀವನ ನಡೆಸುವುದಾಗಿ ನಂದೀಶ್ ಅವರು ಭರವಸೆ ನೀಡಿದ್ದರು’ ಎಂದು ಪೂಜಾಶ್ರೀ ಪೋಷಕರು ದೂರು ನೀಡಿದ್ದಾರೆ.

‘ಮೂರು ದಿನಗಳ ಹಿಂದೆ ಮತ್ತೆ ಜಗಳ ಮಾಡಿ ನಂದೀಶ್ ಅವರು ಪತ್ನಿಯ ಮೇಲೆ ಹಲ್ಲೆ ಮಾಡಿದ್ದರು. ಕಿರುಕುಳ ತಾಳಲಾರದೇ ಪೂಜಾಶ್ರೀ ತವರು ಮನೆಗೆ ಬಂದಿದ್ದರು. ಈ ವಿಚಾರ ತಿಳಿದು ನಂದೀಶ್ ಅತ್ತೆ ಮನೆಗೆ ಬಂದು ಪತ್ನಿಯನ್ನು ವಾಪಸ್ ತನ್ನ ಮನೆಗೆ ಕರೆದುಕೊಂಡು ಹೋಗಿದ್ದರು. ಆದರೆ, ಭಾನುವಾರ ಬೆಳಿಗ್ಗೆ ಪೂಜಾಶ್ರೀ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣಕಾಸು ವಿಚಾರಕ್ಕೆ ಗಲಾಟೆ: ಸ್ನೇಹಿತನ ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಬೇಗೂರು ಬಳಿಯ ರಾಘವೇಂದ್ರ ಲೇಔಟ್‌ನಲ್ಲಿ ಸ್ನೇಹಿತರ ನಡುವೆ ಹಣಕಾಸು ವಿಚಾರಕ್ಕೆ ನಡೆದ ಜಗಳವು ಕೊಲೆಯಲ್ಲಿ ಅಂತ್ಯವಾಗಿದೆ.

ದೇವೇಂದ್ರ ಸಿಂಗ್ (43) ಕೊಲೆಯಾದರು.

ಕೊಲೆ ಪ್ರಕರಣದ ಸಂಬಂಧ ದೇವೇಂದ್ರ ಸಿಂಗ್ ಅವರ ಸ್ನೇಹಿತ, ಆರೋಪಿ ಮೇವಾ ಲಾಲ್ ಎಂಬಾತನನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ದೇವೇಂದ್ರ ಸಿಂಗ್ ಕಳೆದ ಎಂಟು ವರ್ಷದಿಂದ ನಗರದಲ್ಲಿ ನೆಲಸಿದ್ದರು. ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದರು. ಸ್ನೇಹಿತನಾದ ಮೇವಾ ಲಾಲ್‌ನನ್ನು ಮೂರು ದಿನಗಳ ಹಿಂದೆಯಷ್ಟೇ ನಗರಕ್ಕೆ ಕರೆದುಕೊಂಡು ಬಂದು ಪೇಂಟಿಂಗ್ ಕೆಲಸಕ್ಕೆ ಸೇರಿಸಿದ್ದರು. ರಾಘವೇಂದ್ರ ಲೇಔಟ್‌ನ ಸಣ್ಣ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು ಎಂದು ಪೊಲೀಸರು ಹೇಳಿದರು.

ಶನಿವಾರ ಬೆಳಿಗ್ಗೆ ಹಣ ಕೊಡುವಂತೆ ದೇವೇಂದ್ರ ಸಿಂಗ್ ಅವರನ್ನು ಆರೋಪಿ ಮೇವಾ ಲಾಲ್ ಕೇಳಿದ್ದ. ಆದರೆ, ಸಿಂಗ್ ಹಣ ಕೊಡಲು ನಿರಾಕರಿಸಿದ್ದರು. ಕೋಪಗೊಂಡ ಆರೋಪಿ ದೇವೇಂದ್ರ ಸಿಂಗ್ ಜತೆ ಜಗಳವಾಡಿ, ಮರದ ತುಂಡಿನಿಂದ ಹೊಡೆದಿದ್ದ. ತೀವ್ರ ಹಲ್ಲೆಯಿಂದ ಕುಸಿದು ಬಿದ್ದಿದ್ದ ದೇವೇಂದ್ರ ಸಿಂಗ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ರಸ್ತೆ ಮಧ್ಯೆ ಬಿಎಂಟಿಸಿ ಚಾಲಕರ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್‌ನ ಕಂಠೀರವ ಸ್ಟುಡಿಯೊ ರಸ್ತೆಯಲ್ಲಿ ಬಿಎಂಟಿಸಿ ಚಾಲಕರಿಬ್ಬರು ಬಸ್ ಅನ್ನು ನಡುರಸ್ತೆಯಲ್ಲೇ ನಿಲುಗಡೆ ಮಾಡಿ, ಗಲಾಟೆ ಮಾಡಿಕೊಂಡಿದ್ದಾರೆ.

ವಿದ್ಯುತ್ ಚಾಲಿತ ಬಸ್ ಚಾಲಕರ ನಡುವೆ ಗಲಾಟೆ ಆಗಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಗಲಾಟೆ ಬಿಡಿಸಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ. ಮುಂದೆ ಸಾಗಲು ಅವಕಾಶ ನೀಡಲಿಲ್ಲ ಎನ್ನುವ ವಿಚಾರಕ್ಕೆ ಚಾಲಕರು ಗಲಾಟೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಚಾಲಕರು ಆರೋಪ–ಪ್ರತ್ಯಾರೋಪ ಮಾಡಿಕೊಳ್ಳುತ್ತಿರುವ ದೃಶ್ಯದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಒಂದು ಬಸ್, ಮತ್ತೊಂದು ಬಸ್‌ಗೆ ತಾಗಿತು ಎನ್ನುವ ವಿಚಾರಕ್ಕೆ ಗಲಾಟೆ ಆಗಿದೆ. ಹಲವು ಬಾರಿ ಮನವಿ ಮಾಡಿದರೂ ಚಾಲಕರು ಗಲಾಟೆ ಮುಂದುವರಿಸಿದ್ದರು. ಇದರಿಂದ ಶಾಲೆಗೆ ತೆರಳುವ ವಿದ್ಯಾರ್ಥಿಗಳಿಗೂ ತೊಂದರೆಯಾಯಿತು’ ಎಂದು ಪ್ರಯಾಣಿಕರು ಹೇಳಿದರು.



ಪರಸ್ಪರ ಗಲಾಟೆ ಮಾಡುತ್ತಿದ್ದ ಬಿಎಂಟಿಸಿ ಸಿಬ್ಬಂದಿ

ಸುದ್ದಿ 2 ನಿಮಿಷ

ಜಿಲ್ಲಾ ವ್ಯಾಪ್ತಿಯಲ್ಲೂ 20ರಿಂದ ಜಾತಿವಾರು ಸಮೀಕ್ಷೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲೂ ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯಲಿದ್ದು, ಇದೇ 12 ರೊಳಗಾಗಿ ಜಿಯೋ ಟ್ಯಾಗಿಂಗ್ ಮುಗಿಸುವಂತೆ ಜಿಲ್ಲಾಧಿಕಾರಿ ಡಾ.ಜಿ.ಜಗದೀಶ್ ಸೂಚಿಸಿದರು.

ಜಿಲ್ಲಾ ಮಟ್ಟದ ಗಣತಿ ಸಮನ್ವಯ ಸಮಿತಿ ಸದಸ್ಯರೊಂದಿಗೆ ಸೋಮವಾರ ಸಭೆ ನಡೆಸಿದ ಅವರು, ಒಟ್ಟು ಜನಸಂಖ್ಯೆ ಮತ್ತು ವಲಸೆ ಬಂದಿರುವ ಜನರ ಸಮೀಕ್ಷೆ ನಡೆಸುವ ಬಗ್ಗೆ ದ್ವಂದ್ವ ಇದೆ. ಈ ಸಂಬಂಧ ಸಂಪೂರ್ಣ ಮಾರ್ಗಸೂಚಿ ಈವರೆಗೂ ಸಿದ್ಧವಾಗಿಲ್ಲದ ಕಾರಣ ಸರ್ಕಾರ ದಿಂದ ಸ್ಪಷ್ಟ ನಿರ್ದೇಶನ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 70 ಲಕ್ಷ ವಿದ್ಯುತ್ ಸಂಪರ್ಕಗಳು ಇವೆ. ಅವುಗಳಲ್ಲಿ ಶೇ 20ರಷ್ಟು ಮಾತ್ರ ಜಿಯೋ ಟ್ಯಾಗಿಂಗ್ ಕಾರ್ಯ ಪೂರ್ಣಗೊಂಡಿದೆ ಎಂದು ಬೆಸ್ಕಾಂ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಆರ್. ಯತೀಶ್ ಮಾತನಾಡಿ, ಜಿಯೋ ಟ್ಯಾಗಿಂಗ್ ರೀತಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಿಯೋಜಿಸಿರುವ ಕಡಿಮೆ ಗಣತಿದಾರರಿಂದ ಸಮೀಕ್ಷೆ ಪೂರ್ಣಗೊಳಿಸಲು ಸಮಯದ ಅಭಾವ ಎದುರಾಗಬಹುದು ಎಂದರು.

ನಿಗದಿತ ಅವಧಿಯೊಳಗೆ ಸಮೀಕ್ಷೆ ಪೂರ್ಣಗೊಳಿಸಲು ಹೆಚ್ಚಿನ ಗಣತಿ-ದಾರರನ್ನು ನೇಮಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಜಗದೀಶ್ ಸೂಚಿಸಿದರು.

ಅಲೆಮಾರಿಗಳು ಹೊರಗುಳಿಯದಿರಲಿ: ಆನೇಕಲ್ ತಾಲ್ಲೂಕಿನ ಹಕ್ಕಿಪಿಕ್ಕಿ ಕಾಲೋನಿ, ರಾಗಿಹಳ್ಳಿಯಲ್ಲಿ ವಾಸಿಸುವ ಪ್ರದೇಶಗಳು ನೆಟ್ ವರ್ಕ್‌ನಿಂದ ವಂಚಿತವಾಗಿವೆ. ಕೆಲವು ಸ್ಲಂಗಳಲ್ಲಿಯೂ ಅಧಿಕೃತ ವಿದ್ಯುತ್ ಸಂಪರ್ಕ ಇಲ್ಲದಿದ್ದು, ಇಂಥ ಪ್ರದೇಶಗಳು ಸಮೀಕ್ಷೆಯಿಂದ ಹೊರಗೆ ಉಳಿಯದಂತೆ ಎಚ್ಚರವಹಿಸಿ ಎಂದರು.



ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ. ನಾಯಕ್, ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ವಿಶ್ವನಾಥ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ನಿರುಪಮಾ ಮೌಳಿ ಹಾಜರಿದ್ದರು.

ಬಿಎಂಟಿಸಿ ಬಸ್ ಡಿಕ್ಕಿ ಅರ್ಚಕ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

ವೈಟ್‌ಫೀಲ್ಡ್ ಬಳಿಯ ಚನ್ನಸಂದ್ರ ಮುಖ್ಯರಸ್ತೆಯಲ್ಲಿ ಭಾನುವಾರ ರಾತ್ರಿ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಕ್ಕಿಯಾಗಿದ್ದರಿಂದ ಚನ್ನಸಂದ್ರ ನಿವಾಸಿ ಶಂಕರ್ ನಾರಾಯಣ ಶಾಸ್ತ್ರಿ (80) ಮೃತಪಟ್ಟಿದ್ದಾರೆ.

ಗಣೇಶ ದೇವಸ್ಥಾನದಲ್ಲಿ ಅರ್ಚಕರಾಗಿದ್ದ ಶಂಕರ್ ನಾರಾಯಣ ಶಾಸ್ತ್ರಿ ಅವರು ರಾತ್ರಿ 8 ಗಂಟೆ ಸುಮಾರಿಗೆ ದೇವಸ್ಥಾನದಲ್ಲಿ ಪೂಜೆ ಮುಗಿಸಿ, ನಡೆದುಕೊಂಡು ಮನೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ರಸ್ತೆ ದಾಟುತ್ತಿದ್ದಾಗ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಅಸ್ವಸ್ಥಗೊಂಡ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಿಎಂಟಿಸಿಯ 29ನೇ ಡಿಪೊಗೆ ಸೇರಿದ ಬಸ್, ಟಿನ್ ಫ್ಯಾಕ್ಟರಿ ಕಡೆಯಿಂದ ಚನ್ನಸಂದ್ರಕ್ಕೆ ತೆರಳುತ್ತಿತ್ತು. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂದು ತನಿಖೆಯಲ್ಲಿ ಗೊತ್ತಾಗಿದೆ. ಚಾಲಕನನ್ನು ಬಂಧಿಸಿ, ಬಸ್ ಜಪ್ತಿ ಮಾಡಲಾಗಿದೆ.

ಮಹದೇವಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದತ್ತಾಂಶ ವಿಶ್ಲೇಷಣೆ ವಿಜ್ಞಾನಿಗಳಿಗೆ ಆಹ್ವಾನ

ಬೆಂಗಳೂರು: ಚಂದ್ರಯಾನ–3 ರ ಲ್ಯಾಂಡರ್ ಮತ್ತು ರೋವರ್ ನಡೆಸಿರುವ ಪ್ರಯೋಗಗಳ ದತ್ತಾಂಶದ ವಿಶ್ಲೇಷಣೆ ಕಾರ್ಯದಲ್ಲಿ ಭಾಗವಹಿಸುವಂತೆ ವಿಜ್ಞಾನಿಗಳಿಗೆ ಇಸ್ರೊ ಆಹ್ವಾನ ನೀಡಿದೆ.

2023 ರ ಜುಲೈ 14 ರಂದು ಚಂದ್ರಯಾನ–3 ನೌಕೆಯನ್ನು ಉಡಾವಣೆ ಮಾಡಲಾಗಿತ್ತು.

ಈ ಪ್ರಯೋಗಗಳ ದತ್ತಾಂಶವನ್ನು ಆಧರಿಸಿ ವಿಶ್ಲೇಷಣೆ ನಡೆಸಲು ಪ್ರಸ್ತಾವನೆ ಸಲ್ಲಿಸುವಂತೆ ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳಿಗೆ ಇಸ್ರೊ ಮನವಿ ಮಾಡಿದೆ. ಪ್ರಸ್ತಾವನೆ ಸಲ್ಲಿಸಲು ಅಕ್ಟೋಬರ್ 21 ಕೊನೆಯ ದಿನ ಎಂದು ಹೇಳಿದೆ.



ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಎಐಎಂಎಸ್‌ಎಸ್ ರಾಜ್ಯ ಸೆಕ್ರೆಟರಿಯೇಟ್ ಸದಸ್ಯೆ ಮಧುಲತಾ, ಕಾರ್ಯದರ್ಶಿ ಎ.ಶಾಂತಾ ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು

ಚಿಕ್ಕಜಾಲಕ್ಕೆ ಮೆಟ್ರೊ ನಿಲ್ದಾಣ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಕ್ಕಜಾಲ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಮೆಟ್ರೊ ರೈಲು ನಿಲ್ದಾಣ ನಿರ್ಮಾಣ ಮಾಡಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ನಿರ್ದೇಶಿಸಬೇಕು’ ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಚಿಕ್ಕಜಾಲದ ನಿವಾಸಿ ಸಿ.ಆರ್. ನವೀನ್ ಕುಮಾರ್ ಸೇರಿದಂತೆ ಏಳು ಜನರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ಇಂತಹುದೇ ಸ್ಥಳದಲ್ಲಿ ಮೆಟ್ರೊ ರೈಲು ನಿಲ್ದಾಣ ನಿರ್ಮಾಣ ಮಾಡಬೇಕು ಎಂಬುದು ನ್ಯಾಯಾಲಯದ ಪರಿಶೀಲನೆಗೆ ಹೊರತಾಗಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ಮೆಟ್ರೊ ರೈಲು ಮಾರ್ಗ, ಅದರ ಕುರಿತ ನಕ್ಷೆ ರಚಿಸುವುದು ಮತ್ತು ಯಾವ ಯಾವ ಭಾಗಗಳಲ್ಲಿ ನಿಲ್ದಾಣ ಬರಬೇಕು ಎಂಬ ಅಂಶಗಳನ್ನು ಮೆಟ್ರೊ ನಿಗಮದ ಅಧಿಕಾರಿಗಳು, ಪ್ರಾಧಿಕಾರವೇ ನಿರ್ಧರಿಸುತ್ತದೆ. ಇಂತಹ ವಿಚಾರಗಳಲ್ಲಿ ನ್ಯಾಯಾಲಯ ತೀರ್ಮಾನ ಪ್ರಕಟಿಸಲು ಅವಕಾಶವಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಕೆ.ಆರ್ ಪುರದಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ‘ನಮ್ಮ ಮೆಟ್ರೊ–2ಬಿ’ ಹಂತದ ನೀಲಿ ಮಾರ್ಗದ ಚಿಕ್ಕಜಾಲದಲ್ಲಿ ಮೆಟ್ರೊ ರೈಲು ನಿಲ್ದಾಣ ನಿರ್ಮಾಣ ಮಾಡಬೇಕು ಎಂದು 2023-24ರಲ್ಲಿ ನಿರ್ಧರಿಸಲಾಗಿತ್ತು. ಆದರೆ, ನಿರ್ಮಾಣ ಮಾಡುವ ಪ್ರಸ್ತಾವವನ್ನು ಕೈ ಬಿಡಲಾಗಿದ್ದು, ಯಾವ ಕಾರಣಕ್ಕಾಗಿ ಎಂದು ತಿಳಿಸಿಲ್ಲ. ಆದ್ದರಿಂದ, ಈ ಹಿಂದೆ ಕೈಗೊಂಡಿದ್ದ ನಿರ್ಧಾರಂತೆ ಚಿಕ್ಕಜಾಲದಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣ ಮಾಡುವಂತೆ ಬಿಎಂಆರ್‌ಸಿಎಲ್‌ಗೆ ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಎಚ್‌. ಅನಿಲ್ ಗೌಡ ವಿರುದ್ಧ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಆರೋಪ

ಆತುರದ ಕ್ರಮ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಅಕ್ರಮ ಚಟುವಟಿಕೆ ಆರೋಪದ ಪ್ರಕರಣದಲ್ಲಿ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರ ಆರ್ಥಿಕ ವ್ಯವಹಾರಗಳ ಪ್ರಮುಖ ಪಾಲುದಾರ ಎಚ್.ಅನಿಲ್ ಗೌಡ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ತಾಕೀತು ಮಾಡಿದೆ.

‘ಇ.ಡಿ ಅಧಿಕಾರಿಗಳು ನನಗೆ ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು’ ಎಂದು ಕೋರಿ ವಕೀಲರೂ ಆದ ರಾಜರಾಜೇಶ್ವರಿ ನಗರದ ಕಾಂಗ್ರೆಸ್ ಮುಖಂಡ ಹನುಮಂತರಾಯಪ್ಪ ಅವರ ಪುತ್ರ ಎಚ್.ಅನಿಲ್ ಗೌಡ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಇ.ಡಿ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ‘ಅರ್ಜಿದಾರರು ವಕೀಲರಾಗಿದ್ದಾರೆ ಎಂಬ ಕಾರಣಕ್ಕೆ ಅವರಿಗೆ ಇ.ಡಿ ಸಮನ್ಸ್ ಜಾರಿಗೊಳಿಸಿಲ್ಲ. ಬದಲಿಗೆ ವೀರೇಂದ್ರ ಅವರ ಕಂಪನಿ ಸೇರಿದಂತೆ ಹಲವು ವಾಣಿಜ್ಯ ಕಂಪನಿಗಳಲ್ಲಿ ಅನಿಲ್ ಗೌಡ ಪ್ರಮುಖ ಪಾಲುದಾರಾಗಿದ್ದಾರೆ. ಅವರ ವಿರುದ್ಧ ಅಕ್ರಮವಾಗಿ ಹಣ ಹೂಡಿಕೆ ಮಾಡಿದ ಗಂಭೀರ ಆರೋಪವಿದೆ’ ಎಂದರು.

‘ಯಾವುದೇ ವ್ಯಕ್ತಿಯ ವಿರುದ್ಧ ಈ ರೀತಿಯ ಆರೋಪ ಬಂದಾಗ ಸಮನ್ಸ್ ಜಾರಿಗೊಳಿಸುವುದು ಕಾನೂನು ಬದ್ಧ ಪ್ರಕ್ರಿಯೆ. ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರುವುದು ಸುತಾರಾಂ ಒಪ್ಪತಕ್ಕ ವಿಷಯವಲ್ಲ. ಈ ಪ್ರಕರಣದಲ್ಲಿ ಅರ್ಜಿದಾರರು ತನಿಖಾಧಿಕಾರಿಗಳ ದಾರಿ ತಪ್ಪಿಸಲು ಯತ್ನಿಸುತ್ತಿದ್ದಾರೆ’ ಎಂದು ಬಲವಾಗಿ ಆಕ್ಷೇಪಿಸಿ ಅರ್ಜಿ ವಜಾಗೊಳಿಸುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರ ಪರ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ವಿಕಾಸ್ ಪಹ್ವಾ, ‘ಇ.ಡಿ ಪರ ವಕೀಲರ ವಾದದಲ್ಲಿ ಯಾವುದೇ ಹುರುಳಿಲ್ಲ. ನ್ಯಾಯಪೀಠ ಅವರ ವಾದವನ್ನು ಒಪ್ಪಿಕೊಂಡರೆ ಅರ್ಜಿದಾರರ ಬದುಕುವ ಹಕ್ಕು ಮತ್ತು ಸಂವಿಧಾನದ 21ನೇ ವಿಧಿಯಡಿ ಎಲ್ಲರಿಗೂ ಒದಗಿಸಲಾಗಿರುವ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ. ನಮ್ಮ ಕಕ್ಷಿದಾರರಿಗೂ ಕಂಪನಿಗೂ ಯಾವುದೇ ಸಂಬಂಧವಿಲ್ಲ. ಒಬ್ಬ ವಕೀಲನಾಗಿ ಅವರು ಶಾಸಕ ವೀರೇಂದ್ರ ಅವರಿಗೆ ಸಲಹೆ ನೀಡಿದ್ದಾರಷ್ಟೇ. ಈ ಹೇಳಿಕೆಗೆ ಅರ್ಜಿದಾರರು ಬದ್ಧರಾಗಿದ್ದಾರೆ’ ಎಂದು ಪ್ರತಿಪಾದಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶವನ್ನು ಕಾಯ್ದಿರಿಸಿತು.

ಸಂಪರ್ಕಿತ ವಿಶ್ವಕ್ಕಾಗಿ ಭಾರತದ ಸೆಮಿಕಂಡಕ್ಟರ್ ನೆಗೆತ



ಭಾರತದ ಸೆಮಿಕಂಡಕ್ಟರ್ ಉತ್ಪಾದನಾ ಇಕೊಸಿಸ್ಟಮ್ ವ್ಯವಸ್ಥೆಗೆ ಉತ್ತೇಜನ

ಇಂಡಿಯಾ ಸೆಮಿಕಂಡಕ್ಟರ್ ಮಿಷನ್ (ಐಎಸ್ಎಂ) ಮುಖಾಂತರ ಸುಮಾರು ರೂ. 1.60 ಲಕ್ಷ ಕೋಟಿಗೂ ಅಧಿಕ ಸರ್ಕಾರಿ ಹೂಡಿಕೆಯ ಬೆಂಬಲದೊಂದಿಗೆ ಭಾರತ ಸರ್ಕಾರದಿಂದ 10 ಯೋಜನೆಗಳಿಗೆ ಅನುಮೋದನೆ

ಭಾರತ ಸರ್ಕಾರದ ಇನ್ಸೆಂಟೀವ್ ಸ್ಕೀಮ್ ಲಿಂಕ್ಡ್ ವಿನ್ಯಾಸವುಳ್ಳ ಭವಿಷ್ಯದ ಚಿಪ್‌ಗಳಿಗೆ ಪ್ರೋತ್ಸಾಹ

ಚಿಪ್ ವಿನ್ಯಾಸಗೊಳಿಸುವ 23 ಸ್ಟಾರ್ಟ್‌ಅಪ್‌ಗಳಿಗೆ ಆರ್ಥಿಕ ನೆರವಿನೊಂದಿಗೆ ಅನುಮೋದನೆ

ಇಲೆಕ್ಟ್ರಾನಿಕ್ ಡಿಸೈನ್ ಆಟೋಮೇಶನ್ (ಇಡಿಎ) ಟೂಲ್ಸ್ ಹೊಂದಿರುವ 280+ ಸಂಸ್ಥೆಗಳಿಗೆ ಮತ್ತು 72 ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲ

2025ರ ಅವಧಿಯಲ್ಲಿ ಸ್ಟಾರ್ಟ್‌ಅಪ್‌ಗಳಿಂದ ಮತ್ತು ವಿದ್ಯಾರ್ಥಿಗಳಿಂದ 11.5 ಮಿಲಿಯನ್ ಗಂಟೆಗಳ ಇಡಿಎ ಟೂಲ್‌ಗಳ ಬಳಕೆ

ಚಿಪ್‌ಇನ್ ಕೇಂದ್ರಗಳು ವಿಶ್ವದ ಅತಿದೊಡ್ಡ ಕೇಂದ್ರಿಕೃತ ಇಡಿಎ ಟೂಲ್‌ಗಳ ಬಳಕೆದಾರರ ಸಮೂಹವನ್ನು ಸೃಷ್ಟಿಸಿವೆ

ಭಾರತ: ಜಾಗತಿಕ ಸೆಮಿಕಂಡಕ್ಟರ್ ಪೂರೈಕೆ ಸರಣಿ ಇಕೊಸಿಸ್ಟಮ್‌ನಲ್ಲಿ ವಿಶ್ವಾಸರ್ಹ ಮತ್ತು ಭರವಸೆದಾಯಕ ಪಾಲುದಾರ

ಯುಎಸ್ಎ, ಜಪಾನ್, ಇಯು, ಸಿಂಗಪೂರ್ ಜೊತೆಗೆ ಸಹಭಾಗಿತ್ವಕ್ಕೆ ಸಂಬಂಧಿತ ಅಂತರ್‌ರಾಷ್ಟ್ರೀಯ ಸಹಕಾರ ಒಪ್ಪಂದಗಳು

ಯುಎಸ್ಎ, ತೈವಾನ್, ಸಿಂಗಪೂರ್, ಮಲೇಷ್ಯಾ ಮತ್ತು ಇನ್ನಿತರ ದೇಶಗಳೊಂದಿಗೆ ನಿರಂತರ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಸಹಕಾರ ಚಟುವಟಿಕೆಗಳು

ಎಲ್ಲರಿಗೂ ಆತ್ಮೀಯ ಸ್ವಾಗತ

SEMICON® India 2025

BUILDING THE NEXT SEMICONDUCTOR POWERHOUSE



ಉದ್ಘಾಟಕರು

ನರೇಂದ್ರ ಮೋದಿ

ಮಾನ್ಯ ಪ್ರಧಾನಮಂತ್ರಿ

ಸೆಪ್ಟೆಂಬರ್ 2 – 4, 2025 | ಬೆಳಗ್ಗೆ 10:00 ಗಂಟೆ ಬಳಿಕ

ಯಶೋಭೂಮಿ (ಇಂಡಿಯಾ ಇಂಟರ್‌ನ್ಯಾಷನಲ್ ಕನ್ವೆನ್ಷನ್ & ಎಕ್ಸ್‌ಪೋ ಸೆಂಟರ್), ನವದೆಹಲಿ

ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿರಿ

ಸೆಮಿಕಾನ್ ಇಂಡಿಯಾ 2025 ನೇರಪ್ರಸಾರ ಇಲ್ಲಿ ವೀಕ್ಷಿಸಿರಿ: https://www.youtube.com/@indiasemiconductormission/streams

CBC 06174/15/0002/2526

ಪ್ರಜಾವಾಣಿ

ಚಿಟಿಕೆ ಸುದ್ದಿ

ಈದ್ ಮಿಲಾದ್ ಅಂತರರಾಷ್ಟ್ರೀಯ ಸಮಾವೇಶ 5ಕ್ಕೆ

ಬೆಂಗಳೂರು: ಈದ್ ಮಿಲಾದ್ ಹಬ್ಬದ ಅಂಗವಾಗಿ ಬೆಂಗಳೂರಿನ ಜಂಟಿ ಮಿಲಾದ್ ಸಮಿತಿಯಿಂದ ಸೆ. 5ರಂದು ಮಧ್ಯಾಹ್ನ 3ಕ್ಕೆ ಅರಮನೆ ಮೈದಾನದ ಗೇಟ್ ಸಂಖ್ಯೆ-01ರಲ್ಲಿ ಅಂತರರಾಷ್ಟ್ರೀಯ ಸಮಾವೇಶ ಆಯೋಜಿಸಲಾಗಿದೆ.

ವಕ್ಫ್ ಬೋರ್ಡ್ ಉಪಾಧ್ಯಕ್ಷ ಮೌಲಾನಾ ಎನ್.ಕೆ. ಶಾಫಿ ಸಾ-ಆದಿ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮಹಮ್ಮದ್ ಪೈಗಂಬರ್ ಅವರ ಜನ್ಮದಿನೋತ್ಸವದ ಅಂಗವಾಗಿ ಸಮುದಾಯದಲ್ಲಿ ಪರಿವರ್ತನೆ ತರುವ ಕೆಲಸ ಮಾಡಲಾಗುತ್ತಿದೆ. ಈ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹಸಚಿವ ಜಿ. ಪರಮೇಶ್ವರ, ಸಚಿವ ಜಮೀರ್ ಅಹ್ಮದ್ ಪಾಲ್ಗೊಳ್ಳಲಿದ್ದಾರೆ' ಎಂದು ಮಾಹಿತಿ ನೀಡಿದರು.

ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ: ಜಲಜಾ ಆಯ್ಕೆ



ಬೆಂಗಳೂರು: ಪಂಡಿತ ರತ್ನ ಎ.ಶಾಂತಿರಾಜ ಟ್ರಸ್ಟ್ ನೀಡುವ ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿಗೆ ತುಮಕೂರಿನ ಬ್ರಹ್ಮಚಾರಿಣಿ ಜಲಜಾ ಜೈನ್ ಅವರನ್ನು ಆಯ್ಕೆ ಮಾಡಲಾಗಿದೆ.

ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಜಲಜಾ ಅವರ ಸಾಧನೆ ಪರಿಗಣಿಸಿ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಂ.ಜೆ. ಇಂದ್ರ ಕುಮಾರ್ ಅವರ ನೇತೃತ್ವದ ಆಯ್ಕೆ ಸಮಿತಿ ಸರ್ವಾನುಮತದಿಂದ ಆಯ್ಕೆ ಮಾಡಿದೆ.

ಪ್ರಶಸ್ತಿಯು ₹25 ಸಾವಿರ ಗೌರವಧನ, ಪ್ರಶಸ್ತಿ ಪತ್ರ ಒಳಗೊಂಡಿದೆ. ಅಕ್ಟೋಬರ್ 12ರಂದು ಬೆಂಗಳೂರಿನ ಜೈನ ಭವನದಲ್ಲಿ ಜರುಗಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಎಸ್.ಜಿತೇಂದ್ರ ಕುಮಾರ್ ತಿಳಿಸಿದ್ದಾರೆ.

ಜಿಬಿಎ ನಿಗಾದಡಿ ಪಾಲಿಕೆಗಳ ಕಾರ್ಯ

3,050 ಐದು ನಗರ ಪಾಲಿಕೆಗಳ ಎಂಜಿನಿಯರ್ ವಿಭಾಗದ ಸಿಬ್ಬಂದಿ	870 ಐದು ನಗರ ಪಾಲಿಕೆಗಳಲ್ಲಿರುವ ಎಂಜಿನಿಯರ್‌ಗಳು	22,000 ಐದು ನಗರ ಪಾಲಿಕೆಗಳಲ್ಲಿ ಪೌರಕಾರ್ಮಿಕರು	23,551 ಐದು ನಗರ ಪಾಲಿಕೆಗಳಲ್ಲಿ ತ್ಯಾಜ್ಯ ನಿರ್ವಹಣೆ ಸಿಬ್ಬಂದಿ	5,340 ಉತ್ತರ ನಗರ ಪಾಲಿಕೆ	4,815 ದಕ್ಷಿಣ ನಗರ ಪಾಲಿಕೆ	4,815 ಕೇಂದ್ರ ನಗರ ಪಾಲಿಕೆ	3,766 ಪೂರ್ವ ನಗರ ಪಾಲಿಕೆ	4,815 ಪಶ್ಚಿಮ ನಗರ ಪಾಲಿಕೆ

ಮುಖ್ಯ ಆಯುಕ್ತರ ಅಡಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು

• ಆರ್.ಮಂಜುನಾಥ್

ಬೆಂಗಳೂರು: ನಗರ ಪಾಲಿಕೆಗಳ ಆಡಳಿತದಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳುತ್ತಿದ್ದರೂ, ಚುನಾವಣೆ ಆಗುವವರೆಗೂ ಮುಖ್ಯ ಆಯುಕ್ತರ ಅಡಿಯಲ್ಲೇ ಐದೂ ನಗರ ಪಾಲಿಕೆಗಳ ಆಯುಕ್ತರು ಕಾರ್ಯ ನಿರ್ವಹಿಸಲಿದ್ದಾರೆ.

ಜಿಬಿಎ ಹಾಗೂ ನಗರ ಪಾಲಿಕೆಯ ಪ್ರಸ್ತಾವಿತ ಕಾರ್ಯನಿರ್ವಹಣೆಯ ಪಟ್ಟಿಯಂತೆ (ಆರ್ಗನೈಸೇಷನ್ ಚಾರ್ಟ್) ಬೃಹತ್ ಕಾಮಗಾರಿಗಳನ್ನು ನಿರ್ವಹಿಸುವ ಬಿ-ಸ್ಮೈಲ್ ಸೇರಿದಂತೆ ಜಿಬಿಎನಲ್ಲಿ ತಾಂತ್ರಿಕ ಜಾಗೃತಿ ಕೋಶ (ಟಿವಿಸಿಸಿ), ಗುಣಮಟ್ಟ ನಿಯಂತ್ರಣ (ಕ್ಯೂಸಿ), ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್), ಯೋಜನೆ ವಿಭಾಗಗಳು ಜಿಬಿಎ ಮುಖ್ಯ ಆಯುಕ್ತರ ಅಡಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಟಿವಿಸಿಸಿ, ಕ್ಯೂಸಿ, ಬಿಎಸ್‌ಡಬ್ಲ್ಯುಎಂಎಲ್, ಯೋಜನೆ ವಿಭಾಗಗಳ ಮುಖ್ಯ ಎಂಜಿನಿಯರ್‌ಗಳಿಗೆ ತಲಾ ಒಬ್ಬರು ಅಧೀಕ್ಷಕ ಎಂಜಿನಿಯರ್ (ಎಸ್‌ಇ), ತಲಾ 10 ಕಾರ್ಯಪಾಲಕ ಎಂಜಿನಿಯರ್ (ಇಇ), ತಲಾ 20 ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ), ತಲಾ 20 ಸಹಾಯಕ ಎಂಜಿನಿಯರ್ (ಎಇ) ಇರಲಿದ್ದಾರೆ. ಬಿ-ಸ್ಮೈಲ್‌ನಲ್ಲಿ ಸಿಒಒ ಜೊತೆಗೆ ನಾಲ್ವರು ಮುಖ್ಯ ಎಂಜಿನಿಯರ್, ನಾಲ್ವರು ಎಸ್‌ಇ, 20 ಇಇ, 30 ಎಇಇ, 50 ಎಇಗಳಿರುತ್ತಾರೆ.

ಜಿಬಿಎ ಮುಖ್ಯ ಆಯುಕ್ತರಡಿ ಐದು ಪಾಲಿಕೆಗಳ ಆಯುಕ್ತರು ಕಾರ್ಯ ನಿರ್ವಹಿಸಬೇಕಿದೆ. ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಕಂದಾಯ, ಆಸ್ತಿ, ಮಾರುಕಟ್ಟೆ, ಆಡಳಿತ, ಹಣಕಾಸು, ಜಾಹೀರಾತು, ಸರ್ವೆ, ಮಾಹಿತಿ ತಂತ್ರಜ್ಞಾನ ವಿಭಾಗದ ಜವಾಬ್ದಾರಿ ನೀಡಲಾಗಿದೆ. ಜಂಟಿ ಆಯುಕ್ತರಿಗೆ ಯೋಜನೆ, ಆರೋಗ್ಯ-ಸ್ವಾಸ್ಥ್ಯ, ಶಿಕ್ಷಣ, ಅರಣ್ಯ-ತೋಟಗಾರಿಕೆ- ಕೆರೆ, ನಗರ ಯೋಜನೆ, ಟಿಡಿಆರ್, ಕಲ್ಯಾಣ ವಿಭಾಗಗಳನ್ನು ಹಂಚಲಾಗಿದೆ. ಜಿಬಿಎನಲ್ಲಿರುವ ವಿಶೇಷ ಆಯುಕ್ತರು ಹೆಚ್ಚುವರಿ- ಜಂಟಿ ಆಯುಕ್ತರು ಹೊಂದಿರುವ ಜವಾಬ್ದಾರಿಗಳನ್ನೇ ಹೊಂದಿದ್ದು, ಅವರು ಇವರ ಮೇಲೆ ಹಿಡಿತ ಸಾಧಿಸಲಿದ್ದಾರೆ.

ನಗರ ಪಾಲಿಕೆಗಳಲ್ಲಿ ತಲಾ ಮೂವರು ಮುಖ್ಯ ಎಂಜಿನಿಯರ್‌ಗಳಿರುತ್ತಾರೆ. ಯೋಜನೆ ಹಾಗೂ ವಲಯ ಮಟ್ಟದ ಕಾಮಗಾರಿಗಳನ್ನು ಇವರು ನಿರ್ವಹಿಸಲಿದ್ದಾರೆ. ವಾರ್ಡ್ ಎಂಜಿನಿಯರಿಂಗ್ ಕಾಮಗಾರಿ, ತ್ಯಾಜ್ಯ ನಿರ್ವಹಣೆ, ಬೀದಿ ದೀಪ, 50 x 80 ಅಡಿಗಳವರೆಗಿನ ಕಟ್ಟಡಗಳಿಗೆ ನಕ್ಷೆ ಅನುಮೋದನೆಗೆ ಸಿಇ- ವಾರ್ಡ್ ಎಂಬ ಹುದ್ದೆ ಸೃಷ್ಟಿಸಲಾಗಿದೆ.



ಮುಖ್ಯಾಂಶಗಳು

- ಹೆಚ್ಚುವರಿ- ಜಂಟಿ ಆಯುಕ್ತರ ಮೇಲೆ ವಿಶೇಷ ಆಯುಕ್ತರು
- ಜಿಬಿಎ ಮುಖ್ಯ ಆಯುಕ್ತರ ಅಡಿ ಎಲ್ಲರ ಕಾರ್ಯ ಚಟುವಟಿಕೆ

ಕಾರ್ಯಾಚರಣೆಗೆ ಸಿದ್ಧತೆ: ಮಹೇಶ್ವರ್ ರಾವ್

'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಕಾರ್ಯಕಲಾಪಗಳನ್ನು ನಡೆಸಲು ಸಜ್ಜಾಗಿದ್ದು, ಐದು ನಗರ ಪಾಲಿಕೆಗಳ ರಚನೆಯ ಅಧಿಸೂಚನೆ ಹೊರಬೀಳುತ್ತಿದ್ದಂತೆಯೇ ನಿಯೋಜಿತ ಅಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'198 ವಾರ್ಡ್‌ಗಳು ನಗರ ಪಾಲಿಕೆಗಳಿಗೆ ವಿಂಗಡಣೆಯಾಗಲಿದ್ದು, ಅದರಂತೆಯೇ ಕಾರ್ಯನಿರ್ವಹಿಸಲಿವೆ. ಕಾಮಗಾರಿಗಳು ಅಥವಾ ಬಿಲ್ ಪಾವತಿಗೆ ಅಷ್ಟೇನು ತೊಂದರೆಯಾಗದು. ಬಿಬಿಎಂಪಿ ಬಜೆಟ್ ಅನ್ನೇ ಮುಂದುವರಿಸಲಾಗುತ್ತದೆ. ನಗರ ಪಾಲಿಕೆಗಳು ರಚನೆಗೊಂಡ ಮೇಲೆ ಅವರಿಗೆ ಅನುಸಾರವಾಗಿ ಪುನರ್ ವಿಮರ್ಶೆ ಮನವಿಯನ್ನು ಸಲ್ಲಿಸಿದರೆ ಜಿಬಿಎ ಅದನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತದೆ' ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

'ಉಪ ಆಯುಕ್ತರಿಗೆ ಆಯುಕ್ತರ ಹೊಣೆ'

ಬೆಂಗಳೂರು: 'ಆಡಳಿತಾತ್ಮಕ ಅನುಭವ ಇರುವ, ಉಪ ಆಯುಕ್ತರುಗಳಾಗಿ ಕೆಲಸ ನಿರ್ವಹಿಸಿರುವ ಹಿರಿಯ ಅಧಿಕಾರಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ಪಾಲಿಕೆಗಳಿಗೆ ಆಯುಕ್ತರನ್ನಾಗಿ ನೇಮಿಸಲು ತೀರ್ಮಾನಿಸಲಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾವ, ಯಾವ ಅಧಿಕಾರಿಗಳನ್ನು ನಿಯೋಜನೆ ಮಾಡಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು' ಎಂದರು.

'ಸ್ಥಳೀಯವಾಗಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನೇ ಪಾಲಿಕೆಗಳಿಗೆ ನಿಯೋಜನೆ ಮಾಡಲಾಗುವುದು' ಎಂದೂ ಅವರು ಹೇಳಿದರು.

ಆಯಾ ಪಾಲಿಕೆಗೆ ಎ, ಬಿ, ಸಿ, ಡಿ ನೌಕರರು

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎ, ಬಿ, ಸಿ, ಡಿ ವೃಂದದ ನೌಕರರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಚೇರಿಯು ಹೊಸದಾಗಿ ರಚನೆಯಾಗುವ ಯಾವ ನಗರ ಪಾಲಿಕೆಗೆ ಬರುತ್ತದೋ ಅದರಡಿ ಕೆಲಸ ನಿರ್ವಹಿಸುವಂತೆ ನಗರಾಭಿವೃದ್ಧಿ ಇಲಾಖೆ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಜಿಬಿಎ ಅಸ್ತಿತ್ವಕ್ಕೆ ಬಂದಿರುವುದರಿಂದ ಬಿಬಿಎಂಪಿ ನಿರಶನಗೊಂಡಿರುವುದರಿಂದ, ಬಿಬಿಎಂಪಿಗೆ ಮಂಜೂರಾಗಿರುವ ವಿವಿಧ ವೃಂದದ ಹುದ್ದೆಗಳನ್ನು ಮರುಹಂಚಿಕೆ ಮಾಡಲಾಗಿದೆ.

ಜಿಬಿಎಗೆ ಅಥವಾ ಇತರೆ ನಗರ ಪಾಲಿಕೆಗೆ ವರ್ಗಾಯಿಸಲು ನಿರ್ದಿಷ್ಟ ಆದೇಶ ಹೊರಡಿಸಿದರೆ ಮಾತ್ರ ಅವರು ಬೇರೆಡೆಗೆ ಹೋಗಬಹುದು. 198 ವಾರ್ಡ್ ಕಚೇರಿಗಳು ಯಾವ ನಗರ ಪಾಲಿಕೆಗಳ ವ್ಯಾಪ್ತಿಗೆ ಬರುತ್ತವೋ ಅಲ್ಲಿಯೇ ಆ ಸಿಬ್ಬಂದಿಯ ಕೆಲಸ ಮುಂದುವರಿಯುತ್ತದೆ.

ಬಿಬಿಎಂಪಿ ಕೇಂದ್ರ ಕಚೇರಿ ಅಥವಾ ಯಾವುದೇ ಕಚೇರಿಯಲ್ಲಿರುವ ಸಿಬ್ಬಂದಿಯ ಹುದ್ದೆ ಮುಂದುವರಿಸಿರುವ ಆದೇಶವಿಲ್ಲದಿದ್ದರೆ, ಅಂತಹವರು ಸರ್ಕಾರ ಅಥವಾ ಜಿಬಿಎಯಲ್ಲಿ ಸ್ಥಳ ನಿರೀಕ್ಷಣೆಗಾಗಿ ವರದಿ ಮಾಡಿಕೊಳ್ಳಬೇಕು. ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಅಧಿಕಾರಿಗಳು ಜಿಬಿಎ ಮುಖ್ಯ ಆಯುಕ್ತರ ಬಳಿ ವರದಿ ಮಾಡಿಕೊಂಡು, ಐದು ನಗರ ಪಾಲಿಕೆಗಳು, ಬಿ-ಸ್ಮೈಲ್ ಗೆ ಕಡತಗಳನ್ನು ವರ್ಗಾಯಿಸುವ ಪೂರ್ಣ ಜವಾಬ್ದಾರಿ ನಿಭಾಯಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವ್ಯವಸ್ಥಾಪಕರು, ಎಫ್‌ಡಿಎ, ಎಸ್‌ಡಿಎ, ಸ್ಟೆನೋಗ್ರಾಫರ್, ಚಾಲಕರು ಮತ್ತು ಗ್ರೂಪ್-ಡಿ ನೌಕರರು (1,820), ಲೆಕ್ಕಾಧಿಕಾರಿಗಳು (44), ಆಡಳಿತ ವಿಭಾಗ (3), ಕ್ಲಿನಿಕಲ್ ಹೆಲ್ತ್, ಕೌನ್ಸಿಲ್, ಶಿಕ್ಷಣ, ಮುಖ್ಯ- ಅಧೀಕ್ಷಕ- ಕಾರ್ಯಪಾಲಕ, ಸಹಾಯಕ, ಕಿರಿಯ ಎಂಜಿನಿಯರ್ ಗಳು, ಅರಣ್ಯ, ಕಾನೂನು ಘಟಕ, ತೋಟಗಾರಿಕೆ, ಮಾಹಿತಿ ತಂತ್ರಜ್ಞಾನ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಸಂಪರ್ಕಾಧಿಕಾರಿ, ಕಂದಾಯ, ಆಸ್ತಿ, ಜಾಹೀರಾತು, ಟಿಡಿಆರ್, ಮಾರುಕಟ್ಟೆ, ನೈರ್ಮಲ್ಯ, ಪೌರಕಾರ್ಮಿಕರು, ಸರ್ವೆ, ನಗರ ಯೋಜನೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಜಿಬಿಎ ಹಾಗೂ ಐದು ನಗರ ಪಾಲಿಕೆಗಳು, ವಲಯ ಕಚೇರಿಗಳಿಗೆ ನಿಯೋಜಿಸಿ ಆದೇಶ ಹೊರಡಿಸಲಾಗಿದೆ.

'ಟೇಬಲ್‌ಗಳು ಹೆಚ್ಚಾಗಲಿವೆ'

ನಗರ ಪಾಲಿಕೆಯ ಆಡಳಿತದ ಮೇಲೆ ಜಿಬಿಎ ನಿಯಂತ್ರಣವಿರುವುದಿಲ್ಲ ಎಂದು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ ತಿದ್ದುಪಡಿಯನ್ನೂ ತರಲಾಗಿದೆ. ಆದರೆ, ಈಗ ಪ್ರಸ್ತಾಪಿಸಿರುವ ಕಾರ್ಯಾಚರಣೆ ಪಟ್ಟಿಯಲ್ಲಿ ನಗರ ಪಾಲಿಕೆಗಳ ಎಲ್ಲ ಕಾರ್ಯವ್ಯಾಪ್ತಿಯೂ ಜಿಬಿಎ ಆಣತಿಯಂತೆಯೇ ನಡೆಯಲಿದೆ. ಮುಖ್ಯ ಆಯುಕ್ತರಲ್ಲದೆ, ಜಿಬಿಎಯಲ್ಲಿರುವ ವಿಶೇಷ ಆಯುಕ್ತರು ಪಾಲಿಕೆಗಳ ಎಲ್ಲ ವಿಭಾಗಗಳ ಮೇಲೆ ನಿಗಾ ವಹಿಸಿ, ನಿಯಂತ್ರಣ ಸಾಧಿಸಲಿದ್ದಾರೆ.

'ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆದು, ಕಾರ್ಪೊರೇಟರ್‌ಗಳು ಬರುವವರೆಗೂ ಅಧಿಕಾರಿಗಳದ್ದೇ ಆಟವಾಗಿರುತ್ತದೆ. ಈಗಾಗಲೇ ಬಿಬಿಎಂಪಿಗೆ ಚುನಾವಣೆಯಾಗದೆ ಐದು ವರ್ಷವಾಗುತ್ತಿದೆ. ಗ್ರೇಟರ್ ಬೆಂಗಳೂರಾಗಿ ಐದು ನಗರ ಪಾಲಿಕೆಗಳಾದ ಮೇಲೆ ಕಾಮಗಾರಿಯೊಂದಕ್ಕೆ ಹಲವು ಅಧಿಕಾರಿಗಳ ಒಪ್ಪಿಗೆ ಪಡೆಯುವ ಟೇಬಲ್‌ಗಳು ಹೆಚ್ಚಾಗಲಿವೆ' ಎಂದು ಇಬ್ಬರು ಮಾಜಿ ಮೇಯರ್‌ಗಳು ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ವ್ಯಗ್ರ ನಾಯಿಗಳಿಗೆ ವೀಕ್ಷಣಾ ಕೇಂದ್ರ: ಲೋಕಾಯುಕ್ತ ಸೂಚನೆ

ಬೆಂಗಳೂರು: ಬೀದಿ ನಾಯಿಗಳನ್ನು ಹಿಡಿಯಲು ಬೋನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕು ಮತ್ತು ವ್ಯಗ್ರ ನಾಯಿಗಳ ಮೇಲೆ ನಿಗಾ ವಹಿಸಲು ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿಯ ಪಶು ಸಂಗೋಪನಾ ಸಹಾಯಕ ನಿರ್ದೇಶಕ, ಘನ ತ್ಯಾಜ್ಯ ನಿಯಂತ್ರಣಾ ಮಂಡಳಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬೀದಿ ನಾಯಿಗಳನ್ನು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸುವ ಬಗ್ಗೆ ಗಮನ ಹರಿಸಬೇಕು ಎಂದು ಪಾಲಿಕೆ ಅಧಿಕಾರಿಗಳು ತಾಕೀತು ಮಾಡಿದರು.

ಇದಕ್ಕೂ ಮುನ್ನ ಸಭೆಗೆ ಮಾಹಿತಿ ನೀಡಿದ ಪಶು ಸಂಗೋಪನೆ ಸಹಾಯಕ ನಿರ್ದೇಶಕ, ರಾಜರಾಜೇಶ್ವರಿ ನಗರ ವಲಯದಲ್ಲಿ ಒಟ್ಟು 38,053 ಬೀದಿ ನಾಯಿಗಳಿದ್ದು, ಇವುಗಳ ಪೈಕಿ ಕಳೆದ ವರ್ಷ 11,493 ಹಾಗೂ ಈ ವರ್ಷ 2,224 ಬೀದಿ ನಾಯಿಗಳನ್ನು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗಿದೆ. ಶೇಕಡ 60 ರಷ್ಟು ಬೀದಿ ನಾಯಿಗಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗಿದ್ದು, ಉಳಿದ ನಾಯಿಗಳನ್ನೂ ಆದ್ಯತೆ ಮೇಲೆ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗುವುದು ಎಂದು ತಿಳಿಸಿದರು.

ಪರಿಸರ ಮಾಲಿನ್ಯ ಅಧಿಕಾರಿ ಮಾತನಾಡಿ, 'ಏಕ ಬಳಕೆಯ ಪ್ಲಾಸ್ಟಿಕ್ ತಡೆಗಟ್ಟುವ ನಿಟ್ಟನಲ್ಲಿ 2022-23ನೇ ಸಾಲಿನಿಂದ 2025-26ನೇ ಸಾಲಿನಲ್ಲಿ ಒಟ್ಟು 111 ಘಟಕಗಳ ಮೇಲೆ ದಾಳಿ ಮಾಡಿದ್ದು, ಈ ಪೈಕಿ ನಿಯಮ ಉಲ್ಲಂಘಿಸಿದ ಐದು ಘಟಕಗಳ ವಿರುದ್ಧ ಪ್ರಕರಣ ದಾಖಲಿಸಿ ದಂಡ ಹಾಕಲಾಗಿದೆ. ಒಂದು ಘಟಕವನ್ನು ಶಾಶ್ವತವಾಗಿ ಮುಚ್ಚಲು ಆದೇಶಿಸಲಾಗಿದೆ' ಎಂದು ವಿವರಿಸಿದರು.

ಮೂರು ವರ್ಷಗಳಲ್ಲಿ ಕೇವಲ 111 ಘಟಕಗಳ ಮೇಲೆ ದಾಳಿ ಮಾಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿ, ಏಕ ಬಳಕೆ ಪ್ಲಾಸ್ಟಿಕ್‌ಗಳಿಂದ ಪರಿಸರಕ್ಕೆ ಹಾನಿ ಉಂಟಾಗುವುದನ್ನು ಶಾಶ್ವತವಾಗಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು. ಹೆಚ್ಚು ಘಟಕಗಳ ಮೇಲೆ ದಾಳಿ ನಡೆಸಿ, ಕಾನೂನು ಪ್ರಕಾರ ಕ್ರಮ ಜರುಗಿಸಬೇಕು ಎಂದು ಹೇಳಿದರು.

ಅನ್ನಪೂರ್ಣ ಯೋಜನೆ ಜಾರಿ



ಬೆಂಗಳೂರು: ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿ ನಿತ್ಯ ಕೆಲಸ ಮಾಡುವ 700ಕ್ಕೂ ಹೆಚ್ಚು ಸ್ವಚ್ಛತಾ ಕಾರ್ಮಿಕರಿಗೆ ಅನ್ನಪೂರ್ಣ ಯೋಜನೆ ಜಾರಿಗೊಳಿಸಲಾಗಿದೆ.

ಸೋಮವಾರ ನಗರದಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಿ ಯೋಜನೆಗೆ ಚಾಲನೆ ನೀಡಿದರು.

'ಪ್ರತಿ ತಿಂಗಳು ₹1500 ಅನ್ನು ಅನ್ನಪೂರ್ಣ ಯೋಜನೆಯಡಿ ಸ್ವಚ್ಛತಾ ಕಾರ್ಮಿಕರು ಪಡೆಯಲಿದ್ದಾರೆ. ಆ್ಯಕ್ಸಿಸ್ ಬ್ಯಾಂಕ್ ಜೊತೆಗೂಡಿ ಯೋಜನೆ ಜಾರಿಗೊಳಿಸಲಾಗಿದೆ. ಕರ್ನಾಟಕದ ಇತರೆ ನಗರಗಳಲ್ಲಿ ಸ್ವಚ್ಛತಾ ಕಾರ್ಮಿಕರಿಗೆ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಲಾಗಿದೆ. ಆದರೆ, ಉಪಾಹಾರದ ಬದಲು ತಮಗೆ ಇಷ್ಟವಾದ ಆಹಾರ ಸೇವಿಸಲಿ ಎನ್ನುವ ಉದ್ದೇಶದಿಂದ ನೇರವಾಗಿ ಹಣ ನೀಡಲಾಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು. 'ನಮ್ಮ ನಗರವನ್ನು ಸ್ವಚ್ಛವಾಗಿ ಇಡಲು ಹಗಲು-ರಾತ್ರಿ ಕಾರ್ಮಿಕರು ಶ್ರಮಿಸುತ್ತಿದ್ದಾರೆ. ಈ ಯೋಜನೆಯ ಮೂಲಕ ನಾವು ಅವರ ಶ್ರಮವನ್ನು ಗೌರವಿಸುತ್ತಿದ್ದೇವೆ' ಎಂದರು.

ಜಲಮಂಡಳಿಯಿಂದ ಇನ್ನಷ್ಟು ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗುತ್ತಿದೆ ಎಂದು ಮಂಡಳಿ ಅಧ್ಯಕ್ಷ ಡಾ. ರಾಮಪ್ರಸಾತ್ ಮನೋಹರ್ ತಿಳಿಸಿದರು.

ಆರೋಪಿ ವರ್ಮಾ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಗರಣದ ಮೊದಲ ಆರೋಪಿ ಹೈದರಾಬಾದ್‌ನ ಸತ್ಯನಾರಾಯಣ ವರ್ಮಾ ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಸತ್ಯನಾರಾಯಣ ವರ್ಮಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದೆ.

'ಗುರುತರ ಆರೋಪದ ಪ್ರಕರಣಗಳಲ್ಲಿ, ಆರೋಪಿಗಳು ಪೂರ್ಣ ಪ್ರಮಾಣದ ವಿಚಾರಣೆಗೂ ಮುನ್ನವೇ ಹೊಸ ಅಂಶಗಳಿಲ್ಲದ, ಪುನರಾವರ್ತಿತ ಸವಾಲುಗಳನ್ನೇ ಮುಂದೆ ಮಾಡಿಕೊಂಡು ತಾವು ಸಾಚಾ ಎಂದು ನಿರೂಪಿಸಿಕೊಳ್ಳುವ ಅತ್ಯಾತುರದ ಪ್ರಯತ್ನಗಳಿಗೆ ಸೊಪ್ಪು ಹಾಕಲು ಆಗದು' ಎಂಬ ನ್ಯಾಯಪೀಠ ಕಟು ಅಭಿಪ್ರಾಯ ವ್ಯಕ್ತಪಡಿಸಿದೆ.

'ಒಂದು ಅರ್ಜಿಯಲ್ಲಿ ಪರಿಹಾರ ದೊರಕದಿದ್ದರೆ ಬೇರೊಂದು ಅಂಶಗಳನ್ನು ಹುಡುಕಿಕೊಂಡು ಮತ್ತೊಂದು ಹೊಸ ಅರ್ಜಿ ಸಲ್ಲಿಸಿದರೆ ಅವುಗಳನ್ನೆಲ್ಲಾ ರಿಟ್ ವ್ಯಾಪ್ತಿಯ ವಿಶಾಲತೆಯಲ್ಲಿ ಜಾಲಾಡುವುದು ಸಲ್ಲದ ನಡೆ. ಇಂತಹ ಹೆಜ್ಜೆಗಳಿಂದ ಪ್ರಕರಣದ ವಿಚಾರಣಾ ಗಂಭೀರತೆಗೆ ನಷ್ಟವುಂಟಾಗುತ್ತದೆ' ಎಂದು ನ್ಯಾಯಪೀಠ ವಿವರಿಸಿದೆ.

ಸತ್ಯನಾರಾಯಣ ವರ್ಮಾ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 120ಬಿ, 409, 420, 467, 468, 471 ಮತ್ತು ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13(1), 13(2)ರ ಅನ್ವಯ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಮತ್ತು ನಿಗಮದ ಪರ ಪದಾಂಕಿತ ಹಿರಿಯ ವಕೀಲ ವಿಕ್ರಮ ಹುಯಿಲಗೋಳ ವಾದ ಮಂಡಿಸಿದ್ದರು.



2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕರ್ನಾಟಕ ಆರ್ಯ ವೈಶ್ಯ ಮಹಾಮಂಡಳಿಯ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು. ಆರ್ಯವೈಶ್ಯ ಮಹಾಮಂಡಳಿಯ ಅಧ್ಯಕ್ಷ ಟಿ.ಎ. ಶರವಣ, ಗೌರಿಗದ್ದೆಯ ಅವಧೂತ ವಿನಯ್ ಗುರೂಜಿ, ಐಎಎಸ್ ಅಧಿಕಾರಿ ಆರ್.ಗಿರೀಶ್, ನಟಿ ಅನುಷಾ ರೈ ಭಾಗವಹಿಸಿದ್ದರು

ಕೊರಚ ಸಮುದಾಯಕ್ಕೆ ಅನ್ಯಾಯ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹಂಚಿಕೆ ಮಾಡುವ ಸಂದರ್ಭದಲ್ಲಿ ಅತಿ ಹಿಂದುಳಿದಿರುವ ಕೊರಚ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ ಎಂದು ಅಖಿಲ ಕರ್ನಾಟಕ ಕೊರಚ ಮಹಾ ಸಂಘ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯಾಧ್ಯಕ್ಷ ಕೆ.ಎನ್. ಪ್ರಭು, 'ಕೊರಚ ಸಮುದಾಯವನ್ನು ಎಡಗೈ ಅಥವಾ ಬಲಗೈ ಸಂಬಂಧಿತ ಜಾತಿಗಳ ಪಟ್ಟಿಯಲ್ಲಿ ಸೇರಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು. 'ರಾಜ್ಯದಲ್ಲಿ 1 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ನಮ್ಮ ಸಮುದಾಯ ಹಿಂದುಳಿದಿದೆ. ಇಂತಹ ಅಲೆಮಾರಿ ಸಮುದಾಯವನ್ನು ಒಳ ಮೀಸಲಾತಿ ಹಂಚಿಕೆ ಮಾಡುವ ಸಂದರ್ಭದಲ್ಲಿ ಬಲಿಷ್ಠ ಸಮುದಾಯಗಳ ಗುಂಪಿಗೆ ಸೇರಿಸಿರುವುದು ಸರಿಯಲ್ಲ' ಎಂದು ಹೇಳಿದರು.

ಮೂರು ತಿಂಗಳಲ್ಲಿ ಕುಂಠಿತವಾದ ಬಿಬಿಎಂಪಿ ಆಸ್ತಿ ತೆರಿಗೆ ಸಂಗ್ರಹ

2.75 ಲಕ್ಷ ಆಸ್ತಿದಾರರಿಂದ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 2.75 ಲಕ್ಷ ಆಸ್ತಿಗಳಿಗೆ ಹಲವು ವರ್ಷಗಳಿಂದ ತೆರಿಗೆ ಪಾವತಿಯಾಗಿಲ್ಲ. ಇದರ ಮೊತ್ತ ₹786 ಕೋಟಿಯಾಗಿದ್ದು, ಎಲ್ಲರಿಗೂ ನೋಟಿಸ್ ಜಾರಿ ಮಾಡಲಾಗಿದೆ.

'ಹಲವು ವರ್ಷಗಳಿಂದ ತೆರಿಗೆಯನ್ನೇ ಪಾವತಿಸದ ಸುಸ್ತಿದಾರರಿಗೆ 'ಎಲೆಕ್ಟ್ರಾನಿಕ್ ಡಿಮ್ಯಾಂಡ್ ನೋಟಿಸ್' ಜಾರಿ ಮಾಡಲಾಗಿದೆ. ಅವರೆಲ್ಲ BBMPtax.karnataka.gov.in ನಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ. ಇಲ್ಲದಿದ್ದರೆ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಚರ ಮತ್ತು ಸ್ಥಿರ ಆಸ್ತಿಗಳ ತುರ್ತು ಮಾರಾಟ ಸೇರಿದಂತೆ ವಸೂಲಿ ಮಾಡಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ತೆರಿಗೆ ಸುಸ್ತಿದಾರರು ಕಾರಣಗಳೊಂದಿಗೆ (https://BBMPeNyaya.karnataka.gov.in) ಆನ್‌ಲೈನ್‌ನಲ್ಲಿ ಸಲ್ಲಿಸಬಹುದು ಎಂದರು.

ಮಹದೇವಪುರ ವಲಯದಲ್ಲಿ 65 ಸಾವಿರ, ಬೊಮ್ಮನಹಳ್ಳಿ ವಲಯದಲ್ಲಿ 45 ಸಾವಿರ, ರಾಜರಾಜೇಶ್ವರಿ ನಗರ ವಲಯದಲ್ಲಿ 38 ಸಾವಿರ, ಪೂರ್ವ ವಲಯದಲ್ಲಿ 37 ಸಾವಿರ, ಯಲಹಂಕದಲ್ಲಿ 28 ಸಾವಿರ, ದಕ್ಷಿಣ ಹಾಗೂ ಪಶ್ಚಿಮ ವಲಯದಲ್ಲಿ ತಲಾ 25 ಸಾವಿರ, ದಾಸರಹಳ್ಳಿ ವಲಯದಲ್ಲಿ 11 ಸಾವಿರ ಸುಸ್ತಿದಾರರಿದ್ದಾರೆ.

ತೆರಿಗೆ ಸಂಗ್ರಹ ಕುಂಠಿತ: ಪ್ರಸಕ್ತ ಆರ್ಥಿಕ ವರ್ಷದ (2025-26) ಮೊದಲ ಎರಡು ತಿಂಗಳಲ್ಲಿ ಬಿಬಿಎಂಪಿ ₹2,424.93 ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಿತ್ತು. ಆದರೆ, ಜೂನ್, ಜುಲೈ, ಆಗಸ್ಟ್‌ನಲ್ಲಿ ₹786 ಕೋಟಿಯಷ್ಟೇ ಸಂಗ್ರಹವಾಗಿದೆ.

'ಬಿಬಿಎಂಪಿಯಿಂದ ಜಿಬಿಎ ಹಾಗೂ ಐದು ನಗರ ಪಾಲಿಕೆಗಳ ರಚನೆ ಹಾಗೂ ಇ-ಖಾತಾ ಪಡೆದವರ ಆಸ್ತಿ ತೆರಿಗೆ ಪರಿಶೀಲನೆ, ಷೋಕಾಸ್ ನೋಟಿಸ್ ನೀಡುವ ಪ್ರಕ್ರಿಯೆಗಳಿಂದ ಸಾಮಾನ್ಯ ಆಸ್ತಿ ತೆರಿಗೆ ಸಂಗ್ರಹ ಪ್ರಕ್ರಿಯೆಗೆ ಹಿನ್ನಡೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹ (ಆಗಸ್ಟ್ 31ರ ಅಂತ್ಯಕ್ಕೆ)

ವಲಯ	ಸಂಗ್ರಹ (₹ ಕೋಟಿಗಳಲ್ಲಿ)
ಮಹದೇವಪುರ	859.92
ಪೂರ್ವ	566.14
ದಕ್ಷಿಣ	482.68
ಪಶ್ಚಿಮ	329.32
ಬೊಮ್ಮನಹಳ್ಳಿ	342.43
ಯಲಹಂಕ	295.31
ಆರ್.ಆರ್. ನಗರ	235.07
ದಾಸರಹಳ್ಳಿ	99.54
ಒಟ್ಟು	3,210.41

2025-26 ಆಸ್ತಿ ಸಂಗ್ರಹ

₹4,095 ಕೋಟಿ — 21.73 ಲಕ್ಷ ಆಸ್ತಿಗಳ ತೆರಿಗೆ ಸಂಗ್ರಹದ ಗುರಿ

₹836.34 ಕೋಟಿ — 3.75 ಲಕ್ಷ ಸುಸ್ತಿದಾರರಿಂದ ತೆರಿಗೆ ಬಾಕಿ

₹152.80 ಕೋಟಿ — 9,904 ಆಸ್ತಿಗಳಿಂದ ಪರಿಷ್ಕೃತ ತೆರಿಗೆ- ದಂಡ ಬಾಕಿ

ಮುಖ್ಯಾಂಶಗಳು

- ಎಲ್ಲರಿಗೂ ನೋಟಿಸ್ ಜಾರಿ
- ಕಾರಣಗಳೊಂದಿಗೆ ಆನ್‌ಲೈನ್ ಮೂಲಕ ಪಾವತಿಗೆ ಅವಕಾಶ
- ಜಿಬಿಎ ಪ್ರಕ್ರಿಯೆಗಳಿಂದ ಆಸ್ತಿ ತೆರಿಗೆ ಸಂಗ್ರಹಕ್ಕೆ ಹಿನ್ನಡೆ

ನಗರದಲ್ಲಿ ಇಂದು

ಪೌರಾಣಿಕ ಗೀತ ಗಾಯನ ಶಿಬಿರದ ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಬಿ.ಸಿ.ನಾಗೇಂದ್ರ ಕುಮಾರ್, ಅತಿಥಿಗಳು: ರವೀಂದ್ರನಾಥ ಸಿರಿವರ, ಪದ ದೇವರಾಜ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11.30

ಸರ್ಕಾರಿ ಆಸ್ಪತ್ರೆಯಲ್ಲಿ ಪೌಷ್ಟಿಕ ಆಹಾರ ವಿತರಣಾ ಯೋಜನೆಗೆ ಚಾಲನೆ: ದಿನೇಶ್ ಗುಂಡೂರಾವ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಸರ್ ಸಿ.ವಿ. ರಾಮನ್ ಆಸ್ಪತ್ರೆ, ಇಂದಿರಾನಗರ, ಮಧ್ಯಾಹ್ನ 12

'ರಫ್ತು ಶ್ರೇಷ್ಠತಾ' ಪ್ರಶಸ್ತಿ ಪ್ರದಾನ: ಅತಿಥಿಗಳು: ರಾಮಲಿಂಗಾರೆಡ್ಡಿ, ಎಂ.ಬಿ. ಪಾಟೀಲ, ಅಧ್ಯಕ್ಷತೆ: ಎಂ.ಜಿ.ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಮಧ್ಯಾಹ್ನ 3.30

63ನೇ ಗಣೇಶೋತ್ಸವ: ಸಂಗೀತ ಕಛೇರಿ: 63 ಕೊಳಲುಗಳ ಮೇಳ ನಿರ್ದೇಶನ: ಎಚ್.ಎಸ್.ವೇಣುಗೋಪಾಲ್, ಆಯೋಜನೆ: ಶ್ರೀವಿದ್ಯಾರಣ್ಯ ಯುವಕ ಸಂಘ, ಸ್ಥಳ: ಎಪಿಎಸ್ ಕಾಲೇಜಿನ ಮೈದಾನ, ಬಸವನಗುಡಿ, ಸಂಜೆ 7

ನಿಧನ ವಾರ್ತೆ

ಲಕ್ಷ್ಮಮ್ಮ



ಬೆಂಗಳೂರು: ಸ್ವಾಭಿಮಾನಿ ಹೋರಾಟದ ಕಾರ್ಯಕರ್ತೆ, ಸರ್ಕಾರಿ ಶಿಕ್ಷಣ ಸಂಸ್ಥೆಯ ನಿವೃತ್ತ ಉದ್ಯೋಗಿ ಲಕ್ಷ್ಮಮ್ಮ (74) ಕಂಠೀರವ ನಗರದಲ್ಲಿರುವ ಸ್ವಗೃಹದಲ್ಲಿ ಭಾನುವಾರ ನಿಧನರಾದರು.

ಮೃತೆ ಲಕ್ಷ್ಮಮ್ಮ ಅವರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ರಾಮಕೃಷ್ಣ ನಗರ ಆಟದ ಮೈದಾನ ಉಳಿಸಿ ಹೋರಾಟ, ಕಂಠೀರವ ನಗರದಲ್ಲಿ ಹಕ್ಕುಪತ್ರ ಹಾಗೂ ಮೂಲ ಸೌಕರ್ಯಕ್ಕಾಗಿ ಹೋರಾಟ, ಸಾಮೂಹಿಕ ವಿವಾಹಗಳಿಗೆ ಸಹಾಯ ಮಾಡುವುದು ಸೇರಿದಂತೆ ಅನೇಕ ಸಾಮಾಜಿಕ ಹೋರಾಟಗಳಲ್ಲಿ ಭಾಗಿಯಾಗಿದ್ದರು ಎಂದು ಕುಟುಂಬದವರು ತಿಳಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ ಸಾಮಾಜಿಕ ಚಳವಳಿಗಳಲ್ಲಿ ಪಾಲ್ಗೊಂಡಿದ್ದರು ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.

'ಶೇ 60ರಷ್ಟು ಲಂಚಕ್ಕೆ ಬೇಡಿಕೆ'

ಪ್ರಜಾವಾಣಿ ವಾರ್ತೆ

ಭೋವಿ ನಿಗಮ

ಬೆಂಗಳೂರು: 'ಭೂ ಒಡೆತನ ಯೋಜನೆ ಅಡಿಯಲ್ಲಿ ಆಯ್ಕೆಯಾಗುವ ಫಲಾನುಭವಿಗಳಿಂದ ಶೇಕಡ 60ರಷ್ಟು ಲಂಚ ನೀಡುವಂತೆ ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ್ ಅವರು ಬೇಡಿಕೆ ಇಡುತ್ತಿದ್ದಾರೆ' ಎಂದು ಭಾರತೀಯ ಭೋವಿ ಸಮಾಜ ಸೇವಾ ಸಂಘದ ರಾಷ್ಟ್ರೀಯ ಅಧ್ಯಕ್ಷ ವೆಂಕಟೇಶ್ ಮೌರ್ಯ ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರವಿಕುಮಾರ್ ಅವರು ಭೋವಿ ಸಮುದಾಯವನ್ನು ಪ್ರತಿನಿಧಿಸುತ್ತಿದ್ದು, ಸಮುದಾಯದ ಜನರ ಅಭಿವೃದ್ಧಿಗೆ ಇರುವ ಯೋಜನೆಗಳನ್ನು ಹಂಚಿಕೆ ಮಾಡಲು ಲಂಚದ ಬೇಡಿಕೆ ಇಡುತ್ತಿದ್ದಾರೆ. ಜವಾಬ್ದಾರಿಯುತ ಹುದ್ದೆಯಲ್ಲಿರುವ ಇವರು ಫಲಾನುಭವಿಗಳಿಂದ ಲಂಚ ಪಡೆದುಕೊಳ್ಳುತ್ತಿರುವುದು ಖಂಡನೀಯ' ಎಂದು ಹೇಳಿದರು.

'ರವಿಕುಮಾರ್ ಅವರು ನಿಗಮದಲ್ಲಿರುವ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವುದನ್ನು ಬಿಟ್ಟು, ಮಧ್ಯವರ್ತಿಗಳ ಮೂಲಕ ಹಣ ನೀಡುವಂತೆ ಫಲಾನುಭವಿಗಳಿಗೆ ಪೀಡಿಸುತ್ತಿದ್ದಾರೆ. ಈ ಬಗ್ಗೆ ಅವರು ಮಾತನಾಡಿರುವ ವಿಡಿಯೊ ಹಾಗೂ ಆಡಿಯೊಗಳು ನನ್ನ ಬಳಿ ಇವೆ. ಕೂಡಲೇ ರವಿಕುಮಾರ್ ಅವರನ್ನು ನಿಗಮದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು. ಅವರ ವಿರುದ್ಧ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದರು.

'ನಾಚಿಕೆಗೇಡಿನ ಪರಮಾವಧಿ'

ಬೆಂಗಳೂರು: 'ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರವಿಕುಮಾರ್ ಅವರು ಭೂಒಡೆತನ ಯೋಜನೆಯಡಿ ಲಂಚ ಕೇಳಿ ಸಿಕ್ಕಿಬಿದ್ದಿರುವ ಪ್ರಕರಣ ಅತ್ಯಂತ ನಾಚಿಕೆಗೇಡಿತನದ ಪರಮಾವಧಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರ ಈ ಮೊದಲು ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಿತ್ತು. ನಂತರ ಪರಿಶಿಷ್ಟರು, ಶೋಷಿತ ಸಮುದಾಯಗಳ ಕಲ್ಯಾಣಕ್ಕೆ ಮೀಸಲಿಟ್ಟಿರುವ ಹಣವನ್ನೂ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿತ್ತು. ಇದೀಗ ಭೋವಿ ಸಮುದಾಯದ ಅಭಿವೃದ್ಧಿ ನಿಗಮದ ಫಲಾನುಭವಿಗಳಿಂದ ವಸೂಲಿಗೆ ಇಳಿದಿರುವುದು ನಿಜಕ್ಕೂ ನಾಡಿನ ದೌರ್ಭಾಗ್ಯ' ಎಂದು ಟೀಕಿಸಿದ್ದಾರೆ.

'ಭೋವಿ ಸಮುದಾಯದ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆತ್ತಬೇಕಿದ್ದ ಜವಾಬ್ದಾರಿಯುತ ಸ್ಥಾನದಲ್ಲಿರುವ ಅಧ್ಯಕ್ಷರೇ ವಸೂಲಿಗಿಳಿದಿರುವುದು ಸರಿಯಲ್ಲ. ಈ ಸಂಬಂಧ ಲೋಕಾಯುಕ್ತರು ಸ್ವಯಂ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು' ಎಂದಿದ್ದಾರೆ.

> ಭೋವಿ ನಿಗಮದ ಅಧ್ಯಕ್ಷರ ವಿರುದ್ಧದ ಆರೋಪದ ಬಗ್ಗೆ ನನಗೆ ತಿಳಿದಿಲ್ಲ. ಸಂಬಂಧಪಟ್ಟ ಸಚಿವರ ಬಳಿ ಮಾಹಿತಿ ಪಡೆಯುತ್ತೇನೆ
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

41 ಕೆರೆಗಳ ಅಂಗಳ, 489 ಸಂಚಾರಿ ಟ್ಯಾಂಕರ್‌ಗಳಲ್ಲಿ ವ್ಯವಸ್ಥೆ


5.91 ಲಕ್ಷ ಗಣೇಶ ಮೂರ್ತಿಗಳ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಹಬ್ಬದ ದಿನ ಆಗಸ್ಟ್ 27ರಿಂದ 31ರವರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ 5.91 ಲಕ್ಷ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗಿದೆ.

41 ಕೆರೆಗಳ ಅಂಗಳದಲ್ಲಿ ಶಾಶ್ವತ/ ತಾತ್ಕಾಲಿಕ ಕಲ್ಯಾಣಿ, 489 ಸಂಚಾರಿ ಟ್ಯಾಂಕರ್‌ಗಳಲ್ಲಿ ಬಿಬಿಎಂಪಿ ವಿಸರ್ಜನೆಗೆ ವ್ಯವಸ್ಥೆ ಕಲ್ಪಿಸಿತ್ತು.

ಕಲ್ಯಾಣಿಗಳ ಆವರಣದಲ್ಲಿ ವ್ಯವಸ್ಥಿತವಾಗಿ ಬ್ಯಾರಿಕೇಡ್ ಅಳವಡಿಕೆ, ನುರಿತ ಈಜುಗಾರರ/ ಜೀವ ರಕ್ಷಕರ ನಿಯೋಜನೆ, ಸಿಸಿ ಟಿವಿ ಕ್ಯಾಮೆರಾ ಅಳವಡಿಕೆ, ವಿದ್ಯುತ್ ದೀಪಗಳ ಸೌಲಭ್ಯ ಹಾಗೂ ಪೆಂಡಾಲ್ ವ್ಯವಸ್ಥೆ ಮಾಡಿಕೊಂಡು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಪ್ರಮುಖ ಕಲ್ಯಾಣಿಗಳ ಬಳಿ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಕಲ್ಯಾಣಿಗಳ ಬಳಿ ಮೂರ್ತಿಗಳ ವಿಸರ್ಜನೆ ಮಾಡಿದ ವೇಳೆ ಸಂಗ್ರಹವಾಗುವ ತ್ಯಾಜ್ಯವನ್ನು ಆಟೊ ಟಿಪ್ಪರ್‌ಗಳ ಮೂಲಕ ವಿಲೇವಾರಿ ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



ಸ್ವಚ್ಛತೆ ಕಾರ್ಯ: ಹಲಸೂರು, ಹೆಬ್ಬಾಳ, ಯಡಿಯೂರು, ಸ್ಯಾಂಕಿ ಕೆರೆ ಅಂಗಳದ ಕಲ್ಯಾಣಿಗಳಲ್ಲಿ ಹೆಚ್ಚು ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದ್ದು, ಆ ಕಲ್ಯಾಣಿಗಳಲ್ಲಿ ಹೂಳೆತ್ತುವ ಕಾರ್ಯ ನಡೆಯಲಿದೆ. ಯಡಿಯೂರು ಕೆರೆ ಕಲ್ಯಾಣಿಯಲ್ಲಿ ಸೆ.10ರಂದು, ಹೆಬ್ಬಾಳ ಕೆರೆ ಮತ್ತು ಹಲಸೂರು ಕೆರೆ ಕಲ್ಯಾಣಿಯಲ್ಲಿ ಸೆ.2ರಂದು ಹೂಳೆತ್ತಲಾಗುತ್ತದೆ. ಈ ಸಂದರ್ಭದಲ್ಲಿ ಮೂರ್ತಿಗಳ ವಿಸರ್ಜನೆಗೆ ಅವಕಾಶ ಇರುವುದಿಲ್ಲ ಎಂದು ತಿಳಿಸಲಾಗಿದೆ.

3,320 ಪಿಒಪಿ ಮೂರ್ತಿ: 'ಯಡಿಯೂರು ಕೆರೆಯಲ್ಲಿ ನಿರ್ಮಿಸಿರುವ ಕಲ್ಯಾಣಿಯಲ್ಲಿ ಐದು ದಿನಗಳಲ್ಲಿ 2.28 ಲಕ್ಷ ಮಣ್ಣಿನ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ. ಇದಲ್ಲದೆ, 6,550 ಪೇಪರ್ ಮೂರ್ತಿ ಹಾಗೂ 3,320 ಪಿಒಪಿ ಮೂರ್ತಿಗಳ ವಿಸರ್ಜನೆಯಾಗಿವೆ' ಎಂದು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್. ರಮೇಶ್ ತಿಳಿಸಿದ್ದಾರೆ.



ಹಲಸೂರು ಕೆರೆ ಅಂಗಳದ ಕಲ್ಯಾಣಿಯಲ್ಲಿ ಸೋಮವಾರ ಹೂಳೆತ್ತಲಾಯಿತು

ಮೂರ್ತಿಗಳ ವಿಸರ್ಜನೆ ಅಂಕಿ–ಅಂಶ

ಆಗಸ್ಟ್ 27ರಂದು	2,19,153
28ರಂದು	73,959
29ರಂದು	1,14,402
30ರಂದು	54,653
31ರಂದು	1,29,516
ಒಟ್ಟು	5,91,683

ನಗರದ ವಿವಿಧೆಡೆ ಭಾರಿ ವರ್ಷಧಾರೆ

ರಸ್ತೆಗಳು ಜಲಾವೃತ • ವಾಹನ ಸಂಚಾರ ಅಸ್ತವ್ಯಸ್ತ • ಸವಾರರಿಗೆ ತೊಂದರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಸೋಮವಾರ ಭಾರಿ ಮಳೆಯಾಗಿದೆ. ಕೆಲವೆಡೆ ನೀರು ಹರಿದು ಹೋಗಲು ಸರಿಯಾದ ಚರಂಡಿ ಇಲ್ಲದೆ ರಸ್ತೆಗಳು ಕಾಲುವೆಯಂತಾದವು. ಇದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

ಬಿನ್ನಿಮಿಲ್ ಮುಖ್ಯ ರಸ್ತೆ, ಕೆ.ಆರ್. ವೃತ್ತದ ಕೆಳಸೇತುವೆ, ಬನ್ನೇರುಘಟ್ಟ ಮುಖ್ಯರಸ್ತೆ, ದರ್ಗಾ ರಸ್ತೆ ಕಡೆಯಿಂದ ಸಿಲ್ಕ್ ಬೋರ್ಡ್ ಕಡೆಗೆ, ಬಿಳೇಕಹಳ್ಳಿ ಕಡೆಯಿಂದ ಜಿ.ಡಿ. ಮರ ಕಡೆಗೆ, ವೀರಸಂದ್ರ ಜಂಕ್ಷನ್ ಕಡೆಯಿಂದ ಹೊಸೂರು ರಸ್ತೆ ಕಡೆಗೆ, ಜಯದೇವ ಯು ಟರ್ನ್, ವರ್ತೂರು ಕೋಡಿ ಬಸ್ ನಿಲ್ದಾಣ ಕಡೆಯಿಂದ ವೈಟ್‌ಫೀಲ್ಡ್ ಕಡೆಗೆ, ವರ್ತೂರು ಕೋಡಿಯಿಂದ ತೂಬರಹಳ್ಳಿ ಕಡೆಗೆ ಸಾಗುವ ರಸ್ತೆಗಳು ನೀರಿನಿಂದ ಆವೃತ್ತವಾದವು.

ದೊಡ್ಡನೆಕ್ಕುಂದಿ ಹೊರ ವರ್ತುಲ ರಸ್ತೆ, ವರ್ತೂರು ಪಿಎಸ್ ಕಡೆಯಿಂದ ವರ್ತೂರು ಕಾಲೇಜು ಕಡೆಗಿನ ರಸ್ತೆ, ಉತ್ತರಹಳ್ಳಿ ವೃತ್ತ, ಮೆಜೆಸ್ಟಿಕ್ ಬಸ್ ನಿಲ್ದಾಣ, ಎಸ್‌ಜೆಪಿ ರಸ್ತೆ, ರೂಪೇನ ಅಗ್ರಹಾರ ಕಡೆಯಿಂದ ಬೊಮ್ಮನಹಳ್ಳಿ ಕಡೆಗೆ ಸಾಗುವ ರಸ್ತೆ, ರೂಬಿ2 ಜಂಕ್ಷನ್, ಬೆಳ್ಳಂದೂರು ಡೌನ್ ರ‍್ಯಾಂಪ್, ಬೆಳ್ಳಂದೂರು ಇಕೋಸ್ಪೇಸ್, ಕ್ವೀನ್ಸ್ ಜಂಕ್ಷನ್ ಕಡೆಯಿಂದ ಅನಿಲ್ ಕುಂಬ್ಳೆ ಸರ್ಕಲ್ ಕಡೆಗೆ, ಕಸ್ತೂರಿ ನಗರ ಕಡೆಯಿಂದ ರಾಮಮೂರ್ತಿ ನಗರದ ಕಡೆಗೆ, ಎಂ.ಜಿ ರಸ್ತೆ ಮೆಟ್ರೊ ನಿಲ್ದಾಣ ಸುತ್ತಮುತ್ತ, ಆರ್.ಪಿ ರಸ್ತೆ ಕಡೆಯಿಂದ ಪಿ.ಜಿ. ಹಳ್ಳಿ ಕಡೆಗೆ, ನೆಹರೂ ಕೆಳ ಸೇತುವೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ವಿದ್ಯಾಪೀಠದಲ್ಲಿ 3.5 ಸೆಂ.ಮೀ, ಕೆಂಗೇರಿಯಲ್ಲಿ 3.4, ರಾಜರಾಜೇಶ್ವರಿ ನಗರ 3.2, ಪೀಣ್ಯ ಕೈಗಾರಿಕಾ ವಲಯ 3.1, ಹಂಪಿನಗರ 3, ಬಿಳೇಕಹಳ್ಳಿ 2.7, ಕೊಟ್ಟಿಗೆಪಾಳ್ಯ 2.7, ಬಸವೇಶ್ವರನಗರ 2.7, ನಾಯಂಡಹಳ್ಳಿ 2.7, ಕೋರಮಂಗಲ 2.7, ಅರಕೆರೆ 2.6, ಅಂಜನಾಪುರ 2.5, ವನ್ನಾರಪೇಟೆ 2.4, ಹೆರೋಹಳ್ಳಿ 2.4, ಹಗದೂರು 2.4, ಹೆಮ್ಮಿಗೆಪುರ 2.4, ಮಾರತ್‌ಹಳ್ಳಿ 2.3, ಬೊಮ್ಮನಹಳ್ಳಿ 2.2, ನಾಗಪುರ 2.2, ಪುಟ್ಟೇನಹಳ್ಳಿ 2.1, ಮಾರುತಿ ಮಂದಿರ 2.1, ರಾಜರಾಜೇಶ್ವರಿ ನಗರ 2.1, ಬಿ.ಟಿ.ಎಂ. ಲೇಔಟ್ 2, ಎಚ್‌ಎಸ್‌ಆರ್ ಲೇಔಟ್ 2 ಹಾಗೂ ಸಂಪಿಗೆರಾಮನಗರದಲ್ಲಿ 2 ಸೆಂ.ಮೀ. ಮಳೆ ದಾಖಲಾಗಿದೆ.



ನಗರದಲ್ಲಿ ಸೋಮವಾರ ರಾತ್ರಿ ಸುರಿದ ಬಿರುಸಿನ ಮಳೆಯಿಂದ ಸೇಂಟ್ ಪ್ಯಾಟ್ರಿಕ್ ಚರ್ಚ್ ಬಳಿ ರಸ್ತೆ ಜಲಾವೃತಗೊಂಡಿದ್ದು, ಪಾದಚಾರಿಗಳು ರಸ್ತೆ ದಾಟಲು ಹರಸಾಹಸಪಟ್ಟರು —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಮಳೆಗೆ ಕುಸಿದ ಮಣ್ಣು: ಕಾರ್ಮಿಕ ಸಾವು

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಯಲಹಂಕದಲ್ಲಿ ನಿರ್ಮಾಣ ಹಂತದ ಕಟ್ಟಡದ ಸ್ಥಳದಲ್ಲಿ ಮಣ್ಣು ಕುಸಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಮತ್ತೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಯಲಹಂಕದಲ್ಲಿ ಎಂಬೆಸ್ಸಿ ಗ್ರೂಪ್ ಸಂಸ್ಥೆಯ ಕಟ್ಟಡ ನಿರ್ಮಾಣವಾಗುತ್ತಿದ್ದು, ಕಾರ್ಮಿಕರು ಕಟ್ಟಡದ ಅಡಿಪಾಯಕ್ಕೆ ಗುಂಡಿ ಅಗೆಯುತ್ತಿದ್ದರು. ಈ ವೇಳೆ ಧಾರಾಕಾರ ಮಳೆ ಸುರಿದಿದ್ದರಿಂದ ಗುಂಡಿಯಲ್ಲಿ ಮಳೆ ನೀರು ತುಂಬಿಕೊಂಡು ಮಣ್ಣು ಕುಸಿದಿದೆ. ಕೆಲವರು ಮೇಲೆ ಬಂದು ಪಾರಾದರು. ಇಬ್ಬರು ಮಣ್ಣಿನಡಿ ಸಿಲುಕಿದ್ದರು. ನಂತರ ಇತರೆ ಕಾರ್ಮಿಕರು, ಸ್ಥಳೀಯರ ನೆರವಿನಿಂದ ಮಣ್ಣು ತೆರವುಗೊಳಿಸಲು ಯತ್ನಿಸಿದ್ದರು. ಆದರೆ, ಆ ವೇಳೆಗಾಗಲೇ ಆಂಧ್ರಪ್ರದೇಶದ ಒಬ್ಬ ಕಾರ್ಮಿಕ ಮಣ್ಣಿನ ಅಡಿಯೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಮಣ್ಣಿನಡಿ ಸಿಲುಕಿದ್ದ ಮತ್ತೊಬ್ಬ ಕಾರ್ಮಿಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಲೇಖಕಿಯರ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ 2024ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿಗಳು ಪ್ರಕಟವಾಗಿವೆ. ನಿರ್ಮಲಾ ಶೆಟ್ಟರ್ ಅವರಿಗೆ ಕೆ.ಟಿ. ಬನಶಂಕರಮ್ಮ ಪ್ರಶಸ್ತಿ, ಪ್ರೇಮಾ ಭಟ್ ಮತ್ತು ಎ.ಎಸ್. ಭಟ್ ಪ್ರಕಾಶಕಿ ಪ್ರಶಸ್ತಿಗೆ ಸುಧಾ ಚಿದಾನಂದಗೌಡ ಆಯ್ಕೆಯಾಗಿದ್ದಾರೆ.

ಭಾಗ್ಯ ನಂಜಪ್ಪ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಕೆ.ಎಸ್. ಚೈತ್ರಾ ಅವರ 'ದಂತ ಕಥೆಗಳು', ಜಿ.ವಿ. ನಿರ್ಮಲ ಅನುವಾದ ಸಾಹಿತ್ಯ ಪ್ರಶಸ್ತಿಗೆ ವಿಜಯಾ ಶಂಕರ್ ಅವರ 'ಮನೋಜ್ಞ' ಕಾದಂಬರಿ, ಉಷಾ. ಪಿ.ರೈ ಆತ್ಮಕಥನ ಪ್ರಶಸ್ತಿಗೆ ಎಚ್.ಆರ್. ಲೀಲಾವತಿ ಅವರ 'ಹಾಡಾಗಿ ಹರಿದಾಳೆ', ನಾಗರತ್ನ ಚಂದ್ರಶೇಖರ್ ಲಲಿತ ಪ್ರಬಂಧ ಪ್ರಶಸ್ತಿಗೆ ಸವಿತಾ ಮಾಧವ ಶಾಸ್ತ್ರಿ ಗುಂಡ್ಮಿ ಅವರ 'ನೀರ್ ದೋಸೆ' ಕೃತಿಗಳು ಆಯ್ಕೆಯಾಗಿವೆ.

ಬಿ.ಸಿ. ಶೈಲಾ ನಾಗರಾಜ್ ಕಾವ್ಯ ಪ್ರಶಸ್ತಿಗೆ ಪಿ. ಭಾರತಿದೇವಿ ಅವರ 'ಚಲಿಸುತ್ತಿವೆ ಚುಕ್ಕಿಗಳು', ಬ್ಯಾಡಗಿ ಸಂಕಮ್ಮ ಕಾವ್ಯ ಪ್ರಶಸ್ತಿಗೆ ಗೀತಾ ವಸಂತ ಅವರ 'ಪ್ರಾಣಪಕ್ಷಿಯ ರೆಕ್ಕೆ', ಶ್ರೀಜಯ ಕಲಕೋಟಿ ಪ್ರಶಸ್ತಿಗೆ ಮೀನಾಕ್ಷಿ ಬಾಳಿ ಅವರ 'ವಚನ ನಿಜದರ್ಶನ', ಸುಶೀಲಾ ಸೋಮಶೇಖರ್ ಪ್ರಶಸ್ತಿಗೆ ಸುಶೀಲಾ ಸದಾಶಿವಯ್ಯ ಅವರ 'ಜಗದ ಸದಾಶಿವಯ್ಯ', ಲಕ್ಷ್ಮಿದೇವಮ್ಮ ಕಥಾ ಪ್ರಶಸ್ತಿಗೆ ವಿದ್ಯಾ ಭರತನಹಳ್ಳಿ ಅವರ 'ಬೇಸೂರ್', ನಿರುಪಮಾ ಕಥಾ ಪ್ರಶಸ್ತಿಗೆ ರಾಜಶ್ರೀ ಟಿ. ರೈ ಪೆರ್ಲ ಅವರ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ', ಎಲ್.ಗಿರಿಜಾರಾಜ್ ಅವರ 'ಪಾರೋತಿಯ ಶಿವ' ಹೊತ್ತಗೆಗಳು ಆಯ್ಕೆಯಾಗಿವೆ.

ತ್ರಿವೇಣಿ ದತ್ತಿನಿಧಿ ಪ್ರಶಸ್ತಿಗೆ ಸುಜಾತ ಛಲವಾದಿ ಅವರ 'ಲಚಮವ್ವ' (ಪ್ರಥಮ), ರೇಣುಕಾ ಕೋಡಗುಂಟಿ ಅವರ 'ಚಿಗುರೊಡೆದ ಬೇರು' (ದ್ವಿತೀಯ), ಸ್ಮಿತಾ ಅಮೃತರಾಜ್ ಸಂಪಾಜೆ ಅವರ 'ಹಾಯ್ ಮೆಟಾಯ್' (ತೃತೀಯ), ಕಾಕೋಳು ಸರೋಜಮ್ಮ ಕಾದಂಬರಿ ಪ್ರಶಸ್ತಿಗೆ ಬಿ.ಆರ್. ನಾಗರತ್ನ ಅವರ 'ಕಾಲಗರ್ಭ', ಕಮಲಾ ರಾಮಸ್ವಾಮಿ ಪ್ರವಾಸ ಸಾಹಿತ್ಯ ಪ್ರಶಸ್ತಿಗೆ ಕೆ.ವಿ. ರಾಜೇಶ್ವರಿ ಅವರ 'ಕಿವಿ-ಕಾಂಗರೂಗಳ ನಡುವೆ', ನುಗ್ಗೆಹಳ್ಳಿ ಪಂಕಜ ಹಾಸ್ಯಕೃತಿಗೆ ಶ್ರುತಿ ಗದ್ದೆಗಲ ಅವರ 'ಹಳದಿ ಕ್ಯಾಪ್ ಸುಂದರಿ', ಗುಣಸಾಗರಿ ನಾಗರಾಜ್ ಮಕ್ಕಳ ಸಾಹಿತ್ಯ ಪ್ರಶಸ್ತಿಗೆ ಲಲಿತಾ ಕೆ.ಹೊಸಪ್ಯಾಟಿ ಅವರ 'ನದಿ ನದಿ ಎಲ್ಲಿ ಹೋತು', ಇಂದಿರಾ ವಾಣಿರಾವ್ ನಾಟಕ ಪ್ರಶಸ್ತಿಗೆ ಅಕ್ಷತಾ ರಾಜ್ ಪೆರ್ಲ ಅವರ 'ನೆಲ ಉರುಳು', ತ್ರಿವೇಣಿ ಸಾಹಿತ್ಯ ಪುರಸ್ಕಾರಕ್ಕೆ (ಸುಧಾಮೂರ್ತಿ ಪ್ರಾಯೋಜಿತ) ಎ.ಜಿ. ರತ್ನ ಕಾಳೇಗೌಡ ಅವರ 'ಪಂಚಾಯಿತಿ ಅಧ್ಯಕ್ಷೆ ಪುಟ್ಟಕ್ಕ' ಕಾದಂಬರಿ, ಶ್ರೀಲೇಖಾ ಕವಿತೆ ಪ್ರಶಸ್ತಿಗೆ ಪ್ರತಿಭಾ ಪಾಟೀಲ ಅವರ 'ಸಿಂಬಿ', ಜಯಮ್ಮ ಕರಿಯಣ್ಣ ಸಂಶೋಧನೆ ಪ್ರಶಸ್ತಿಗೆ ವಿದುಷಿ ಶ್ಯಾಮಲಾ ಪ್ರಕಾಶ್ 'ಮಾತಿನೊಳಗಣ ಧಾತು' ಕೃತಿಗಳು ಆಯ್ಕೆಯಾಗಿವೆ.

ಆಯ್ಕೆ ಸಮಿತಿಯಲ್ಲಿ ಎನ್. ಸಂಧ್ಯಾರಾಣಿ, ಶಾಂತರಾಜು, ವಿದ್ಯಾರಶ್ಮಿ ಪೆಲ್ಲತ್ತಡ್ಕ ಇದ್ದರು. ಪ್ರಶಸ್ತಿ ಪ್ರದಾನ ಸಮಾರಂಭ ಸೆ. 13ರಂದು ನಯನ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷೆ ಡಾ. ಎಚ್.ಎಲ್.ಪುಷ್ಪ ತಿಳಿಸಿದ್ದಾರೆ.

ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಕೆ ನಾಳೆಯಿಂದ

ಬೆಂಗಳೂರು: ಅಲೈಡ್ ಹೆಲ್ತ್ ಸೈನ್ಸ್ ಸ್ನಾತಕೋತ್ತರ ಕೋರ್ಸ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ತೆಗೆದುಕೊಳ್ಳುವವರಿಗೆ ಸೆ.3ರಿಂದ 14ರವರೆಗೆ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಸೂಚಿಸಿದೆ.

ಎಂ.ಎಸ್ಸಿ ನರ್ಸಿಂಗ್, ಎಂ.ಪಿ.ಟಿ, ಎಂ.ಎಸ್‌ಸಿ, ಅಲೈಡ್ ಹೆಲ್ತ್ ಸೈನ್ಸ್ ಸ್ನಾತಕೋತ್ತರ ಕೋರ್ಸ್‌ಗಳು, ಎಂ.ಫಾರ್ಮಾ, ಡಿ. ಫಾರ್ಮಾ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ನಡೆಸಲಾಗುವುದು. ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea ಮೂಲಕ ನೋಂದಾಯಿಸಿ, ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಬಹುದು.

ಪರೀಕ್ಷೆಯನ್ನು ಬೆಂಗಳೂರಿನಲ್ಲಿ ಮಾತ್ರ ನಡೆಸಲಾಗುವುದು. ಪರೀಕ್ಷೆಯ ದಿನಾಂಕವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಆಂಟಿಆಕ್ಸಿಡೆಂಟ್‌ಗಳು ಹೇರಳವಾಗಿರುವ ಬ್ಲೂಬೆರಿ ಹಣ್ಣುಗಳ ಸೇವನೆಯಿಂದ ಮೂಳೆಸವೆತವನ್ನು ತಡೆಗಟ್ಟಬಹುದು



‘ನನ್ನ ನಂತರ ಏನು?’

ಮಾನಸಿಕ ಕಾಯಿಲೆಯಿಂದ ಬಳಲುವ ವ್ಯಕ್ತಿಯನ್ನು ಪೋಷಿಸುತ್ತಿದ್ದವರು ಇಲ್ಲವಾದರೆ ಮುಂದೆ ಯಾರು? ಎಂಬ ಪ್ರಶ್ನೆ ಎದುರಾಗುವುದು ಸಹಜ. ಸೂಕ್ತ ತಯಾರಿ ಇದ್ದರೆ ಈ ಸಮಸ್ಯೆಗೂ ಸುಲಭವಾಗಿ ಪರಿಹಾರವನ್ನು ಕಂಡುಕೊಳ್ಳಬಹುದು

• ಡಾ. ಕೆ. ಎಸ್. ಶುಭ್ರತಾ

ಹರಿಣಿ ಮತ್ತು ತಾಯಿ ಮನೋವೈದ್ಯರಲ್ಲಿ ಚಿಕಿತ್ಸೆಗಾಗಿ ಬರುತ್ತಾ ಸುಮಾರು ಇಪ್ಪತ್ತು ವರ್ಷಗಳೇ ಕಳೆದಿದೆ. ಹದಿನೆಂಟನೇ ವಯಸ್ಸಿನಲ್ಲಿ ಹರಿಣಿಗೆ ಮೊದಲ ಬಾರಿ ಮಾನಸಿಕ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಂಡಿದ್ದವು. ಕಾಯಿಲೆಯ ಲಕ್ಷಣಗಳು ಉಲ್ಬಣವಾದಾಗ ಹರಿಣಿಯನ್ನು ತಂದೆತಾಯಿಗಳು ಮನೋವೈದ್ಯರಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದರು. ವೈದ್ಯರು ಇದು ‘ಸ್ಕಿಜೋಫ್ರೀನಿಯಾ’ ಎಂದು ಗುರುತಿಸಿ, ಚಿಕಿತ್ಸೆಯನ್ನು ಪ್ರಾರಂಭಿಸಿದ್ದರು. ಕೆಲವೇ ದಿನಗಳಲ್ಲಿ ಲಕ್ಷಣಗಳು ಒಂದು ಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು. ವೈದ್ಯರೇ ಹೇಳಿದಂತೆ ಈ ರೀತಿಯ ಕಾಯಿಲೆಯಲ್ಲಿ ಸುಮಾರು ಶೇ 70ರಷ್ಟು ರೋಗಿಗಳು ಪೂರ್ಣ ಗುಣಮುಖರಾಗುತ್ತಾರೆ. ಇನ್ನುಳಿದ ಶೇ 30ರಷ್ಟು ಮಂದಿಯಲ್ಲಿ ಕೆಲವು ಲಕ್ಷಣಗಳು ಮಾತ್ರೆಗಳಿಗೆ ಸ್ಪಂದಿಸದೆ ಇರಬಹುದು. ಅದರೊಂದಿಗೆ ಜೀವನ ಮಾಡಬೇಕಾಗುತ್ತದೆ ಎಂದು ಹೇಳಿದ್ದರು. ಹರಿಣಿಯ ದುರದೃಷ್ಟಕ್ಕೆ ಅವಳು ಶೇ 30ರೊಳಗೇ ಬರಬೇಕೇ? ಇದಾಗಿ ಸುಮಾರು ಇಪ್ಪತ್ತು ವರ್ಷಗಳು ಕಳೆದಿವೆ. ಐದಾರು ಬಾರಿ ಕಾಯಿಲೆ ಉಲ್ಬಣವಾಗಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಭರ್ತಿಯಾಗಿ ಚಿಕಿತ್ಸೆ ಪಡೆದಿದ್ದಾಳೆ. ಆಗಾಗ ಮಾತ್ರೆಯನ್ನು ಬಿಟ್ಟುಬಿಡುತ್ತಾಳೆ. ಹರಿಣಿ, ತಂದೆ ತಾಯಿಯ ಸಹಾಯದೊಂದಿಗೆ ಜೀವನವನ್ನು ಈ ಇಪ್ಪತ್ತು ವರ್ಷಗಳ ಕಾಲ ನಡೆಸಿದ್ದಾಳೆ. ತಂದೆ ತೀರಿಕೊಂಡು ಈಗಾಗಲೇ ಎರಡು ವರ್ಷಗಳಾಗಿದೆ. ಈ ಎರಡು ವರ್ಷಗಳಲ್ಲಿ ಹರಿಣಿ ತನ್ನ ವಯಸ್ಸಾದ ತಾಯಿಯೊಂದಿಗೆ ಆಸ್ಪತ್ರೆಗೆ ಬರುತ್ತಾಳೆ. ತಾಯಿಗೆ ಈಗ ಎಪ್ಪತ್ತು ವರ್ಷ ವಯಸ್ಸು. ಹರಿಣಿಯನ್ನು ತೋರಿಸಲು ಆಸ್ಪತ್ರೆಗೆ ಬಂದಾಗ ಹರಿಣಿಯೇನೋ ನಡೆದು ಬರುತ್ತಾಳೆ. ಏರಿದ ರಕ್ತದೊತ್ತಡ, ಬೊಜ್ಜು, ಮಂಡಿನೋವು ಇತ್ಯಾದಿ ಸಮಸ್ಯೆಗಳಿಂದ ಬಳಲುತ್ತಿರುವ ತಾಯಿಗೆ ವೀಲ್ ಚೇರಿನ ಸಹಾಯ ಬೇಕು. ತನ್ನ ಆರೋಗ್ಯ ಹೀಗಿರುವಾಗ, ತನ್ನ ನಂತರ ಮಗಳ ಗತಿಯೇನು – ಎಂದು ತಾಯಿ ಚಿಂತಿಸಿ ಚಿಂತಿಸಿ ತಾನೇ ಖಿನ್ನತೆಗೆ ಜಾರುತ್ತಿದ್ದಾಳೆ.

ತೀವ್ರತರಹದ ಮಾನಸಿಕ ರೋಗಗಳು

1950ರ ದಶಕದಲ್ಲಿ ಮಾನಸಿಕ ರೋಗದ ಲಕ್ಷಣಗಳಿಗೆ ಮೊದಲ ಮಾತ್ರೆಯನ್ನು ಕಂಡುಹಿಡಿದರು. ಅಂದಿನಿಂದ ಇಲ್ಲಿಯವರೆಗೆ ಸಾಕಷ್ಟು ಬೇರೆ ಬೇರೆ ರೀತಿಯ ಔಷಧಗಳು ಮತ್ತು ವಿಶೇಷ ರೀತಿಯ ಆಪ್ತಸಮಾಲೋಚನಾಕ್ರಮಗಳು ಲಭ್ಯವಾಗಿವೆ. ಬಹಳಷ್ಟು ಮಂದಿ ಪೂರ್ಣ ಗುಣಮುಖರಾಗಿ ಸಹಜ ಜೀವನವನ್ನು ನಡೆಸುತ್ತಾರೆ. ಆದರೂ ತೀವ್ರ ತರಹದ ಮಾನಸಿಕ ರೋಗ ಇರುವಂತಹ ಕೆಲವೇ ಕೆಲವರಲ್ಲಿ ಪೂರ್ಣಮಟ್ಟಿಗೆ ಕಾಯಿಲೆ ಶಮನಗೊಳ್ಳುವುದಿಲ್ಲ. ಕಾಳಜಿ ವಹಿಸುವ ತಂದೆ ತಾಯಿಗಳಿಗೆ ವಯಸ್ಸಾಗುತ್ತದೆ, ತಮ್ಮದೇ ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ನಾವಿದ್ದಾಗ/ ನಾನಿದ್ದಾಗ ಹೇಗೋ ಪರವಾಗಿಲ್ಲ, ನನ್ನ ಅಥವಾ ನಮ್ಮ ನಂತರ ಇವನ/ಳ ಗತಿಯೇನು ಎಂಬ ಪ್ರಶ್ನೆ ಕಾಡುತ್ತದೆ.

ತರಬೇತಿ ಎಷ್ಟೇ ತೀವ್ರ ತರಹದ ಮಾನಸಿಕ ಕಾಯಿಲೆ ಇದ್ದರೂ ಸರಿಯಾದ ಚಿಕಿತ್ಸೆಯಿಂದ ಶೇ 70ರಷ್ಟು ಲಕ್ಷಣಗಳು ಕಡಿಮೆಯಾಗುತ್ತವೆ. ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳುವ ಮಟ್ಟಿಗೆ ತಯಾರಾಗುತ್ತಾರೆ. ಆದರೆ ಅವರಿಗೆ ಯಾರದಾದರೂ ಮೇಲ್ವಿಚಾರಣೆ ಬೇಕಾಗಬಹುದು. ಪೋಷಕರು ಮೊದಲು ಮಾಡಬೇಕಾದ ಕಾರ್ಯ, ಈ ವ್ಯಕ್ತಿಗಳಿಗೆ ಸಣ್ಣಪುಟ್ಟ ಅಡುಗೆಯ ಕೆಲಸಗಳನ್ನು ಮಾಡಿಕೊಳ್ಳುವ ತರಬೇತಿಯನ್ನು ನೀಡಬೇಕಾದ್ದು. ಹಾಲು ಕಾಯಿಸುವುದು, ಅನ್ನವನ್ನು ಮಾಡಿಕೊಳ್ಳುವುದು, ಸರಳವಾಗಿ ಸಾರನ್ನು ಮಾಡಿಕೊಳ್ಳುವ ವಿಧಾನ, ಮುಂತಾದವು. ಇನ್ನು ಕೆಲವು ಬಾರಿ ಪಕ್ಕದ ಹೋಟೆಲ್/ಕ್ಯಾಂಟೀನ್ನಿಂದ ಅನ್ನ, ಸಾರು, ಚಪಾತಿ, ಪಲ್ಯವನ್ನು ತಂದುಕೊಳ್ಳುವುದನ್ನು ಅಭ್ಯಾಸ ಮಾಡಿಸಬಹುದು. ತಟ್ಟೆ/ ಲೋಟಗಳನ್ನು ತೊಳೆದುಕೊಳ್ಳುವುದು, ತಮ್ಮ ಬಟ್ಟೆಯನ್ನು ಒಗೆದುಕೊಳ್ಳುವುದು ಕಲಿಸಬೇಕು.

ಗಾರ್ಡಿಯನ್ ನೇಮಕ

ಕುಟುಂಬದಲ್ಲಿ ಯಾರ ಬಳಿ ಮಗ ಅಥವಾ ಮಗಳ ಜವಾಬ್ದಾರಿಯನ್ನು ಒಪ್ಪಿಸುತ್ತೀರಾ – ಎಂಬುದರ ಬಗ್ಗೆ ಸಮಾಲೋಚಿಸಿ ತೀರ್ಮಾನಕ್ಕೆ ಬರಬೇಕು. ಸಾಮಾನ್ಯವಾಗಿ ರಕ್ತಸಂಬಂಧಿಗಳು ಅಥವಾ ಇತರ ಕುಟುಂಬ ಸ್ನೇಹಿತರಾಗಬಹುದು. ಆ ವ್ಯಕ್ತಿ ನಂಬಿಕೆಗೆ ಅರ್ಹರೇ? ಅವರಿಗೆ ಈ ಜವಾಬ್ದಾರಿಯ ಕುರಿತು ಅರಿವಿದೆಯೇ? ಕಾನೂನಿನ ಪ್ರಕಾರ ಸರಿಯೇ? ಎಲ್ಲವನ್ನೂ ಕೂಲಂಕಷವಾಗಿ ಯೋಚಿಸಬೇಕು. ಮಗ ಅಥವಾ ಮಗಳನ್ನು ಭವಿಷ್ಯದಲ್ಲಿ ಇವರು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಮಾನಸಿಕ ಆರೋಗ್ಯ ಕಾಳಜಿ ಕಾಯ್ದೆಯಡಿ ಈ ವ್ಯಕ್ತಿಯನ್ನು ‘Nominated Representative’ (ನಾಮನಿರ್ದೇಶನ ಮಾಡಲ್ಪಟ್ಟ ಪ್ರತಿನಿಧಿ) ಎಂದು ಕರೆಯುತ್ತಾರೆ. ಈ ಕಾಯ್ದೆಯಡಿ, ಮನೋರೋಗ ಚಿಕಿತ್ಸೆಗೆ ಸಂಬಂಧಪಟ್ಟ ನಿರ್ಧಾರಗಳನ್ನು ರೋಗಿಯಹಿತಾಸಕ್ತಿಯಲ್ಲಿ ಈ ವ್ಯಕ್ತಿಗೆ ತೆಗೆದುಕೊಳ್ಳುವ ಹಕ್ಕಿದೆ.

ಚಿಕಿತ್ಸೆಯ ಅರಿವು

ಹಲವಾರು ಸಂದರ್ಭಗಳಲ್ಲಿ ನಿಯಮಿತವಾಗಿ ಒಂದು ಮನೋರೋಗಿಯ ಕಾಳಜಿಯನ್ನು ವಹಿಸುತ್ತಿದ್ದ ವ್ಯಕ್ತಿಯ ಸಾವಾದಾಗ, ಮನೆಯ ಇತರ ವ್ಯಕ್ತಿಗಳಿಗೆ ರೋಗಿಯ ಕಾಳಜಿ, ಚಿಕಿತ್ಸೆ, ವೈದ್ಯರು, ಮಾತ್ರೆಗಳನ್ನು ಕೊಡುವ ಕ್ರಮ, ಇತ್ಯಾದಿ ವಿವರಗಳ ಬಗ್ಗೆ ಅರಿವೇ ಇರುವುದಿಲ್ಲ. ಅದಕ್ಕಾಗಿಯೇ ಯಾವ ಮನೋವೈದ್ಯರಲ್ಲಿ ಮಗ ಅಥವಾ ಮಗಳನ್ನು ಚಿಕಿತ್ಸೆಗಾಗಿ ಕರೆದೊಯ್ಯುತ್ತಾರೋ ಅವರ ಬಳಿ ಈ ನಿಯೋಜಿತ ವ್ಯಕ್ತಿಯನ್ನು ಅಥವಾ ಗಾರ್ಡಿಯನ್‌ನನ್ನು ಕರೆದುಕೊಂಡು ಹೋಗಿ ಪರಿಚಯಿಸಿ ಚಿಕಿತ್ಸಾಕ್ರಮಗಳ ಬಗ್ಗೆ ತಿಳಿಸುವುದು ಅತ್ಯಂತ ಅವಶ್ಯಕ.

ಆರ್ಥಿಕ ಸಂಪನ್ಮೂಲ

ವ್ಯಕ್ತಿಗೆ ಈಗಾಗಲೇ ಆರ್ಥಿಕ ಸಂಪನ್ಮೂಲಗಳಿದ್ದರೆ ಅದರ ದುರುಪಯೋಗ ಇತರರು ಮಾಡದಂತೆ ಎಚ್ಚರಿಕೆಯನ್ನು ವಹಿಸುವುದು ಅಗತ್ಯ. ಈ ಕಾರಣಕ್ಕಾಗಿ ತಮ್ಮ ವಕೀಲರೊಂದಿಗೆ ಸಮಾಲೋಚಿಸಿ, ಟ್ರಸ್ಟ್ ರೀತಿಯ ಒಂದು ವ್ಯವಸ್ಥೆಯನ್ನು ಮಾಡಬಹುದು. ಮಾನಸಿಕ ಆರೋಗ್ಯ ಕಾಳಜಿ ಕಾಯ್ದೆಯ ಅನ್ವಯ ಮಾನಸಿಕ ರೋಗಿಗಳನ್ನು ನೋಡಿಕೊಳ್ಳುವ ಹೊಣೆ ಸರ್ಕಾರದ್ದು ಎಂಬುದಾಗಿ ಇದೆಯಾದರೂ, ಈ ರೀತಿಯ ಕಾರಣಕ್ಕಾಗಿ ಸರ್ಕಾರಿ ಸಂಸ್ಥೆಗಳು ಅಷ್ಟಾಗಿ ಇಲ್ಲದಿರುವುದು ನಮ್ಮ ದುರದೃಷ್ಟವೇ ಸರಿ.

ಮದುವೆ ಮಾಡಿದರೆ ಹೇಗೆ?

ಮದುವೆ ಇದಕ್ಕೆ ಪರಿಹಾರವೇ ಎಂಬ ಪ್ರಶ್ನೆ ಎಲ್ಲರಿಗೂ ಉದ್ಭವಿಸುತ್ತದೆ. ನಿಜ, ಯಾವುದೇ ವ್ಯಕ್ತಿಗೆ ಕಾಳಜಿ ವಹಿಸುವ ಗಂಡ ಅಥವಾ ಹೆಂಡತಿ ಇದ್ದರೆ ಅದು ಬೆಲೆ ಕಟ್ಟಲಾಗದ ಬಹುದೊಡ್ಡ ಆಸ್ತಿ. ಹಾಗೆಂದು ಆ ಕಾರಣಕ್ಕಾಗಿಯೇ ಮದುವೆಯನ್ನು ಮಾಡುವುದು ಉಚಿತವಲ್ಲ. ಮದುವೆಯಾಗುವ ವ್ಯಕ್ತಿ ವೈವಾಹಿಕ ಜೀವನದ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯವಿದ್ದರೆ ಮಾತ್ರ ವಿವಾಹ ಯಶಸ್ವಿಯಾಗುತ್ತದೆ.

ಒಟ್ಟಿನಲ್ಲಿ, ತೀವ್ರತರಹದ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳ ಪೋಷಕರು, ‘ನನ್ನ ನಂತರ ಏನು?’ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತ ಖಿನ್ನರಾಗುವ ಅಗತ್ಯವಿಲ್ಲ. ಸರಿಯಾದ ಪೂರ್ವತಯಾರಿ ಇದ್ದರೆ, ಸಮಸ್ಯೆಯಾಗದು.



ಮಕ್ಕಳಿಗೂ ಬರಬಹುದು ಮಧುಮೇಹ!



• ಡಾ. ಕುಶ್ವಂತ್ ಕೋಳಿಬೈಲು

ಮಧುಮೇಹದಿಂದ (ಸಕ್ಕರೆಕಾಯಿಲೆ, ಡಯಾಬಿಟಿಸ್) ಭಾರತದಲ್ಲಿ ಬಳಲುವವರ ಸಂಖ್ಯೆ ಸುಮಾರು ಹತ್ತು ಕೋಟಿಗೂ ಅಧಿಕ. ಮಧುಮೇಹಕ್ಕೆ ಸೂಕ್ತ ಚಿಕಿತ್ಸೆ ದೊರಕದೆ ರಕ್ತದಲ್ಲಿ ಸಕ್ಕರೆಯ ಪ್ರಮಾಣವು ಬಹಳ ಸಮಯದ ಕಾಲ ಅಧಿಕವಾಗಿದ್ದರೆ ಅದು ದೇಹದ ಎಲ್ಲ ಅಂಗಾಂಗಗಳ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ಪ್ಯಾಂಕ್ರಿಯಾಸ್ ಗ್ರಂಥಿಯು ‘ಇನ್ಸುಲಿನ್’ ಎಂಬ ಹಾರ್ಮೋನನ್ನು ಉತ್ಪಾದನೆ ಮಾಡುತ್ತದೆ. ರಕ್ತದಲ್ಲಿ ಸಕ್ಕರೆಯ ಅಂಶ ಜಾಸ್ತಿಯಾದಾಗ ಅದನ್ನು ದೇಹವು ಬಳಸುವಂತೆ ಮಾಡುವುದರ ಜೊತೆಗೆ ರಕ್ತದಲ್ಲಿರುವ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸುವುದು ಇನ್ಸುಲಿನ್ ಹಾರ್ಮೋನಿನ ಕೆಲಸವಾಗಿದೆ. ದೇಹದಲ್ಲಿ ಇನ್ಸುಲಿನ್ ಉತ್ಪಾದನೆ ನಿಂತುಹೋದರೆ ಅಥವಾ ದೇಹದೊಳಗೆ ಇನ್ಸುಲಿನ್ ಕೆಲಸ ಮಾಡದಂತಹ ವಾತಾವರಣ ನಿರ್ಮಾಣವಾದಾಗ ಮಧುಮೇಹ ಕಾಯಿಲೆಯು ಬರುತ್ತದೆ. ಮಧುಮೇಹವನ್ನು ಶೀಘ್ರವಾಗಿ ಪತ್ತೆಹಚ್ಚುವುದು ಮತ್ತು ರಕ್ತದಲ್ಲಿರುವ ಸಕ್ಕರೆಯ ಪ್ರಮಾಣವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದರಿಂದ ದೇಹದ ಇತರ ಅಂಗಾಂಗಗಳು ವೈಫಲ್ಯವಾಗದಂತೆ ತಡೆಯಬಹುದು.

ಮಧುಮೇಹವು ನಡುವಯಸ್ಸಿನ ನಂತರ ಬರುವ ಕಾಯಿಲೆಯೆಂಬ ಕಲ್ಪನೆಯು ಜನಸಾಮಾನ್ಯರಿಗೆ ಇದೆ. ನಿವೃತ್ತಿಯ ವಯೋಮಾನದಲ್ಲಿ ರಕ್ತದೊತ್ತಡ ಮತ್ತು ಮಧುಮೇಹ ಬರುವ ಸಮಯವೆಂದು ಯುವಕ-ಯುವತಿಯರು ತಮ್ಮ ರಕ್ತದಲ್ಲಿರುವ ಸಕ್ಕರೆಯ ಪ್ರಮಾಣವನ್ನು ಪತ್ತೆ ಹಚ್ಚಲು ಹಿಂದೇಟು ಹಾಕುತ್ತಾರೆ. ಇತ್ತೀಚಿನ ವರದಿಗಳ ಪ್ರಕಾರ ಇಪ್ಪತ್ತು ವರ್ಷ ವಯೋಮಾನದ ಸುಮಾರು ಮೂರು ಲಕ್ಷ ಭಾರತೀಯರು ಮಧುಮೇಹದಿಂದ ಬಳಲುತ್ತಿದ್ದಾರೆ.

ಮಧುಮೇಹವು ಚಿಕ್ಕಮಕ್ಕಳಲ್ಲಿಯೂ ಬರಬಹುದಾಗಿದೆ. ವೈದ್ಯರು ಮತ್ತು ಹೆತ್ತವರು ಮಕ್ಕಳಲ್ಲಿ ಬರುವ ಮಧುಮೇಹವನ್ನು ಪತ್ತೆಹಚ್ಚಲು ತಡಮಾಡುತ್ತಾರೆ. ಇಂತಹ ಮಕ್ಕಳ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಅತ್ಯಧಿಕವಾಗಿ ಮಗುವಿನ ಆರೋಗ್ಯವು ಬಹಳ ನಾಜೂಕಾಗಿರುವ ಹಂತದಲ್ಲಿ ಆಸ್ಪತ್ರೆಗೆ ದಾಖಲಾಗುತ್ತಾರೆ. ಮಕ್ಕಳಲ್ಲಿ ಕಂಡುಬರುವ ಮಧುಮೇಹವನ್ನು ನಾವು ‘ಟೈಪ್ ಒನ್’ ಮಧುಮೇಹ ಎಂದು ವಿಭಾಗಿಸುತ್ತೇವೆ. ಈ ಕಾಯಿಲೆಯಲ್ಲಿ ಮಕ್ಕಳ ದೇಹದ ಪ್ಯಾಂಕ್ರಿಯಾಸ್ ಗ್ರಂಥಿಯು ನಾಶವಾಗಿ ದೇಹವು ಇನ್ಸುಲಿನ್ ಉತ್ಪಾದಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ದೇಹದ ರೋಗನಿರೋಧಕ ಶಕ್ತಿಯು ಕೆಲವೊಮ್ಮೆ ಇನ್ಸುಲಿನ್ ಉತ್ಪಾದನೆ ಮಾಡುವ ಕಣಗಳನ್ನು ನಾಶಗೊಳಿಸುತ್ತದೆ. ಇದರಿಂದ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಏರುತ್ತಹೋಗುತ್ತದೆ. ದೇಹದಲ್ಲಿ ಸಕ್ಕರೆಯ ಪ್ರಮಾಣ ಜಾಸ್ತಿಯಾದಂತೆ ಹೆಚ್ಚಿನ ಮೂತ್ರವು ಉತ್ಪಾದನೆಯಾಗುತ್ತದೆ ಮತ್ತು ಸಕ್ಕರೆಯು ಮೂತ್ರದ ಮೂಲಕ ದೇಹದ ಹೊರಗೆ ಹೋಗುತ್ತದೆ. ದೇಹದಲ್ಲಿ ನಿರ್ಜಲೀಕರಣ ಉಂಟಾಗುವುದರಿಂದ ದಾಹವು ಹೆಚ್ಚಾಗಬಹುದು. ದೇಹದ ತೂಕವು ಕಡಿಮೆಯಾಗುತ್ತಾ ಹೋಗುತ್ತದೆ. ಇಂತಹ ಮಕ್ಕಳ ದೇಹದಲ್ಲಿ ಇನ್ಸುಲಿನ್ ಸಂಪೂರ್ಣವಾಗಿ ಖಾಲಿಯಾದಾಗ ‘ಡಯಾಬಿಟಿಕ್ ಕಿಟೋಎಸಿಡೋಸಿಸ್’ ಎಂಬ ಚಿಂತಾಜನಕ ಸ್ಥಿತಿಗೆ ಮಕ್ಕಳು ಬರುತ್ತಾರೆ. ಇಂತಹ ಸ್ಥಿತಿಯಲ್ಲಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಾಗುವ ಮಕ್ಕಳನ್ನು ಪರೀಕ್ಷೆ ಮಾಡಿದಾಗ ರಕ್ತದಲ್ಲಿ ಸಕ್ಕರೆಯು ಏರಿರುವುದು ಕಂಡುಬರುತ್ತದೆ.

ಮೊದಲಿಗೆ ಡಯಾಬಿಟಿಕ್ ಕಿಟೋಎಸಿಡೋಸಿಸ್ ಸ್ಥಿತಿಯಲ್ಲಿರುವ ಮಗುವಿನ ದೇಹವನ್ನು ನಿರ್ಜಲೀಕರಣದ ಸ್ಥಿತಿಯಿಂದ ಹೊರತಂದು ಕೃತಕ ಇನ್ಸುಲಿನ್ ನೀಡಲು ಪ್ರಾರಂಭಿಸುತ್ತಾರೆ. ಚಿಕ್ಕಮಕ್ಕಳ ದೇಹದೊಳಗೆ ಇನ್ಸುಲಿನ್ ತಯಾರಿಸುವ ಕಣಗಳು ನಾಶವಾದ ಕಾರಣ ಮಧುಮೇಹ ಬಂದಿದೆಯೆಂಬ ವಿಚಾರವನ್ನು ಹೆತ್ತವರಿಗೆ ತಿಳಿಸುವುದು ಕೂಡ ಸವಾಲಿನ ಸಂಗತಿಯಾಗಿದೆ. ಹೆತ್ತವರು ಅಷ್ಟು ಸಣ್ಣ ಪ್ರಾಯದಲ್ಲಿ ತಮ್ಮ ಮಕ್ಕಳಿಗೆ ಮಧುಮೇಹ ಬಂದಿದೆಯೆಂದು ಮೊದಲ ಬಾರಿಗೆ ವೈದ್ಯರು ಹೇಳಿದಾಗ ಒಪ್ಪಲು ತಯಾರಿರುವುದಿಲ್ಲ. ಸಿಹಿತಿಂಡಿಗಳನ್ನು ತಿನ್ನುವುದರಿಂದ ಮಕ್ಕಳಿಗೆ ಮಧುಮೇಹ ಬರುವುದಿಲ್ಲ ಮತ್ತು ಸಿಹಿತಿಂಡಿಗಳನ್ನು ತಿನ್ನುವುದನ್ನು ಬಿಟ್ಟರೆ ಮಧುಮೇಹ ಗುಣವಾಗುವುದಿಲ್ಲ ಎಂಬುದನ್ನು ಹೆತ್ತವರಿಗೆ ತಿಳಿಸಬೇಕಾಗುತ್ತದೆ. ತಮ್ಮ ಮಕ್ಕಳ ದೇಹದಲ್ಲಿ ಮಾತ್ರ ಇನ್ಸುಲಿನ್ ಉತ್ಪಾದನೆ ನಿಂತುಹೋಗಿರುವುದು ಹೆತ್ತವರಿಗೆ ಯಕ್ಷಪ್ರಶ್ನೆಯಾಗಿ ಕಾಡುತ್ತದೆ. ಮಗುವಿಗೆ ಜೀವನಪರ್ಯಂತ ಇನ್ಸುಲಿನ್ ಚುಚ್ಚುಮದ್ದುಗಳನ್ನು ತೆಗೆದುಕೊಳ್ಳುವ ಅಗತ್ಯ ಬರುವ ಕಾರಣ ಹೆತ್ತವರಿಗೆ ಸೂಕ್ತತರಬೇತಿ ಮತ್ತು ಮಾರ್ಗದರ್ಶನಗಳನ್ನು ನೀಡಬೇಕಾಗಿ ಬರುತ್ತದೆ.

ಕೆಲವು ದಶಕಗಳ ಹಿಂದೆ ಮಕ್ಕಳಲ್ಲಿ ಟೈಪ್ ಒನ್ ಮಧುಮೇಹ ಕಂಡುಬಂದಾಗ ಚಿಕಿತ್ಸೆ ನೀಡುವುದು ಬಹಳ ತ್ರಾಸದಾಯಕವಾಗಿತ್ತು. ಹೆತ್ತವರು ಮಗುವಿನ ತೂಕಕ್ಕೆ ಅನುಗುಣವಾಗಿ ಇನ್ಸುಲಿನ್ ಚುಚ್ಚುಮದ್ದನ್ನು ಸಿರಿಂಜಿನಲ್ಲಿ ತುಂಬಿ ದಿನಕ್ಕೆ ಎರಡು-ಮೂರು ಬಾರಿ ಮಕ್ಕಳಿಗೆ ಚುಚ್ಚಬೇಕಾಗಿತ್ತು. ಇದರ ಜೊತೆಗೆ ಮಕ್ಕಳ ರಕ್ತದಲ್ಲಿ ಸಕ್ಕರೆಯ ಪ್ರಮಾಣವನ್ನು ದಿನಕ್ಕೆ ಒಂದೆರಡು ಬಾರಿ ಪರೀಕ್ಷೆ ಮಾಡಬೇಕಿತ್ತು. ಇದು ಮಗುವಿಗೆ ನೋವು ಮತ್ತು ಹೆತ್ತವರಿಗೆ ಕಿರಿಕಿರಿಯನ್ನು ಉಂಟುಮಾಡುತ್ತಿತ್ತು. ಈಗ ಇನ್ಸುಲಿನ್ ತುಂಬಿದ ಪೆನ್ ಮಾದರಿಯ ಸಲಕರಣೆಗಳ ಸಹಾಯದಿಂದ ನೋವಿಲ್ಲದೆ ಇನ್ಸುಲಿನ್ ಅನ್ನು ದೇಹಕ್ಕೆ ನೀಡಬಹುದು. ದೇಹದೊಳಗೆ ಅಳವಡಿಸಿಕೊಳ್ಳುವ ಸಾಧನಗಳಿಂದ ರಕ್ತದ ಸಕ್ಕರೆಯ ಪ್ರಮಾಣವನ್ನು ಚುಚ್ಚದೆಯೆ ತಿಳಿಯಬಹುದು. ರಕ್ತದ ಸಕ್ಕರೆಯ ಪ್ರಮಾಣವನ್ನು ಆಧರಿಸಿ ಅದರ ಆಧಾರದಲ್ಲಿ ಇನ್ಸುಲಿನ್ ಬಿಡುಗಡೆ ಮಾಡುವ ಕೃತಕ ಸಾಧನಗಳನ್ನು ಮಕ್ಕಳ ದೇಹದೊಳಗೆ ಜೋಡಿಸಬಹುದಾಗಿದೆ. ವೈಜ್ಞಾನಿಕ ತಂತ್ರಜ್ಞಾನ ಮುಂದುವರಿದಂತೆ ಗಂಭೀರ ಕಾಯಿಲೆಗಳ ಚಿಕಿತ್ಸೆಗಳು ರೋಗಿಯ ಅನುಕೂಲತೆಯ ದೃಷ್ಟಿಯಿಂದ ಸುಧಾರಿಸಿದೆ.

ಒಲಿಂಪಿಕ್ಸ್ ಕೂಟದ ಈಜು ಸ್ಪರ್ಧೆಯಲ್ಲಿ ಹತ್ತು ಪದಕ ಪಡೆದ ಅಮೆರಿಕ ಗ್ಯಾರಿ ಹಾಲ್ ಮತ್ತು ವಿಶ್ವ ಕಂಡ ಶ್ರೇಷ್ಠ ವೇಗದ ಬೌಲರ್ ವಸೀಂ ಅಕ್ರಮ್ ಕೂಡ ಇನ್ಸುಲಿನ್ ಪಡೆಯುತ್ತ ತಮ್ಮ ಕ್ರೀಡಾಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದವರು. ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ಇನ್ಸುಲಿನ್ ಮೂಲಕ ನಿಯಂತ್ರಿಸಿದ್ದಲ್ಲಿ ಡಯಾಬಿಟಿಸ್ ಇರುವ ಮಕ್ಕಳು ಇತರ ಮಕ್ಕಳಂತೆಯೇ ಬಾಳಬಹುದು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ವರ್ಗ ಸಮೀಕರಣ

3) ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x-2)^2+1=2x-3$ (ii) $x(x+1)+8=(x+2)(x-2)$
(iii) $x(2x+3)=x^2+1$ (iv) $(x+2)^3=x^3-4$

ಪರಿಹಾರ :

(i) ಎಡಭಾಗ $= (x-2)^2+1$
$= x^2-4x+4+1$
$= x^2-4x+5$
$\therefore (x-2)^2+1 = 2x-3$
$x^2-4x+5 = 2x-3$

ಅಂದರೆ $x^2-6x+8 = 0$ ಇದು $ax^2+bx+c = 0$ ರೂಪದಲ್ಲಿದೆ. ಆದ್ದರಿಂದ, ದತ್ತ ಸಮೀಕರಣವು ಒಂದು ವರ್ಗ ಸಮೀಕರಣವಾಗಿದೆ.

(ii) $x(x+1)+8 = (x+2)(x-2)$
$x^2+x+8 = x^2-4$
ಅಂದರೆ $x+12=0$
ಇದು $ax^2+bx+c=0$ ರೂಪದಲ್ಲಿಲ್ಲ.
ಆದ್ದರಿಂದ, ದತ್ತ ಸಮೀಕರಣವು ವರ್ಗ ಸಮೀಕರಣವಲ್ಲ.

(iii) ಇಲ್ಲಿ, $x(2x+3) = 2x^2+3x$
$\therefore x(2x+3) = x^2+1$ ಇದನ್ನು
$2x^2+3x = x^2+1$ ಎಂದು ಬರೆಯಬಹುದು.
$2x^2+3x = x^2+1$
$x^2+3x-1 = 0.$
ಇದು $ax^2+bx+c = 0$ ರೂಪದಲ್ಲಿದೆ.
ಆದ್ದರಿಂದ, ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

(iv) $(x+2)^3 = x^3-4$
$x^3+6x^2+12x+8 = x^3-4$
ಅಂದರೆ $6x^2+12x+12 = 0$
ಅಥವಾ $x^2+2x+2 = 0$
ಇದು $ax^2+bx+c = 0$ ರೂಪದಲ್ಲಿದೆ.
ಆದ್ದರಿಂದ, ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ

ಅಭ್ಯಾಸ 4.1

ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ

(i) $(x+1)^2 = 2(x-3)$
(ii) $x^2-2x=(-2)(3-x)$
(iii) $(x-2)(x+1)=(x-1)(x+3)$
(iv) $(x-3)(2x+1) = x(x+5)$
(v) $(2x-1)(x-3) = (x+5)(x-1)$
(vi) $x^2+3x+1=(x-2)^2$
(viii) $x^3-4x^2-x+1=(x-2)^3$

ಪರಿಹಾರ:–

(i)
$(x+1)^2 = 2(x-3)$
$x^2+2x+1 = 2x-6$
$x^2+7=0$
ಚರಾಕ್ಷರ ಮಹತ್ತಮ ಘಾತವು = 2

ಇದು ವರ್ಗ ಸಮೀಕರಣವಾಗಿದೆ.

(ii) $x^2-2x=(-2)(3-x)$
$\Rightarrow x^2-2x=-6+2x$
$\Rightarrow x^2-4x+6=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿದೆ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

(iii) $(x-2)(x+1)=(x-1)(x+3)$
$\Rightarrow x^2+x-2x-2=x^2+3x-x-3$
$\Rightarrow x^2-x-2=x^2+`2X-3$
$\Rightarrow 3X-1=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿ ಇಲ್ಲ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿಲ್ಲ.

(iv) $(x-3)(2x+1)=x(x+5)$
$2x^2+x-6x-3=x^2+5x$
$\Longrightarrow 2x^2-5x-3=x^2+5x$
$\Longrightarrow x^2-10x-3=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿದೆ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

v) $(2x-1)(x-3)=(x+5)(x-1)$
$(2x-1)(x-3)=(x+5)(x-1)$
$2x^2-6x-x+3=x^2-x+5x-5$
$\Rightarrow 2x^2-7x+3=x^2+4x-5$
$\Rightarrow x^2-11x+8=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿದೆ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

(vi) $x^2+3x+1=(x-2)^2$
$x^2-3x+1=x^2+4x+4$
$\Longrightarrow 7x-3=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿ ಇಲ್ಲ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿಲ್ಲ.

(viii) $x^3-4x^2-x+1=(x-2)^3$
$x^3-4x^2-x+1=(x-2)^3$
$x^3-4x^2-x+1=x^3-8-6x^2+12x$
$\Rightarrow 2x^2-13x-9=0$
ಇದು $ax^2+bx+c=0$ $a\neq0$ ಆದರ್ಶ ರೂಪದಲ್ಲಿದೆ ಆದ್ದರಿಂದ ದತ್ತ ಸಮೀಕರಣವು ವರ್ಗ ಸಮೀಕರಣವಾಗಿದೆ.

2) ಈ ಸನ್ನಿವೇಶಗಳನ್ನು ವರ್ಗ ಸಮೀಕರಣಗಳ ರೂಪದಲ್ಲಿ ವ್ಯಕ್ತಪಡಿಸಿ.

(i) ಒಂದು ಆಯತಾಕಾರದ ನಿವೇಶನದ ವಿಸ್ತೀರ್ಣವು $528m^2$ ಆಗಿದೆ. ನಿವೇಶನದ ಉದ್ದವು (ಮೀಟರ್‌ಗಳಲ್ಲಿ) ಅದರ ಅಗಲದ ಎರಡಷ್ಟಕ್ಕಿಂತ ಒಂದು ಹೆಚ್ಚಾಗಿದೆ. ಆ ನಿವೇಶನದ ಉದ್ದ ಮತ್ತು ಅಗಲಗಳನ್ನು ನಾವು ಕಂಡುಹಿಡಿಯಬೇಕಾಗಿದೆ.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


PHYSICS

Chapter – 2

ELECTROSTATIC POTENTIAL AND CAPACITANCE

45. Depict the equipotential surfaces for a system of two identical positive point charges placed at distance *d* apart.


Ans: (.....Contd)



46. Given figure shows the variation of electric potential V with 1/r (where r is the distance from the point charge for 2 charges Q_1 & Q_2)
(i) Give signs of two charges Q_1 and Q_2
(ii) Which of the two charges has a larger magnitude? Justify.

Ans:- (i) Electric potential due to a point charge Q at a point at distance r from Q is given by,

$$V = \frac{1}{4\pi\epsilon_0}\frac{Q}{r}$$



V is +ve if Q is +ve and V is -ve if Q is -ve. Therefore, Q_1 is +ve charge and Q_2 is -ve charge.
ii) Since $V_2 > V_1$ so charge Q_2 has larger magnitude than that

CAPACITANCE

Answer the following questions:-

1. What are capacitors?
Ans:- Capacitors are electrical devices used for storing large quantity of charge and hence electrical energy.

2. What is capacitance of a capacitor?
Ans:- The capacitance of a capacitor is defined as the ratio of the magnitude of charge on either conductor to the potential difference between the conductors forming the capacitor.

3. Which are the different types of the capacitors?
Ans:- The different types of the capacitors are - Parallel plate capacitor, Spherical capacitor and Cylindrical capacitor.

4. Define the dielectric constant.
Ans:- Dielectric constant of a medium is merely the ratio between the capacitance of a capacitor with medium as dielectric and the capacity of the same capacitor with the air as dielectric.

5. What is the S.I unit of the capacitance? What is one picofarad?
Ans:- The S.I unit of the capacitance is Farad. One picofarad = 10^{-12} F.

6. Can desired charge be given to the capacitor?
Ans:- No, the desired amount of charge cannot be given to the capacitor, because the maximum charge that can be given to a capacitor is limited by the dielectric strength of the medium between the two plates of the capacitor.

7. Give reason why water has a much greater dielectric constant (= 80) than mica (= 6)?
Ans:- Water has a much greater dielectric constant (= 80) than mica (= 6) because water molecules have a permanent dipole moment while the molecules of mica do not have it.

8. Why does the electric field inside a dielectric decrease, when it is placed in an external electric field?
Ans:- When a dielectric is placed in an external electric field, the electric field due to polarization of the dielectric opposes it. Hence, the dielectric field gets reduced.

9. Two metallic spheres of same radii, one solid and the other hollow are charged to the same potential. Which of the two will hold more charge?
Ans: - Two metallic spheres of same radii, both hold the same amount of charge, no matter they are hollow or solid the amount of charge holding capacity only depends on the radius of the capacitor.

10. Define the Farad.
Ans:- The capacitance of the conductor is said to be one farad if the addition of one coulomb of charge raises its potential by one volt. It is equal to 1 coulomb/volt.

11. What is the nature of the electric field between the oppositely charged plates of a parallel plate capacitor?
Ans:- The electric field between the oppositely charged plates of a parallel plate capacitor is uniform. The field is distorted at the edges.

12. What happens to the charge on a parallel plate capacitor when the p.d between its plates is doubled?
Ans:- The charge on a parallel plate capacitor gets doubled, when the p.d between its plates is doubled.

13. A metal foil is placed midway between the plates of a parallel plate capacitor. What is the capacitance of the capacitor? *(Contd….)*

‘ಶುಚಿ’ಗೆ ₹71.83 ಕೋಟಿ

ಶಾಲೆ– ಹಾಸ್ಟೆಲ್‌ಗಳ 19.64 ಲಕ್ಷ ಹೆಣ್ಣು ಮಕ್ಕಳು ಫಲಾನುಭವಿಗಳು

ಪ್ರಮುಖ ಅಂಶಗಳು
- ಪ್ರತಿ ಯೂನಿಟ್ ನ್ಯಾಪ್ಕಿನ್‌ಗೆ ₹30.47 ವೆಚ್ಚ
- ಕೆಎಸ್‌ಎಂಎಸ್‌ಸಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2025–26) ಸರ್ಕಾರಿ, ಅನುದಾನಿತ ಶಾಲೆಗಳು, ಕಾಲೇಜುಗಳು ಮತ್ತು ಹಾಸ್ಟೆಲ್‌ಗಳ ಹದಿಹರೆಯದ 19.64 ಲಕ್ಷ ಹೆಣ್ಣು ಮಕ್ಕಳಿಗೆ ‘ಶುಚಿ’ ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ಖರೀದಿಸಿ, ವಿತರಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶಕ್ಕೆ ₹71.83 ಕೋಟಿ ಅನುದಾನದ ಅಗತ್ಯವಿದೆ ಎಂದು ಆರೋಗ್ಯ ಇಲಾಖೆಯು ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಿದೆ.

ಪ್ರತಿ ಫಲಾನುಭವಿಗೆ ತಿಂಗಳಿಗೆ ಒಂದು ಯೂನಿಟ್‌ನಂತೆ (ತಲಾ 10 ಪ್ಯಾಡ್‌ಗಳು) 12 ತಿಂಗಳ ಅವಧಿಗೆ 2.35 ಕೋಟಿ ಯೂನಿಟ್ ಸ್ಯಾನಿಟರಿ ನ್ಯಾಪ್ಕಿನ್‌ಗಳ ಅಗತ್ಯವಿದೆ ಎಂದು ಆರೋಗ್ಯ ಇಲಾಖೆ ಲೆಕ್ಕ ಹಾಕಿದೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ನೀಡಿದ ಅಂದಾಜಿನ ಪ್ರಕಾರ ಪ್ರತಿ ಯೂನಿಟ್‌ಗೆ ₹30.47 ವೆಚ್ಚ ಆಗಲಿದೆ. ಕೆಎಸ್‌ಎಂಎಸ್‌ಸಿಎಲ್ ಮೂಲಕ ಕೆಟಿಪಿಪಿ ಕಾಯ್ದೆಯ ಪ್ರಕಾರ ನಿಯಮಗಳನ್ನು ಅನ್ವಯಿಸಿ ಒಟ್ಟು ₹71.83 ಕೋಟಿ ಅನುದಾನದಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಖರೀದಿಸಿ ವಿತರಿಸಲು ಪ್ರಸ್ತಾಪಿಸಲಾಗಿದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ವಸತಿಶಾಲೆಗಳಲ್ಲಿ ದಾಖಲಾಗಿರುವ ಎಲ್ಲ ಬಾಲಕಿಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಒದಗಿಸುವ ಉದ್ದೇಶದಿಂದ ಮುಟ್ಟಿನ ನೈರ್ಮಲ್ಯ ಯೋಜನೆ ‘ಶುಚಿ’ಯನ್ನು 2013–14ನೇ ಸಾಲಿನಲ್ಲಿ ಆರಂಭಿಸಲಾಗಿತ್ತು. ಆದರೆ, ಕೋವಿಡ್ ನಂತರ ಯೋಜನೆ ಸ್ಥಗಿತಗೊಂಡಿತ್ತು. ಕಳೆದ ವರ್ಷ ಮತ್ತೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು.

ಯೋಜನೆ ಜಾರಿ ಎಲ್ಲೆಲ್ಲಿ?

ಇಲಾಖೆ	ಒಟ್ಟು ಫಲಾನುಭವಿಗಳು
ಶಾಲಾ ಶಿಕ್ಷಣ ಇಲಾಖೆ (ಶಾಲೆಗಳು)	13,50,925
ಪದವಿಪೂರ್ವ ಶಿಕ್ಷಣ ಮಂಡಳಿ	3,83,686
ಸಮಾಜ ಕಲ್ಯಾಣ ಇಲಾಖೆ (ಹಾಸ್ಟೆಲ್‌ಗಳು)	46,476
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ (ಹಾಸ್ಟೆಲ್‌ಗಳು)	43,419
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಹಾಸ್ಟೆಲ್‌ಗಳು	1,25,055
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳು	7,063
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳು	9,450
ಒಟ್ಟು	19,64,507

ಸಿಇಟಿ ಸರ್ವರ್ ಸಮಸ್ಯೆ ಎರಡನೇ ಸುತ್ತಿನ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಎರಡನೇ ಸುತ್ತಿನ ಪ್ರವೇಶ ಪ್ರಕ್ರಿಯೆಗೆ ಸರ್ವರ್ ಸಮಸ್ಯೆಯಿಂದ ಸೋಮವಾರ ಅಡಚಣೆಯಾಯಿತು. ಛಾಯ್ಸ್ ದಾಖಲಿಸಲು, ಶುಲ್ಕ ಪಾವತಿಸಲು ವಿದ್ಯಾರ್ಥಿಗಳು ಪರದಾಡಿದರು.

ಸರ್ವರ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದನ್ನು ಪರಿಗಣಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕ್ರಿಯೆಗೆ ನಿಗದಿ ಗಡುವನ್ನು ಒಂದು ದಿನ ವಿಸ್ತರಿಸಿದೆ. ಛಾಯ್ಸ್‌-1 ಮತ್ತು ಛಾಯ್ಸ್‌-2ನ್ನು ಆಯ್ಕೆ ಮಾಡುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಸೆ.3ರವರೆಗೆ, ಶುಲ್ಕ ಪಾವತಿ ನಂತರ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಕಾಲೇಜಿಗೆ ಪ್ರವೇಶ ಪಡೆಯಲು ಸೆ.4ರವರೆಗೆ ದಿನಾಂಕ ವಿಸ್ತರಿಸಲಾಗಿದೆ.

‘ಛಾಯ್ಸ್‌-3 ಆಯ್ಕೆ ಮಾಡಿದವರು ₹10 ಸಾವಿರ ಠೇವಣಿ ಮೊತ್ತ ಪಾವತಿ ಮಾಡಲು (ಬಿ.ಎಸ್‌ಸಿ ನರ್ಸಿಂಗ್, ಬಿಪಿಒ, ಬಿಪಿಟಿ ಮತ್ತು ಎಎಚ್‌ಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವವರಿಗೆ ಇದು ಅನ್ವಯಿಸುವುದಿಲ್ಲ)

> ಎರಡನೇ ಹಂತದ ವೈದ್ಯಕೀಯ ಸೀಟು ಹಂಚಿಕೆ ವಿಳಂಬದ ಕಾರಣ ಗಡುವು ವಿಸ್ತರಿಸುವಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿಗೆ ಪತ್ರ ಬರೆಯಲಾಗಿದೆ
>
> **ಎಚ್.ಪ್ರಸನ್ನ**, ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಸೆ.3ರವರೆಗೆ ಅವಕಾಶ ನೀಡಲಾಗಿದೆ. ಸೀಟು ಹಂಚಿಕೆಯ ನಂತರ ಯಾವುದೇ ಛಾಯ್ಸ್ ಆಯ್ಕೆ ಮಾಡದವರನ್ನು ಸೀಟು ಹಂಚಿಕೆ ಪ್ರಕ್ರಿಯೆಯಿಂದ ಹೊರ ಹಾಕಲಾಗುತ್ತದೆ. ಮತ್ತೆ ಒಳ ಬರಲು ಅವಕಾಶ ಇಲ್ಲ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.

ವೈದ್ಯಕೀಯ ಪ್ರವೇಶ ಪ್ರಕ್ರಿಯೆ: ವೈದ್ಯಕೀಯ ಕೌನ್ಸೆಲಿಂಗ್ ಪರಿಷತ್ತು ಅಖಿಲ ಭಾರತ ಕೋಟಾದ ಸೀಟುಗಳ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಸೆ. 12ರಿಂದ ಆರಂಭಿಸುತ್ತಿದ್ದು, ರಾಜ್ಯದಲ್ಲಿ 2ನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಮತ್ತು ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಒಂದೆರಡು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದರು.

ಹೊರಗುತ್ತಿಗೆ ಬದಲು ಸೊಸೈಟಿಗೆ ಅವಕಾಶ

ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ನೌಕರರನ್ನು ನಿಯೋಜಿಸುವ ಪ್ರಕ್ರಿಯೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಆ ಮೂಲಕ ಟೆಂಡರ್‌ಗೆ ವಿನಾಯಿತಿ ನೀಡಿದ್ದ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಟೆಂಡರ್ ವಿನಾಯಿತಿ ನೀಡಿಕೆ ಸಂಬಂಧ ರಾಜ್ಯ ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಶಿವಮೊಗ್ಗದ ‘ದಿ ಪ್ರೈವೇಟ್ ಎಂಪ್ಲಾಯ್‌ಮೆಂಟ್ ಏಜೆನ್ಸಿ’ ಪಾಲುದಾರ ಸುರೇಶ್ ಕೆ.ಬಾಳೆಗುಂಡಿ ಸೇರಿದಂತೆ ಮೂವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ, ವಿಚಾರಣೆ ನಡೆಸಿ ಈ ಕುರಿತು ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ ಅವರ ವಾದ ಆಲಿಸಿದ ನ್ಯಾಯಪೀಠ, ‘ಸರ್ಕಾರದ ಆದೇಶಕ್ಕೆ ಅನುಗುಣವಾಗಿ ಯಾವುದಾದರೂ ಸೊಸೈಟಿ ಸ್ಥಾಪನೆ ಗೊಂಡಿದ್ದರೆ ಅಂತಹ ಸೊಸೈಟಿಗಳು ಮುಂದಿನ ವಿಚಾರಣೆವರೆಗೂ ಕಾರ್ಯನಿರ್ವಹಿಸುವಂತಿಲ್ಲ ಆರಂಭಿಸಲು ಮುಂದಾಗಬಾರದು’ ಎಂದು ಮಧ್ಯಂತರ ಆದೇಶದಲ್ಲಿ ವಿವರಿಸಿದೆ.

ಏನಿದು ಅರ್ಜಿ?: ಸರ್ಕಾರದ ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ನೌಕರರನ್ನು ನಿಯೋಜಿಸುವ ನಿಟ್ಟಿನಲ್ಲಿ ಖಾಸಗಿ ಏಜೆನ್ಸಿಗಳಿಂದ ಹೊರಗುತ್ತಿಗೆ ಪಡೆಯುವ ಬದಲಿಗೆ ಸಹಕಾರ ಸಂಘಗಳ ಮೂಲಕವೇ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೊಸೈಟಿ ರಚನೆಗೆ ಸರ್ಕಾರ ಅನುವು ಮಾಡಿಕೊಟ್ಟಿದೆ.

ಈ ಆದೇಶದ ಅನ್ವಯ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಕಾಯ್ದೆ–1999ರ ಕಲಂ 4(ಜಿ)ಗೆ ವಿನಾಯಿತಿ ನೀಡಲಾಗಿದೆ. ಈ ಸಂಬಂಧ 2024ರ ಆ. 1ರಂದು ಹೊರಡಿಸಿರುವ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ. ಅರ್ಜಿದಾರರ ಪರ ವಕೀಲರಾದ ಎ.ಮಹಮದ್ ತಾಹಿರ್, ವರುಣ್ ಜೆ.ಪಾಟೀಲ್ ವಕಾಲತ್ತು ವಹಿಸಿದ್ದಾರೆ.

ಕಳಸ: ‘ನಮ್ಮ ಹ್ಯಾಂಗಿಯೋ’ ಶುಭಾರಂಭ



ಹ್ಯಾಂಗಿಯೋ ಐಸ್‌ಕ್ರೀಮ್ಸ್ ತನ್ನ ಹೊಸ ವಿತರಣಾ-ರೀಟೇಲ್ ಮಳಿಗೆ ‘ನಮ್ಮ ಹ್ಯಾಂಗಿಯೋ’ ವನ್ನು ಚಿಕ್ಕಮಗಳೂರು ಜಿಲ್ಲೆ ಕಳಸದಲ್ಲಿ ಭವ್ಯವಾಗಿ ಪ್ರಾರಂಭಿಸಿರುವುದನ್ನು ಸಂತೋಷದಿಂದ ಘೋಷಿಸುತ್ತದೆ.

ಈ ವಿಶೇಷ ಮಳಿಗೆ ಪ್ರೀಮಿಯಂ ಐಸ್‌ಕ್ರೀಮ್ಸ್ ಮತ್ತು ಹಾಲು ಉತ್ಪನ್ನಗಳ ಗುಣಮಟ್ಟ ಹಾಗೂ ಸುಲಭ ಲಭ್ಯತೆಯ ಬೇಡಿಕೆಯನ್ನು ಪೂರೈಸುವ ಏಕೈಕ ತಾಣವಾಗಿದೆ.

ಮಳಿಗೆಯನ್ನು ಕಳಸದ ಪ್ರಮುಖ ಉದ್ಯಮಿಗಳು ಹಾಗೂ ಗಣ್ಯರಾದ ಶ್ರೀ ಪ್ರಕಾಶ ಪ್ರಭು, ಶ್ರೀ ಅನಂತ ಕಾಮತ್ ಮತ್ತು ಶ್ರೀ ನರಸಿಂಹ ಕಾಮತ್ ಅವರು ಅಧಿಕೃತವಾಗಿ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಹ್ಯಾಂಗಿಯೋ ಸಂಸ್ಥೆಯ ದ್ವಿತೀಯ ತಲೆಮಾರಿನ ಉದ್ಯಮಿಗಳು ಹಾಗೂ ಬಿಸಿನೆಸ್ ಡೆವಲಪ್‌ಮೆಂಟ್ ಮುಖ್ಯಸ್ಥರಾದ ಶ್ರೀನಿವಾಸ ಪೈ ಮತ್ತು ಶ್ರೀಕೃಷ್ಣ ಪೈ ಭಾಗವಹಿಸಿ, ಕಂಪನಿಯ ವಿಸ್ತರಣೆ ಮತ್ತು ಆಳವಾದ ಮಾರುಕಟ್ಟೆ ಪ್ರವೇಶದ ದೃಷ್ಟಿಕೋನವನ್ನು ಹಂಚಿಕೊಂಡರು.

ನಮ್ಮ ಹ್ಯಾಂಗಿಯೋ ನಗರ ಮತ್ತು ಗ್ರಾಮೀಣ ಭಾಗಗಳ ಗ್ರಾಹಕರಿಗೆ ಗುಣಮಟ್ಟದ ಹಾಲು ಉತ್ಪನ್ನಗಳನ್ನು ತಲುಪಿಸುವಲ್ಲಿ ಮಹತ್ವದ ಪಾತ್ರವಹಿಸಲು ಸಜ್ಜಾಗಿದೆ. ಸಂಸ್ಥೆ ಬಲವಾದ ವಿತರಣಾ ಜಾಲವನ್ನು ನಿರ್ಮಿಸಿ, ತನ್ನ ವ್ಯಾಪ್ತಿಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸುವ ಗುರಿಯನ್ನು ಹೊಂದಿದೆ.

ಈ ಸಂದರ್ಭದಲ್ಲಿ ಹ್ಯಾಂಗಿಯೋ ವಲಯ ಅಧಿಕಾರಿ ಶ್ರೀ ಕುಮಾರ ಸುಬ್ರಮಣ್ಯ, ಪ್ರಾದೇಶಿಕ ಮಾರಾಟ ವ್ಯವಸ್ಥಾಪಕ ಶ್ರೀ ಪ್ರವೀಣ್ ಆಚಾರ್ಯ ಮತ್ತು ಮಾರಾಟ ಅಧಿಕಾರಿ ಶ್ರೀ ವೆಂಕಟೇಶ್ ನಾಯಕ್ ಉಪಸ್ಥಿತರಿದ್ದರು.

ಪ್ರಸ್ತುತಿ: ಪಿ.ಪಿ.ಬ್ರ್ಯಾಂಡ್ ಸ್ಟಾಟ್

ಹೆಲಿಕಾಪ್ಟರ್, ಲಘು ವಿಮಾನಕ್ಕೆ ಟೆಂಡರ್: ಡಿಕೆಶಿ

ಬೆಂಗಳೂರು: ‘ಸರ್ಕಾರದ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ, ಸಚಿವರ ಓಡಾಟಕ್ಕೆ ಅಗತ್ಯವಾದ ಹೆಲಿಕಾಪ್ಟರ್ ಮತ್ತು ಲಘು ವಿಮಾನಗಳ ಸೇವೆಯನ್ನು ಒದಗಿಸಲು ಟೆಂಡರ್ ಕರೆಯುವ ವಿಚಾರದಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸರ್ಕಾರಿ ಅಧಿಕೃತ ಕೆಲಸಗಳಿಗೆ ಹೆಲಿಕಾಪ್ಟರ್ ಮತ್ತು ವಿಮಾನಗಳ ಬಳಕೆ ಸ್ವರೂಪ ಕುರಿತಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಅಧಿಕಾರಿಗಳ ಜೊತೆ ಸೋಮವಾರ ಅವರು ಚರ್ಚೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಶಿವಕುಮಾರ್, ‘ಈ ವಿಚಾರವಾಗಿ ನಿರ್ಧಾರ ತೆಗೆದುಕೊಳ್ಳಲು ಮುಖ್ಯಮಂತ್ರಿಯವರು ನನಗೆ ಜವಾಬ್ದಾರಿ ನೀಡಿದ್ದು, ಬೇರೆ ರಾಜ್ಯಗಳಲ್ಲಿನ ವ್ಯವಸ್ಥೆ ತಿಳಿದುಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ’ ಎಂದರು.

ಚಿಟಿಕೆ ಸುದ್ದಿ

ಬಾಲ್ಯವಿವಾಹ: ಗ್ರಾ.ಪಂ ಅಧ್ಯಕ್ಷ ವಿರುದ್ಧ ಪ್ರಕರಣ

ಬೆಳಗಾವಿ: 15 ವರ್ಷದ ಬಾಲಕಿ ಜೊತೆ ಮದುವೆಯಾಗಿದ್ದ ಹುಕ್ಕೇರಿ ತಾಲ್ಲೂಕು ಬಸ್ಸಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಭೀಮಶಿ ಕಾಲಿಮಣಿ ವಿರುದ್ಧ ಪೋಕ್ಸೊ ಪ್ರಕರಣದಾಖಲಾಗಿದೆ.

'2023ರ ನ.5ರಂದು ವಿವಾಹವಾಗಿತ್ತು. ಆಗ ಬಾಲಕಿಗೆ 15 ವರ್ಷ ವಯಸ್ಸು. ಆರೋಪಿ ಸದ್ಯ ತಲೆ ಮರೆಸಿಕೊಂಡಿದ್ದಾನೆ' ಎಂದು ಯಮಕನಮರಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ಪರ್ವಿನ್ ನೇತೃತ್ವದ ನೇತೃತ್ವದ ತಂಡದ ಅಧಿಕಾರಿಗಳು ಬಾಲಕಿಯನ್ನು ಭೇಟಿಯಾಗಲು ನಾಲ್ಕು ಬಾರಿ ಪ್ರಯತ್ನಿಸಿದ್ದರು. ಆದರೆ, ಆರೋಪಿಯು ಆಕೆಯ ನಕಲಿ ಜನ್ಮಪ್ರಮಾಣಪತ್ರ ಸೃಷ್ಟಿಸಿ, ತಪ್ಪುಮಾಹಿತಿ ನೀಡಿದ್ದ' ಎಂದು ತಿಳಿಸಿದ್ದಾರೆ.

ಗಣೇಶ ವಿಸರ್ಜನೆ: ವಿದ್ಯುತ್ ಸ್ಪರ್ಶದಿಂದ ಯುವಕ ಸಾವು

ಗಜೇಂದ್ರಗಡ (ಗದಗ ಜಿಲ್ಲೆ): ರಾಮಾಪುರ ಗ್ರಾಮದಲ್ಲಿ ಭಾನುವಾರ ರಾತ್ರಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ವಿದ್ಯುತ್ ತಗುಲಿ ವಿಜಯಕುಮಾರ ಬಾಳಪ್ಪ ಜಾಧವ (38) ಮೃತಪಟ್ಟಿದ್ದಾರೆ.



ವಿಜಯ ಜಾಧವ

'ವಿಜಯಕುಮಾರ ಅವರು ಧ್ವನಿವರ್ಧಕದ ವಿದ್ಯುತ್ ಸಂಪರ್ಕ ಸರಿಪಡಿಸುವಾಗ, ಅವಘಡ ಸಂಭವಿಸಿದೆ' ಎಂದು ಗಜೇಂದ್ರಗಡ ಠಾಣೆ ಪೊಲೀಸರು ತಿಳಿಸಿದ್ದಾರೆ.

ದೋಣಿ ಮುಳುಗಡೆ; 28 ಕಾರ್ಮಿಕರ ರಕ್ಷಣೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮೀನುಗಾರಿಕೆಗೆ ತೆರಳಿದ್ದ ಪರ್ಸಿನ್ ದೋಣಿ ಸೋಮವಾರ ಸಮುದ್ರತೀರದಿಂದ 100 ನಾಟಿಕಲ್ ಮೈಲ್ ದೂರದ ನೇತ್ರಾಣಿ ದ್ವೀಪದ ಬಳಿ ಮುಳುಗಿದೆ. ಮುಳುಗಡೆಯಾಗಿದೆ.

'ಕಾಯ್ಕಿಣಿ ನಿವಾಸಿ ಅಣ್ಣಪ್ಪ ಮೊಗೇರ ಅವರ ಮಹಾಮುರುಡೇಶ್ವರ ಹೆಸರಿನ ದೋಣಿ ಮುಳುಗಿದ್ದು, ಅದರಲ್ಲಿದ್ದ 28 ಮಂದಿ ಕಾರ್ಮಿಕರನ್ನು ರಕ್ಷಿಸಲಾಗಿದೆ. ವೆಲಂಕನಿ ಮತ್ತು ಮಚ್ಛೆದುರ್ಗಾ ದೋಣಿಗಳಲ್ಲಿದ್ದ ಮೀನುಗಾರರು ರಕ್ಷಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬಾಲಕಿ ಮೇಲೆ ತಂದೆಯಿಂದ ಲೈಂಗಿಕ ದೌರ್ಜನ್ಯ

ವಿಜಯಪುರ: ಐದು ವರ್ಷದ ಬಾಲಕಿ ಮೇಲೆ ಆಕೆ ತಂದೆಯೇ ಲೈಂಗಿಕ ದೌರ್ಜನ್ಯ ನಡೆಸಿದ್ದು, ಮಹಿಳಾ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನಗರಕ್ಕೆ ವಲಸೆ ಬಂದಿದ್ದ ದಂಪತಿ ಮನೆಗೆಲಸ ಮಾಡುತ್ತಿದ್ದು, ಇಬ್ಬರು ಪುತ್ರಿಯರು ಇದ್ದಾರೆ. 'ಆ.30ರ ರಾತ್ರಿ 8ಕ್ಕೆ ಗಣೇಶಮೂರ್ತಿಗಳ ತೋರಿಸುವುದಾಗಿ ಪುತ್ರಿಯರನ್ನು ಕರೆದೊಯ್ದಿದ್ದ ಪತಿ ಚಿಕ್ಕ ಮಗಳ ಮೇಲೆ ದೌರ್ಜನ್ಯ ಎಸಗಿದ್ದಾನೆ' ಎಂದು ಪತ್ನಿ ದೂರು ನೀಡಿದ್ದಾರೆ.

'ಹಿಂದೂಗಳ ತಾಳ್ಮೆ ಪರೀಕ್ಷೆ ಬೇಡ'

ಬಿಜೆಪಿಯಿಂದ 'ಧರ್ಮಸ್ಥಳ ಚಲೊ' ಸಮಾವೇಶ • ಕ್ಷೇತ್ರದ ಪರ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ (ದಕ್ಷಿಣ ಕನ್ನಡ): 'ಧರ್ಮಸ್ಥಳ ಕ್ಷೇತ್ರದ ವಿಚಾರದಲ್ಲಿ ನಿತ್ಯ ಅಪಪ್ರಚಾರ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹಿಂದೂ ಸಮಾಜದ ತಾಳ್ಮೆಯನ್ನು ಇನ್ನಷ್ಟು ಪರೀಕ್ಷೆ ಮಾಡಬೇಡಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ಇಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಶ್ರೀಕ್ಷೇತ್ರ ಧರ್ಮಸ್ಥಳ ಚಲೊ' ಬೃಹತ್ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕ್ಷೇತ್ರದ ಅಪಪ್ರಚಾರದ ಹಿಂದೆ ಷಡ್ಯಂತ್ರ ನಡೆದಿದೆ. ಇದನ್ನು ಹೊರತರಲು ತನಿಖೆಯನ್ನು ತಕ್ಷಣವೇ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್ಐಎ) ಅಥವಾ ಸಿಬಿಐಗೆ ವಹಿಸಬೇಕು. ಹಿಂದೂ ಧರ್ಮ ವಿರೋಧಿ ಶಕ್ತಿಗಳು ಕೋಟಿಗಟ್ಟಲೆ ಹಣ ಪಡೆದು ಧರ್ಮಸ್ಥಳದ ಕುರಿತು ಅಪಪ್ರಚಾರ ಮಾಡುತ್ತಿವೆ. ಆ ಶಕ್ತಿಗಳನ್ನು ಹತ್ತಿಕ್ಕುವ ಕೆಲಸ ಕಾಂಗ್ರೆಸ್ ಸರ್ಕಾರದಿಂದ ಆಗದು. ಸಿಬಿಐ ಅಥವಾ ಎನ್ಐಎಯಿಂದ ತನಿಖೆ ಆದರೆ ಮಾತ್ರ ನ್ಯಾಯ ಸಿಗಲು ಸಾಧ್ಯ' ಎಂದರು.

ಸಮಾವೇಶ ಉದ್ಘಾಟಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ದೇಶದ ಬಹುಸಂಖ್ಯಾತರ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ ಮಾಡುತ್ತಲೇ ಬಂದಿದೆ. ಅದರ ಮುಂದುವರಿದ ಭಾಗವೇ ಧರ್ಮಸ್ಥಳ ಪ್ರಕರಣ. ಶನಿಶಿಂಗಣಾಪುರ, ಶಬರಿಮಲೆ ಶ್ರದ್ಧೆಗೆ ಭಂಗ ತರುವ ಯತ್ನ ನಡೆದ ಬಳಿಕ ಧರ್ಮಸ್ಥಳದ ಹೆಸರು ಕೆಡಿಸುವ ಯತ್ನಕ್ಕೆ ಕೈಹಾಕಿದ್ದಾರೆ' ಎಂದು ಆರೋಪಿಸಿದರು.

'ಧರ್ಮಸ್ಥಳ ಪ್ರಕರಣ ಯಾವ ಸಿನಿಮಾದ ಚಿತ್ರಕತೆಗಿಂತ ಕಡಿಮೆ ಇಲ್ಲ. ಈ ಸಿನಿಮಾ ಮುಂದೆ ಕೆಜಿಎಫ್, ಆರ್.ಆರ್.ಆರ್ ಏನೂ ಅಲ್ಲ. ನಿರ್ದೇಶಕ ಯಾರೂ ಇರಬಹುದು, ನಿರ್ಮಾಪಕ ಕಾಂಗ್ರೆಸ್' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಸಂಸದ ಜಗದೀಶ ಶೆಟ್ಟರ್, ಮುಖಂಡ ಶ್ರೀರಾಮುಲು, ಶಾಸಕ ಸುರೇಶ ಗೌಡ ಮಾತನಾಡಿದರು.

ಕಾರ್ಯಕ್ರಮದ ಸಂಚಾಲಕ, ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಪ್ರಸ್ತಾವಿಕವಾಗಿ ಮಾತನಾಡಿದರು. ಸ್ಥಳೀಯ ಶಾಸಕ ಹರೀಶ್ ಪೂಂಜ ಸ್ವಾಗತಿಸಿದರು. ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ನಿರೂಪಿಸಿದರು. ಮೇಲ್ಮನೆ ಸದಸ್ಯ ಪ್ರತಾಪ ಸಿಂಹ ನಾಯಕ್, ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಸಂದೇಶ ಓದಿದರು.

ಪರಿಷತ್ತಿನ ಉಪಸಭಾಪತಿ ಪ್ರಾಣೇಶ್, ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಕ್ಯಾ.ಬ್ರಿಜೇಶ್ ಚೌಟ, ತೇಜಸ್ವಿಸೂರ್ಯ, ಶಾಸಕರಾದ ಡಾ. ಅಶ್ವತ್ಥನಾರಾಯಣ, ಎಸ್.ರಘು, ಮನಿರತ್ನ, ಡಿ.ವೇದವ್ಯಾಸ ಕಾಮತ್, ಡಾ.ವೈ.ಭರತ್ ಶೆಟ್ಟಿ, ರಾಜೇಶ್ ನಾಯ್ಕ್ ಉಳಿಪಾಡಿ, ಭಾಗಿರಥಿ ಮುರುಳ್ಯ, ಯಶಪಾಲ್ ಸುವರ್ಣ, ಇತರ ಮುಖಂಡರು ಭಾಗವಹಿಸಿದ್ದರು.

ಮುಖ್ಯಾಂಶಗಳು

- ಧರ್ಮಸ್ಥಳ ಕ್ಷೇತ್ರದ ಅಪಪ್ರಚಾರದ ಹಿಂದೆ ಷಡ್ಯಂತ್ರ
- ಶ್ರದ್ಧೆಗೆ ಭಂಗ ತರುವ ಯತ್ನ– ಮುಖಂಡರ ಆರೋಪ

ತನಿಖೆ ನೆಪದಲ್ಲಿ ಎಸ್ಐಟಿ 22 ಅಡಿ ಆಳದ ಗುಂಡಿ ತಗೆದಿದೆಯಲ್ಲವೇ? ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮಾಡಿದವರನ್ನು ಅದರಲ್ಲೇ ಹೂತು ಹಾಕಿ ಎಂದು ಕೇಳಲು ನಾವಿಲ್ಲಿಗೆ ಬಂದಿದ್ದೇವೆ

ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಧರ್ಮಸ್ಥಳ ಪುಣ್ಯಭೂಮಿ. ಇಲ್ಲಿ ಎದ್ದಿರುವ ಕೂಗು ತೂಫಾನ್ ಆಗಲಿದೆ. ತಮಿಳುನಾಡಿನ ಸಂಸದ ಈ ಷಡ್ಯಂತ್ರದ ಹಿಂದಿದ್ದು, ಆತನನ್ನು ಬಂಧಿಸಿ ವಿಚಾರಣೆ ನಡೆಸಬೇಕು

ಸುಧಾಕರ ರೆಡ್ಡಿ

ರಾಜ್ಯ ಬಿಜೆಪಿ ಸಹ ಉಸ್ತುವಾರಿ



ಧರ್ಮಸ್ಥಳ ಚಲೊ ಸಮಾವೇಶದ ವೇದಿಕೆಯಲ್ಲಿ ಬಿಜೆಪಿ ಮುಖಂಡರು ಪರಸ್ಪರ ಕೈಗಳನ್ನು ಜೋಡಿಸುವ ಮೂಲಕ 'ಧರ್ಮಸ್ಥಳ ಕ್ಷೇತ್ರದ ಜೊತೆ, ವೀರೇಂದ್ರ ಹೆಗ್ಗಡೆ ಕುಟುಂಬದ ಜೊತೆ ನಾವಿದ್ದೇವೆ' ಎನ್ನುವ ಸಂದೇಶ ಸಾರಿದರು. ವಿಶ್ವೇಶ್ವರ ಹೆಗಡೆ ಕಾಗೇರಿ, ಛಲವಾದಿ ನಾರಾಯಣ ಸ್ವಾಮಿ, ಎಸ್.ಆರ್.ವಿಶ್ವನಾಥ, ಡಿ.ವಿ.ಸದಾನಂದ ಗೌಡ, ಪ್ರಲ್ಹಾದ ಜೋಶಿ, ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಸಿ.ಟಿ.ರವಿ, ಬಿ.ಶ್ರೀರಾಮುಲು, ತೇಜಸ್ವಿ ಸೂರ್ಯ ಹಾಗೂ ಕ್ಯಾ.ಬ್ರಿಜೇಶ್ ಚೌಟ ಭಾಗವಹಿಸಿದ್ದರು

ಕರಾವಳಿ ಶಾಸಕರಿಗೆ ಸಿಗದ ಅವಕಾಶ

ಕರಾವಳಿ ಜಿಲ್ಲೆಗಳ ಶಾಸಕರಿಗೆ ವೇದಿಕೆಯಲ್ಲಿ ಮಾತನಾಡಲು ಅವಕಾಶವಿರಲಿಲ್ಲ. ಮುಖಂಡ ನಳಿನ್ ಕುಮಾರ್ ಕಟೀಲ್, ಶಾಸಕ ವಿ.ಸುನಿಲ್ ಕುಮಾರ್ ವೇದಿಕೆಯಲ್ಲಿದ್ದರೂ ಅವಕಾಶ ಕಲ್ಪಿಸಲಿಲ್ಲ.

ಡಿ.ವಿ.ಸದಾನಂದ ಗೌಡರು ಕಾರ್ಯಕ್ರಮ ಆರಂಭವಾದ ಕೆಲ ಹೊತ್ತಿಗೆ ನಿರ್ಗಮಿಸಿದರು. ಭಾಷಣ ಮಾಡಲು ಹೆಸರು ಕರೆದಾಗ ಅವರು ವೇದಿಕೆಯಲ್ಲಿ ಇರಲಿಲ್ಲ. ಕಾರ್ಯಕ್ರಮದಲ್ಲಿ ಹೊರ ಜಿಲ್ಲೆಗಳಿಂದ ಬಂದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಬಿಜೆಪಿಗೆ ಲಾಭ ಸಿಗದು–ಸಿ.ಎಂ

ಮೈಸೂರು: 'ಯಾವುದೇ ಯಾತ್ರೆಯಿಂದ ಬಿಜೆಪಿಗೆ ರಾಜಕೀಯ ಲಾಭ ಸಿಗದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಇಲ್ಲಿ ಪ್ರತಿಪಾದಿಸಿದರು.

ಸ್ವಗ್ರಾಮ, ತಾಲ್ಲೂಕಿನ ಸಿದ್ದರಾಮನಹುಂಡಿಯಲ್ಲಿ 'ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಶಾಲೆ'ಯ ನೂತನ ಕಟ್ಟಡ ಉದ್ಘಾಟನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಎಸ್ಐಟಿ ರಚಿಸಿದಾಗ ಬಿಜೆಪಿಯವರು ಸುಮ್ಮನಿದ್ದರು. ಈಗ ಏನೂ ಲಾಭ ಸಿಗುವುದಿಲ್ಲ ಎಂದು ತಿಳಿದು ವಿರೋಧಿಸುತ್ತಿದ್ದಾರೆ. ಇದು ಢೋಂಗಿತನ. ದಸರಾ ಉತ್ಸವ ಕುರಿತು ರಾಜಕಾರಣ ಮಾಡುತ್ತಿದ್ದಾರೆ. ಅದು ಪರಿಣಾಮ ಬೀರುವುದಿಲ್ಲ' ಎಂದು ಟೀಕಿಸಿದರು.

ಬಿಜೆಪಿಯಲ್ಲಿ ಆಂತರಿಕವಾಗಿ ಎರಡು ಬಣಗಳು ಕಚ್ಚಾಡುತ್ತಿವೆ. ಧರ್ಮಸ್ಥಳ ಪ್ರಕರಣ ಆ ಬಣಗಳದ್ದೇ ಷಡ್ಯಂತ್ರ. ಎಸ್ಐಟಿ ರಚನೆಗೆ ಆಗ್ರಹಿಸಿದ್ದ ಬಿಜೆಪಿಯವರು ಈಗ ನಾಟಕ ಮಾಡುತ್ತಿದ್ದಾರೆ

ಡಿ.ಕೆ. ಶಿವಕುಮಾರ್

ಉಪ ಮುಖ್ಯಮಂತ್ರಿ

ಚಾಮುಂಡಿಬೆಟ್ಟದ ಕುರಿತ ಉಪ ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಬೆಟ್ಟವು ಹಿಂದೂಗಳ ಆಸ್ತಿಯೇ ಇರಬಹುದು. ದಸರಾ ನಾಡ ಹಬ್ಬವಲ್ಲವೇ? ಇದು, ಹಿಂದೂ, ಮುಸಲ್ಮಾನರು, ಕ್ರೈಸ್ತರು, ಬೌದ್ಧರು ಎಲ್ಲರೂ ಸೇರಿ ಆಚರಿಸುವ ಹಬ್ಬ' ಎಂದರು.

ಸುದ್ದಿ 2 ನಿಮಿಷ

'ಜಾತಿ ಬದಲು ಏಳು ವರ್ಗ ಮಾಡಿ'

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ನಡೆಸುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಜಾತಿಗಳಾಗಿ ವಿಂಗಡಣೆ ಮಾಡುವ ಬದಲು ಏಳು ವರ್ಗಗಳಾಗಿ ವಿಂಗಡಿಸುವುದು ಸೂಕ್ತ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತಿಳಿಸಿದೆ.

ಆಕ್ಷೇಪಣೆಗಳ ಜತೆಗೆ ಸಲಹೆಗಳನ್ನು ಒಳಗೊಂಡ ಮನವಿ ಪತ್ರವನ್ನು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಅವರು ಆಯೋಗಕ್ಕೆ ನೀಡಿದ್ದಾರೆ. ಅತಿ ಮುಂದುವರಿದ, ಮಧ್ಯಮ ಮುಂದುವರಿದ, ಮುಂದುವರಿಯುತ್ತಿರುವ, ಮಧ್ಯಮ ಹಿಂದುಳಿದ, ಹಿಂದುಳಿದ ಹಾಗೂ ಹಿಂದುಳಿದ ವರ್ಗಗಳಿಗಿಂತ ಕೆಳಗಿರುವ ವರ್ಗಗಳಾಗಿ ವಿಂಗಡಿಸಬಹುದು ಎಂದು ತಿಳಿಸಿದ್ದಾರೆ. ಮಹಾಸಭಾದ ಬೇಡಿಕೆಗಳು ಏನು:

- ಮೀಸಲಾತಿ ಸೌಲಭ್ಯ ಬಳಸಿಕೊಂಡು ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಹೊಂದಿರುವ ಹಿಂದುಳಿದ ವರ್ಗದವರನ್ನು ಸೌಲಭ್ಯದಿಂದ ಹೊರಗೆ ಇಡಬೇಕು.
- ಆಯೋಗವು ಸಮೀಕ್ಷೆಗೆ ಪರ್ಯಾಯ ಪದ್ಧತಿಗಳನ್ನು ರೂಪಿಸಿಕೊಂಡು ಹಿಂದುಳಿತ ಜಾತಿ ಇಲ್ಲವೇ ಮುಂದುವರಿದ ಜಾತಿ ಎಂದು ಪರಿಗಣಿಸಿ
- ಬ್ರಾಹ್ಮಣ ಸಮುದಾಯದಲ್ಲೂ ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರು ಇದ್ದಾರೆ. ಅವರಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲು ನೀಡುವ ನಿಟ್ಟಿನಲ್ಲಿ ಯೋಚಿಸಬೇಕು.
- ಸಮುದಾಯದ 62 ಉಪಪಂಗಡಗಳನ್ನು ಬ್ರಾಹ್ಮಣ ಎಂದೇ ಪರಿಗಣಿಸಬೇಕು.
- ಆಯೋಗವು ಬ್ರಾಹ್ಮಣ ಮುಸ್ಲಿಂ, ಬ್ರಾಹ್ಮಣ ಕ್ರಿಶ್ಚಿಯನ್, ವೈಶ್ಯ ಬ್ರಾಹ್ಮಣ ಎನ್ನುವ ಪಟ್ಟಿ ನೀಡಿದ್ದು, ಇದನ್ನು ತೆಗೆದು ಹಾಕಬೇಕು. ಯಾವುದೇ ವ್ಯಕ್ತಿ ಬ್ರಾಹ್ಮಣ ಇಲ್ಲವೇ ಕ್ರಿಶ್ಚಿಯನ್ ಆಗಿರಬಹುದು. ಎರಡೂ ಆಗಿರಲು ಸಾಧ್ಯವಿಲ್ಲ.



ಭ್ರೂಣಲಿಂಗ ಪತ್ತೆ: ಐವರ ವಿರುದ್ಧ ಎಫ್ಐಆರ್

ಬೆಂಗಳೂರು: ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಗರ್ಭಿಣಿಯೊಬ್ಬರ ಭ್ರೂಣಲಿಂಗ ಪತ್ತೆ ಮಾಡಿ, ಬೆಂಗಳೂರಿನ ಕ್ಲಿನಿಕ್‌ವೊಂದರಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಭ್ರೂಣ ತೆಗೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಐವರ ವಿರುದ್ಧ ಪಶ್ಚಿಮ ವಿಭಾಗದ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಬ್ಯಾಟರಾಯನಪುರದ ಕ್ಲಿನಿಕ್‌ವೊಂದರ ವೈದ್ಯೆ ಪಲ್ಲವಿ, ಪ್ರಮುಖ ಮಧ್ಯವರ್ತಿಯೂ ಆಗಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣದ ಶಾರದಮ್ಮ, ಅವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಲಕ್ಷ್ಮಿ ಹಾಗೂ ಭಾಗ್ಯಮ್ಮ ಹಾಗೂ ಭ್ರೂಣಲಿಂಗ ಪತ್ತೆ ಮಾಡಿಸಿಕೊಂಡ ಬೆಂಗಳೂರಿನ ತಾತಗುಣಿಯ ಮಹಿಳೆಯ ಪತಿ ವಿರುದ್ಧ ಎಫ್ಐಆರ್ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ಭ್ರೂಣಲಿಂಗ ಪತ್ತೆ ಹಾಗೂ ಶಸ್ತ್ರಚಿಕಿತ್ಸೆ ಮೂಲಕ ಭ್ರೂಣ ತೆಗೆಯಲು ದಂಪತಿಯಿಂದ ಆರೋಪಿಗಳು ಒಟ್ಟು ₹42 ಸಾವಿರ ಪಡೆದು ಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ಪ್ರಕರಣ ಗೊತ್ತಾದ ಬಳಿಕ ಆರೋಗ್ಯ ಇಲಾಖೆಯ ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ತಡೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಉಪ ನಿರ್ದೇಶಕರು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ್ದರು. ಸ್ಕ್ಯಾನಿಂಗ್ ವಿಭಾಗದ ರೇಡಿಯಾಲಜಿಸ್ಟ್ ಮತ್ತು ಸಿಬ್ಬಂದಿಯನ್ನು ವಿಚಾರಣೆ ನಡೆಸಿದ್ದರು ಎಂದು ಮೂಲಗಳು ಹೇಳಿವೆ.

ಅಮಾನತು: (ರಾಮನಗರ ವರದಿ) ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ಮಾಡಿದ ಆರೋಪದಲ್ಲಿ ಆಸ್ಪತ್ರೆಯ ರೇಡಿಯಾಲಜಿಸ್ಟ್ ಡಾ. ಶಶಿ ಎಸ್.ಎಲ್ ಅವರನ್ನು ಅಮಾನತುಗೊಳಿಸಲಾಗಿದೆ. ಶಿಸ್ತು ಪ್ರಾಧಿಕಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಶಿವಕುಮಾರ್ ಕೆ.ಬಿ. ಸೋಮವಾರ ಅಮಾನತು ಆದೇಶ ಹೊರಡಿಸಿದ್ದಾರೆ.

ಯೋಜನಾ ವೆಚ್ಚ ₹14,500 ಕೋಟಿಗೆ ಏರಿಕೆ

ಮೇಕೆದಾಟು ಅರ್ಜಿ ವಿಚಾರಣೆ • ಸುಪ್ರೀಂ ಕೋರ್ಟ್‌ಗೆ ತಿಳಿಸಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸ್ತಾವಿತ ಮೇಕೆದಾಟು ಯೋಜನೆ ಕುರಿತ ಅರ್ಜಿಯ ವಿಚಾರಣೆಯನ್ನು ಇದೇ 23ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿತು.

'ವಿಳಂಬವಾದಷ್ಟು ಯೋಜನಾ ವೆಚ್ಚದಲ್ಲಿ ಗಮನಾರ್ಹ ಏರಿಕೆ ಆಗಲಿದೆ. 2023–24ರ ಲೆಕ್ಕಾಚಾರದ ಪ್ರಕಾರ, ಯೋಜನಾ ವೆಚ್ಚವು ₹14,500 ಕೋಟಿಗೆ ಏರಿದೆ. ಹೀಗಾಗಿ, ತುರ್ತಾಗಿ ಅರ್ಜಿ ವಿಚಾರಣೆ ನಡೆಸಬೇಕು' ಎಂದು ರಾಜ್ಯ ಸರ್ಕಾರ ವಾದಿಸಿತು. ಕೇಂದ್ರ ಜಲ ಆಯೋಗಕ್ಕೆ ರಾಜ್ಯ ಸರ್ಕಾರವು 2019ರಲ್ಲಿ ವಿಸ್ತೃತ ಯೋಜನಾ ವರದಿ ಸಲ್ಲಿಸಿತ್ತು. ಯೋಜನೆಗೆ ₹9,000 ಕೋಟಿ ವೆಚ್ಚ ಆಗಲಿದೆ ಎಂದು ತಿಳಿಸಿತ್ತು.

ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ ಮಾಡಿದ ಮನವಿಯ ಮೇರೆಗೆ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ಕರ್ನಾಟಕದ ಅರ್ಜಿಯನ್ನು ಪರಿಗಣಿಸಲು ನಿರ್ಧರಿಸಿತು.



ಮೇಕೆದಾಟು ಪ್ರದೇಶ

ಯೋಜನೆ ಬಗ್ಗೆ ತಮಿಳುನಾಡು ಸರ್ಕಾರ ಸಲ್ಲಿಸಿರುವ ತಕರಾರು ಅರ್ಜಿಯ ವಿಚಾರಣೆ 2023ರ ಸೆಪ್ಟೆಂಬರ್ 21ರಂದು ನಡೆದಿತ್ತು. ವಿಚಾರಣೆಯನ್ನು ಎರಡು ವಾರ ಮುಂದೂಡಿತ್ತು. ಆ ಬಳಿಕ ಪ್ರಕರಣ ವಿಚಾರಣೆಗೇ ಬಂದಿಲ್ಲ ಎಂದು ಪಾಟೀಲ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ರಾಜ್ಯ ಸರ್ಕಾರದ ವಾದವೇನು?: ಪ್ರಕರಣದ ತುರ್ತು ವಿಚಾರಣೆ ನಡೆಸಬೇಕು ಎಂದು ಕೋರಿ ರಾಜ್ಯ ಸರ್ಕಾರವು ಆಗಸ್ಟ್ 28ರಂದು ಅರ್ಜಿ ಸಲ್ಲಿಸಿದ್ದು, ಬೆಂಗಳೂರು ನಗರದ ನೀರಿನ ಸಮಸ್ಯೆ ಬಗೆಹರಿಸಲು ಹಾಗೂ ಲಕ್ಷಾಂತರ ಜನರ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಈ ಯೋಜನೆಯ ಅನುಷ್ಠಾನ ತುರ್ತು ಅಗತ್ಯ ಎಂದು ಪ್ರತಿಪಾದಿಸಿದೆ.

ಕಾವೇರಿ ನ್ಯಾಯಮಂಡಳಿಯ ಅಂತಿಮ ಆದೇಶಕ್ಕೆ ಅನುಗುಣವಾಗಿ ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ನಿಗದಿಪಡಿಸಿದಷ್ಟೇ ನೀರು ಹರಿಸಲು ಈ ಯೋಜನೆ ಮಹತ್ವದ್ದು ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಬೆಂಗಳೂರು ಮಹಾನಗರದ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು 4.75 ಟಿಎಂಸಿ ಅಡಿ ನೀರನ್ನು ಸುಪ್ರೀಂ ಕೋರ್ಟ್ ಹಂಚಿಕೆ ಮಾಡಿದೆ. ಈ ನೀರನ್ನು ಬಳಸಲು ಈ ಯೋಜನೆ ಅನಿವಾರ್ಯ. ಜತೆಗೆ, ಮೇಕೆದಾಟು ಯೋಜನೆಯ ಮೂಲಕ ವಾರ್ಷಿಕವಾಗಿ 400 ಮೆಗಾವಾಟ್ ಜಲವಿದ್ಯುತ್ ಉತ್ಪಾದಿಸಲು ಯೋಜಿಸಲಾಗಿದೆ ಎಂದೂ ಹೇಳಿದೆ.

'ಯೋಜನೆ ಅನುಷ್ಠಾನ ಪ್ರಶ್ನಿಸಿ ತಮಿಳುನಾಡು ರಾಜ್ಯವು ಹಲವು ಅರ್ಜಿಗಳನ್ನು ಸಲ್ಲಿಸಿದೆ. ಈ ಯೋಜನೆಯಿಂದಾಗಿ ತಮಿಳುನಾಡಿಗೆ ಯಾವುದೇ ತೊಂದರೆ ಆಗುವುದಿಲ್ಲ. ಈ ಯೋಜನೆಯಿಂದಾಗಿ ಆ ರಾಜ್ಯಕ್ಕೆ ಅನುಕೂಲವೇ ಆಗಲಿದೆ. ಮಳೆಗಾಲದಲ್ಲಿ ವ್ಯರ್ಥವಾಗಿ ಸಮುದ್ರ ಸೇರುವ ನೀರನ್ನು ಈ ಜಲಾಶಯದ ಮೂಲಕ ಸಂಗ್ರಹಿಸಬಹುದು' ಎಂದೂ ಸರ್ಕಾರ ತಿಳಿಸಿದೆ.

'ಮೇಕೆದಾಟು ಜಲಾಶಯ ನಿರ್ಮಾಣ ಕಾಮಗಾರಿಯನ್ನು ಶೀಘ್ರ ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿ ಜನರು ಪಾದಯಾತ್ರೆ ಇತ್ಯಾದಿಗಳನ್ನು ನಡೆಸುವ ಮೂಲಕ ನಿರಂತರ ಒತ್ತಡ ಹೇರುತ್ತಿದ್ದಾರೆ. ಜತೆಗೆ, ಯೋಜನೆಯ ಅನುಷ್ಠಾನಕ್ಕೆ ಯಾವುದೇ ಕಾನೂನು ತೊಡಕು ಇಲ್ಲ ಎಂದೂ ಹೇಳಿದ್ದಾರೆ. ವಿಳಂಬವಾದಷ್ಟು ಯೋಜನಾ ವೆಚ್ಚ ಮತ್ತಷ್ಟು ಹೆಚ್ಚಲಿದೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ' ಎಂದು ರಾಜ್ಯ ಗಮನ ಸೆಳೆದಿದೆ.

ಗಿರೀಶ ಮಟ್ಟೆಣ್ಣವರ, ತಿಮರೋಡಿ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿದ ಆರೋಪದ ಮೇಲೆ ಗಿರೀಶ ಮಟ್ಟೆಣ್ಣವರ ಮತ್ತು ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ ಎಂದು ಎಸ್‌ಪಿ ಡಾ.ಅರುಣ್ ಕೆ ತಿಳಿಸಿದ್ದಾರೆ.

'ಆ.30ರಂದು ಯುಟ್ಯೂಬ್‌ನಲ್ಲಿ ಕಂಡ ವಿಡಿಯೊ ಉಲ್ಲೇಖಿಸಿ, 'ಈ ಇಬ್ಬರೂ ಸಮಾಜದ ಸೌಹಾರ್ದ ವಾತಾವರಣ ಕದಡಲು ಪ್ರಯತ್ನಿಸಿದ್ದಾರೆ' ಎಂದು ಧರ್ಮಸ್ಥಳ ಗ್ರಾಮದ ಪ್ರವೀಣ್ ಕೆ.ಆರ್ ಅವರು ದೂರು ನೀಡಿದ್ದರು ಎಂದು ಎಸ್‌ಪಿ ವಿವರಿಸಿದ್ದಾರೆ.

ಮಟ್ಟೆಣ್ಣವರ ಮತ್ತು ತಿಮರೋಡಿ ಅವರು ಬ್ಲಾಗರ್‌ಗಳು ಮತ್ತು ಇತರರ ಜೊತೆಗೂಡಿ ಸಾಮಾಜಿಕ ಮಾಧ್ಯಮಗಳ ಮೂಲಕ ಸಂಚು ಹೂಡುತ್ತಿದ್ದಾರೆ' ಎಂದು ದೂರಲಾಗಿದೆ. ಬಿಎನ್‌ಎಸ್ ಕಲಂ 204, 319(2), 353(2) ಮತ್ತು 3(5) ಪ್ರಕಾರ ದೂರು ದಾಖಲಾಗಿದೆ.

'ಬೆಂ.ಗ್ರಾಮಾಂತರ ಕ್ಷೇತ್ರದಲ್ಲೂ ಮತ ಕಳ್ಳತನ'

ರಾಮನಗರ: 'ಮಹಾರಾಷ್ಟ್ರದಂತೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲೂ ಬಿಜೆಪಿಯವರು ಮತ ಕಳ್ಳತನ ನಡೆಸಿರುವ ಅನುಮಾನ ಇದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ್ ಸೊರಕೆ ಸೋಮವಾರ ಆರೋಪಿಸಿದ್ದಾರೆ.

'ಬೂತ್ ಮಟ್ಟದಿಂದ ಮತದಾರರ ಪಟ್ಟಿ ಸಂಗ್ರಹಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ. ಅಕ್ರಮ ಕಂಡು ಬಂದರೆ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಹೋರಾಟ ನಡೆಸಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಸವ ಸಂಸ್ಕೃತಿ ಅಭಿಯಾನ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬಸವನಬಾಗೇವಾಡಿ (ವಿಜಯಪುರ ಜಿಲ್ಲೆ): ರಾಜ್ಯ ಸರ್ಕಾರ ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿದ ಹಿನ್ನೆಲೆಯಲ್ಲಿ 'ಬಸವ ಸಂಸ್ಕೃತಿ' ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಲಾಯಿತು. ರಾಜ್ಯದಾದ್ಯಂತ ಅ.1ರವರೆಗೆ ಈ ಅಭಿಯಾನ ನಡೆಯಲಿದೆ.

ಬಸವ ಜನ್ಮ ಸ್ಮಾರಕದ ಬಳಿ ಆರಂಭವಾದ ರಥ ಯಾತ್ರೆಯಲ್ಲಿ 1,100ಕ್ಕೂ ಅಧಿಕ ಮಹಿಳೆಯರು ತಲೆ ಮೇಲೆ ಬಸವ ವಚನ ಗ್ರಂಥ ಹೊತ್ತು ಸಾಗಿದರು. 770 ಅಮರಗಣಂಗಳ ಬಿಂಬಿಸುವ 770 ಶರಣರು ಬಸವ ಧ್ವಜ ಹಿಡಿದು ಭಾಗಿಯಾದರು.

ಭಾಲ್ಕಿಯ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, 'ಸರ್ಕಾರ ಬಸವಣ್ಣನವರನ್ನು ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದಂತೆ, ಸರ್ಕಾರವೇ ಬಸವನ ಬಾಗೇವಾಡಿಯಲ್ಲಿ ಪ್ರತಿ ವರ್ಷ ಅದ್ದೂರಿಯಾಗಿ ಬಸವ ಜಯಂತಿ ಆಚರಿಸಬೇಕು' ಎಂದರು.

ಸಾಣೆಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, 'ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ರಚಿಸಿಕೊಟ್ಟರೆ, 12 ನೇ ಶತಮಾನದ ಬಸವಾದಿ ಶರಣರು ವಿಶ್ವಕ್ಕೆ ಸಲ್ಲುವ ಸಂವಿಧಾನ ನೀಡಿದ್ದಾರೆ' ಎಂದು ತಿಳಿಸಿದರು.

ಸಚಿವ ಶಿವಾನಂದ ಪಾಟೀಲ, ಇಂಗಳೇಶ್ವರದ ಚನ್ನಬಸವನ ಸ್ವಾಮೀಜಿ, ನಿಷ್ಕಲಮಠದ ನಿಜಗುಣಪ್ರಭು ಸ್ವಾಮೀಜಿ, ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ, ಹುಲಸೂರಿನ ಶಿವಾನಂದ ಸ್ವಾಮೀಜಿ, ಅಥಣಿ ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ಶೇಗುಣಶಿ ಶ್ರೀಗಳು, ಮಸಬಿನಾಳ ಶ್ರೀಗಳು, ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ, ಬಸವನ ಬಾಗೇವಾಡಿ ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಇದ್ದರು.



ಬಸವನಬಾಗೇವಾಡಿಯಲ್ಲಿ ಸೋಮವಾರ ನಡೆದ ಬಸವ ಸಂಸ್ಕೃತಿ ಅಭಿಯಾನದ ಕಾರ್ಯಕ್ರಮದಲ್ಲಿ ಸಚಿವ ಶಿವಾನಂದ ಪಾಟೀಲ, ಗದಗ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಸಾಣೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯರು, ಬೈಲೂರಿನ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಮತ್ತಿತರರು ಪಾಲ್ಗೊಂಡಿದ್ದರು

ಧರ್ಮಸ್ಥಳ ಪರ ಕಮಲ ಕಹಳೆ

ಕ್ಷೇತ್ರದ ಬಗ್ಗೆ ಅಪಪ್ರಚಾರ ತಡೆಯಲು ಸರ್ಕಾರ ಕ್ರಮ ವಹಿಸಬೇಕಿತ್ತು. ದೂರು ನೀಡಿದ ವ್ಯಕ್ತಿಯನ್ನು 24 ಗಂಟೆಗಳಲ್ಲಿ ಒದ್ದು ಒಳಗೆ ಹಾಕಬೇಕಿತ್ತು

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಮೂವರು ಐಪಿಎಸ್ ಅಧಿಕಾರಿಗಳನ್ನು ಬಿಟ್ಟು ಬಾಹುಬಲಿ ಬೆಟ್ಟ ಅಗೆದರು. ದರ್ಗಾದಲ್ಲಿ ಇನ್ನೊಂದು ಹೆಣ ಹುಗಿದಿದ್ದೇನೆ ಎಂದು ಯಾರಾದರೂ ಹೇಳಿದರೆ ಅಗೆಯಲಿ ನೋಡೋಣ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಒಂದನೇ ಪುಟದಿಂದ...

ಯೂಟ್ಯೂಬ್ ಚಾನೆಲ್‌ಗಳಲ್ಲಿ, ಸುದ್ದಿ ವಾಹಿನಿಗಳಲ್ಲಿ ಕ್ಷೇತ್ರದ ಬಗ್ಗೆ ಕಟ್ಟು ಕತೆಗಳನ್ನು ಕಟ್ಟಿದರೂ ರಾಜ್ಯ ಸರ್ಕಾರ ಕ್ರಮವಹಿಸಿಲ್ಲ ಎಂದು ಆಕ್ರೋಶ ಹೊರಹಾಕಿದರು. ಅಪಪ್ರಚಾರವನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ಒತ್ತಾಯಿಸಿದರು.

ಧರ್ಮಸ್ಥಳ ಚಲೋ ಕಾರ್ಯಕ್ರಮಕ್ಕೂ ಮುನ್ನ, ಬಿಜೆಪಿ ಮುಖಂಡರು ಕ್ಷೇತ್ರದ ಮಂಜುನಾಥ ಸ್ವಾಮಿಯ ದರ್ಶನ ಪಡೆದರು. ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಕಾಳಿಂಗಕ್ಕೆ 'ಫೋಟೊ ಶೂಟ್' ಕಂಟಕ

ಒಂದನೇ ಪುಟದಿಂದ...

ವನ್ಯಜೀವಿ ಪ್ರದೇಶದಲ್ಲಿ ಕಾಟೇಜ್: 'ಅಜಯ್ ಗಿರಿ ಎಂಬವರು 'ಆಗುಂಬೆ ರೈನ್ ಫಾರೆಸ್ಟ್ ರಿಸರ್ಚ್ ಸ್ಟೇಷನ್' ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಇವರು ವನ್ಯಜೀವಿ ಪ್ರದೇಶದಲ್ಲಿ 'ಟೈಗರ್ ಕಾಟೇಜ್' ನಿರ್ಮಿಸಿದ್ದಾರೆ. ಇದು ಅಕ್ರಮವಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆ ತನಿಖೆ ನಡೆಸುತ್ತಿದೆ' ಎಂದು ಆಗುಂಬೆ ಪಂಚಾಯಿತಿ ಅಧ್ಯಕ್ಷ ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಅವರು ಕಾಳಿಂಗ ಸರ್ಪದ ಸಂಶೋಧಕ ಅಲ್ಲ. ಹಾವುಗಳನ್ನು ಸಂರಕ್ಷಿಸಿ ಕಾಡಿಗೆ ಬಿಡುವ ಕೆಲಸ ಮಾಡುತ್ತಾರೆ. ಇವರು ದೊಡ್ಡ ದೊಡ್ಡ ವನ್ಯಜೀವಿ ಛಾಯಾಗ್ರಾಹಕರು ಬಂದಾಗ ಕಾಳಿಂಗ ಸರ್ಪಗಳ ಚಿತ್ರೀಕರಣಕ್ಕೆ ಅವಕಾಶ ನೀಡುತ್ತಿದ್ದಾರೆ ಎಂದು ಅವರು ಹೇಳಿದರು.

'ಆಗುಂಬೆ ವ್ಯಾಪ್ತಿಯಲ್ಲಿರುವ ವನ್ಯಜೀವಿ ಧಾಮದಲ್ಲಿ 2 ಎಕರೆ ಬೀಳು ಜಮೀನನ್ನು ಒತ್ತುವರಿ ಮಾಡಿರುವುದು ಪಂಚಾಯಿತಿ ಗಮನಕ್ಕೆ ಬಂದಿದೆ. ಈ ಬಗ್ಗೆ ವನ್ಯಜೀವಿ ವಿಭಾಗ ಮತ್ತು ಸಂರಕ್ಷಿತ ಅರಣ್ಯ ವಿಭಾಗದವರು ತನಿಖೆ ನಡೆಸುತ್ತಿದ್ದಾರೆ. ಸತ್ಯ ಹೊರ ಬರಲಿದೆ' ಎಂದು ಅವರು ದೂರಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ವಜ್ರ ಮಹೋತ್ಸವ • ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘನೆ

'ಆಯಿಷ್: ಮಹಿಳಾ ಸಬಲೀಕರಣಕ್ಕೆ ಮಾದರಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮಹಿಳಾ ಸಬಲೀಕರಣಕ್ಕೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯು ಅತ್ಯುತ್ತಮ ಉದಾಹರಣೆ. 'ಕಾಕ್ಲಿಯರ್ ಇಂಪ್ಲಾಂಟ್'ನಂಥ ಶ್ರವಣ ಸಾಧನಗಳು ದೇಶದಲ್ಲೇ ತಯಾರಾಗಲು ಇದರ ನೆರವು ಅಗತ್ಯ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಸೋಮವಾರ ಸಂಸ್ಥೆಯ 'ವಜ್ರ ಮಹೋತ್ಸವ' ಕಾರ್ಯಕ್ರಮದಲ್ಲಿ ಭಾಗಿಯಾದ ಅವರು, 'ವಾಕ್ ಮತ್ತು ಶ್ರವಣ ಸಮಸ್ಯೆಯುಳ್ಳ ಮಕ್ಕಳು ಸ್ವಾವಲಂಬಿ ಜೀವನ ನಡೆಸಲು 6 ದಶಕದಿಂದ ನಿರಂತರ ಸಂಶೋಧನೆ, ಆವಿಷ್ಕಾರದಲ್ಲಿ ಕಾರುಣ್ಯದಿಂದ ಕೆಲಸ ಮಾಡಿರುವ ಸಂಸ್ಥೆಯನ್ನು 2 ದಶಕಕ್ಕೂ ಹೆಚ್ಚು ಕಾಲ ನಿರ್ದೇಶಕಿಯರೇ ಮುನ್ನಡೆಸಿದ್ದಾರೆ' ಎಂದು ಪ್ರಶಂಸಿಸಿದರು.

'ಟೆಲಿ ಮೌಲ್ಯಮಾಪನ ಹಾಗೂ ಪುನರ್ವಸತಿ ಸೇವೆಯನ್ನು ಔಟ್‌ರೀಚ್ ಕೇಂದ್ರಗಳ ಮೂಲಕ ನೀಡುತ್ತಿರುವ ಸಂಸ್ಥೆ ದೇಶದ ಉತ್ಕೃಷ್ಟತಾ ಕೇಂದ್ರವಾಗಿದೆ. ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮದ ನೋಡಲ್ ಕೇಂದ್ರವಾಗಿರುವ ಸಂಸ್ಥೆಗೆ ಕಳೆದ ವರ್ಷ ರಾಷ್ಟ್ರೀಯ ಪುರಸ್ಕಾರವನ್ನು ನೀಡಿದ್ದೆ' ಎಂದು ಸ್ಮರಿಸಿದರು.

ದೇಶೀಯ ಅಭಿವೃದ್ಧಿ ಅಗತ್ಯ: 'ದೇಶದಲ್ಲಿ 6 ಕೋಟಿ ಜನ ಶ್ರವಣ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದಾರೆ. 'ಕಾಕ್ಲಿಯರ್ ಇಂಪ್ಲಾಂಟ್ ಸೇರಿದಂತೆ ಶ್ರವಣದ ಸಾಧನಗಳು ಎಲ್ಲರಿಗೂ ಸುಲಭವಾಗಿ ಸಿಗುವಂತೆ ಮಾಡುವುದು ಆತ್ಮನಿರ್ಭರ ಭಾರತದ ಸಂಕಲ್ಪ. ನವೀನ ತಂತ್ರಜ್ಞಾನ ಬಳಕೆ ಸೇರಿ ಆಯಿಷ್ ಅದಕ್ಕೆ ನೆರವಾಗಬೇಕು' ಎಂದು ಸಲಹೆ ನೀಡಿದರು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, 'ಇದು, ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಅತ್ಯುತ್ತಮ ಸಂಸ್ಥೆ. ಉತ್ತರ ಪ್ರದೇಶದ ಕಾನ್ಪುರದಲ್ಲಿ ಆಯಿಷ್ ಮಾದರಿಯಲ್ಲೇ ಮತ್ತೊಂದು ಕೇಂದ್ರ ತೆರೆಯಲಾಗುತ್ತಿದೆ' ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಆಯಿಷ್ ನಿರ್ದೇಶಕಿ ಪ್ರೊ. ಎಂ.ಪುಷ್ಪಾವತಿ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಶ್ರವಣ ಸಾಧನ: ದೇಶದಲ್ಲೇ ತಯಾರಿಸಿ
- ಹೊಸ ತಂತ್ರಜ್ಞಾನಗಳ ನೆರವು ಪಡೆಯಿರಿ
- ಉಪಕರಣಗಳು ಎಲ್ಲ ಪೀಡಿತರಿಗೂ ತಲುಪಲಿ

ವರುಣದಲ್ಲಿ 10 ಎಕರೆ ಭೂಮಿಯನ್ನು ಆಯಿಷ್‌ಗೆ ಉಚಿತವಾಗಿ ನೀಡುವ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಬೇಕಾದ ಎಲ್ಲ ನೆರವು ನೀಡಲಿದ್ದೇವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಕನ್ನಡ ನಿಮಗೆ ಗೊತ್ತಾಗುತ್ತಾ'



ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ 'ವಜ್ರ ಮಹೋತ್ಸವ'ದ ಸ್ಮರಣ ಸಂಚಿಕೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ಬಿಡುಗಡೆ ಮಾಡಿದರು. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು

ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡದಲ್ಲೇ ಭಾಷಣ ಆರಂಭಿಸಿ, ರಾಷ್ಟ್ರಪತಿ ಅವರಿಗೆ 'ಯು ನೋ ಕನ್ನಡ' ಎಂದು ಕೇಳಿದರು.

ಮುರ್ಮು ಅವರು ತಮ್ಮ ಭಾಷಣದಲ್ಲಿ 'ನಿಮ್ಮ ಮಾತೃಭಾಷೆ ಗೊತ್ತಿಲ್ಲ. ಕರ್ನಾಟಕದ ಭಾಷೆಯಲ್ಲದೇ ಭಾರತದಲ್ಲಿರುವ ಬಹು ಭಾಷಾ ಸಂಸ್ಕೃತಿ, ಪರಂಪರೆಯನ್ನು ಪ್ರೀತಿಸುವುದು, ಗೌರವಿಸುವುದು ಹಾಗೂ ಸಮ್ಮಾನಿಸುವುದು ನಮ್ಮೆಲ್ಲರ ಕರ್ತವ್ಯ. ಶೀಘ್ರದಲ್ಲೇ ಸ್ವಲ್ಪವಾದರೂ ಕನ್ನಡ ಕಲಿಯುವೆ' ಎಂದು ನಕ್ಕರು.

ಪಿಯು ಪರೀಕ್ಷಾ ವೆಚ್ಚ ಹೆಚ್ಚಳ: ಶುಲ್ಕ ಪರಿಷ್ಕರಣೆ

ಮೂರು ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಿದ ಎಲ್ಲರಿಗೂ ಸಿಗದ ಗೌರವ ಸಂಭಾವನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಗಳಿಗೆ ತಗಲುವ ವೆಚ್ಚ ಹಾಗೂ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಶುಲ್ಕದ ಮಧ್ಯೆ ಇರುವ ಅಂತರ ಸರಿದೂಗಿಸಲು ಪರೀಕ್ಷಾ ಶುಲ್ಕ ಪರಿಷ್ಕರಿಸುವಂತೆ ಶಾಲಾ ಶಿಕ್ಷಣ ಇಲಾಖೆಯು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಗೆ ಸೂಚಿಸಿದೆ.

ದ್ವಿತೀಯ ಪಿಯು ಪರೀಕ್ಷೆ ನಡೆಸಲು ಮಂಡಳಿ ಪ್ರತಿ ವಿದ್ಯಾರ್ಥಿಗೆ ₹675 ವೆಚ್ಚ ಮಾಡುತ್ತಿದೆ. ಪದವಿಪೂರ್ವ ಶಿಕ್ಷಣ ಇಲಾಖೆಯು ಪ್ರತಿ ವಿದ್ಯಾರ್ಥಿಯಿಂದ ₹400 ಪರೀಕ್ಷಾ ಶುಲ್ಕ ಸಂಗ್ರಹಿಸುತ್ತಿದ್ದು, ಈ ಹಣವನ್ನು ಪರೀಕ್ಷಾ ಮಂಡಳಿಯ ಖಾತೆಗೆ ಜಮೆ ಮಾಡುತ್ತದೆ. ಪರೀಕ್ಷೆಗಳನ್ನು ನಡೆಸಲು ತಗಲುತ್ತಿರುವ ತಲಾ ₹275 ಹೆಚ್ಚುವರಿ ವೆಚ್ಚವನ್ನು ಪ್ರತಿ ವರ್ಷ ಸರ್ಕಾರವೇ ಮಂಡಳಿಗೆ ನೀಡುತ್ತಿದೆ. ಈ ವ್ಯತ್ಯಾಸ ಸರಿಪಡಿಸಲು ಪರೀಕ್ಷಾ ಶುಲ್ಕ ಪರಿಷ್ಕರಣೆ ಮಾಡುವಂತೆ ಶಾಲಾ ಶಿಕ್ಷಣ ಇಲಾಖೆ ಪರೀಕ್ಷಾ ಮಂಡಳಿಗೆ ಪತ್ರ ಬರೆದಿದೆ.

ಮೌಲ್ಯಮಾಪಕರ ಸಂಭಾವನೆ ವಿಳಂಬ: 2024–25ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ–1, ಪರೀಕ್ಷೆ–2 ಮತ್ತು ಪರೀಕ್ಷೆ–3ರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ ಹಲವರಿಗೆ ಗೌರವ ಸಂಭಾವನೆ ಪಾವತಿಯಾಗಿಲ್ಲ. ಗೌರವ ಸಂಭಾವನೆ ಸೇರಿ ₹97.50 ಕೋಟಿ ಪರೀಕ್ಷಾ ವೆಚ್ಚ ನೀಡುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಶಾಲಾ ಶಿಕ್ಷಣ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಬಿಡುಗಡೆಯಾದ ಹಣ ₹78 ಕೋಟಿ.

'ಬೇಡಿಕೆ ಸಲ್ಲಿಸಿದ್ದಕ್ಕಿಂತ ₹19.50 ಕೋಟಿ ಕಡಿಮೆ ಅನುದಾನ ಬಿಡುಗಡೆಯಾಗಿರುವುದು, ಹಲವು ಉಪನ್ಯಾಸಕರು ನೇರ ನಗದು ಪಾವತಿ ವ್ಯವಸ್ಥೆಗೆ ಅಗತ್ಯವಾದ ಆಧಾರ್ ಲಿಂಕ್, ಕೆವೈಸಿ ಅಪ್‌ಡೇಟ್ ಮಾಡದೆ ಇರುವುದು ಸಂಭಾವನೆ ಪಾವತಿ ವಿಳಂಬವಾಗಿದೆ' ಎನ್ನುವುದು ಪರೀಕ್ಷಾ ಮಂಡಳಿ ಅಧಿಕಾರಿಗಳ ಹೇಳಿಕೆ.

'₹97.50 ಕೋಟಿ ಪರೀಕ್ಷಾ ವೆಚ್ಚ ಬಿಡುಗಡೆಗೆ ಕೋರಿ ಪರೀಕ್ಷಾ ಮಂಡಳಿ ಪ್ರಸ್ತಾವ ಸಲ್ಲಿಸಿತ್ತು. ಪ್ರಸ್ತಾವನೆ ಕೋಷ್ಟಕದ ಮೊತ್ತಕ್ಕೂ, ಸಲ್ಲಿಕೆಯಾದ ಬೇಡಿಕೆಯ ಮೊತ್ತಕ್ಕೂ ವ್ಯತ್ಯಾಸವಿದ್ದ ಕಾರಣ ಶೇ 80ರಷ್ಟು ಹಣ ಬಿಡುಗಡೆ ಮಾಡಲಾಗಿದೆ. ಮಧ್ಯಂತರ ಪ್ರಸ್ತಾವ ಸಲ್ಲಿಸಿದ ತಕ್ಷಣ ಬಿಡುಗಡೆ ಮಾಡಲು ಸಮ್ಮತಿಸಲಾಗಿದೆ. ಪರೀಕ್ಷಾ ವೆಚ್ಚ, ಪರೀಕ್ಷಾ ಶುಲ್ಕದ ನಡುವಣ ವ್ಯತ್ಯಾಸ ಸರಿಪಡಿಸಲು ಶುಲ್ಕ ಪರಿಷ್ಕರಣೆಗೆ ಸೂಚಿಸಲಾಗಿದೆ' ಎನ್ನುವುದು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳ ಪ್ರತಿಕ್ರಿಯೆ.

> ಶಾಲಾ ಶಿಕ್ಷಣ ಇಲಾಖೆಯ ಸೂಚನೆಯಂತೆ ದ್ವಿತೀಯ ಪಿಯು ಪರೀಕ್ಷಾ ಶುಲ್ಕ ಪರಿಷ್ಕರಣೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಎಸ್ಎಸ್ಎಲ್‌ಸಿ, ಪಿಯು ಮಧ್ಯೆ ಹೆಚ್ಚಿನ ಅಂತರವಿಲ್ಲದಂತೆ ಪರಿಷ್ಕರಣೆ ಮಾಡಲಾಗುವುದು
> **ಪ್ರಕಾಶ್ ನಿಟ್ಟಾಲಿ**, ಅಧ್ಯಕ್ಷ, ಪರೀಕ್ಷಾ ಮಂಡಳಿ

ಅಂಕಿ ಅಂಶಗಳು

39,000 ಮೌಲ್ಯಮಾಪನಕ್ಕೆ ನಿಯೋಜಿಸಿಕೊಂಡ ಉಪನ್ಯಾಸಕರು

6.37 ಲಕ್ಷ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳು

₹97.50 ಕೋಟಿ ಪರೀಕ್ಷಾ ವೆಚ್ಚ

ಪರೀಕ್ಷಾ ಕಾರ್ಯದ ಹಣವೂ ವಿಳಂಬ

ದ್ವಿತೀಯ ಪಿಯು ಪರೀಕ್ಷಾ ಕಾರ್ಯಗಳಲ್ಲಿ ಜಾಗೃತ ದಳ, ವಿಶೇಷ ಜಾಗೃತ ದಳದ ಸದಸ್ಯರಿಗೆ, ಪರೀಕ್ಷಾ ಕೇಂದ್ರಗಳಲ್ಲಿ ಉಸ್ತುವಾರಿ ಅಧಿಕಾರಿಗಳಾಗಿ ಕೆಲಸ ಮಾಡಿದವರಿಗೆ ಎರಡು ವರ್ಷಗಳಿಂದ ಗೌರವ ಸಂಭಾವನೆ ನೀಡಿಲ್ಲ. ಈಗ 2023–2024ನೇ ಸಾಲಿನ ಬಾಕಿಯಲ್ಲಿ ಶೇ 50ರಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ.

'ಉಳಿದ ಶೇ 50ರಷ್ಟು ಬಾಕಿಯನ್ನು (₹4.63 ಕೋಟಿ) ನೀಡಲಾಗಿದೆ. 2024–2025ನೇ ಸಾಲಿನ ಮೂರು ಪರೀಕ್ಷೆಗಳಲ್ಲಿ ಕಾರ್ಯನಿರ್ವಹಿಸಿದವರಿಗೆ ಸಂಭಾವನೆ, ಪ್ರಯಾಣ ಭತ್ಯೆ ನೀಡಿಲ್ಲ. ಹಲವು ಉಪನ್ಯಾಸಕರ ಮೌಲ್ಯಮಾಪನದ ಹಣ ಜಮೆಯಾಗಿಲ್ಲ. ತಕ್ಷಣ ಹಣ ನೀಡುವಂತೆ ಮಂಡಳಿಗೆ ಮನವಿ ಮಾಡಿದ್ದೇವೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್.

ರದ್ದಾದ ಖಾತೆಗೂ ಹಣ ಜಮೆ

ದ್ವಿತೀಯ ಪಿಯು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವ ಉಪನ್ಯಾಸಕರಿಗೆ ನೇರ ನಗದು ಪಾವತಿಯ ಮೂಲಕ ಹಣ ಸಂದಾಯ ಮಾಡಲಾಗುತ್ತಿದೆ. ಆದರೆ, 3,000ಕ್ಕೂ ಹೆಚ್ಚು ಉಪನ್ಯಾಸಕರು ತಮ್ಮ ಬ್ಯಾಂಕ್ ಖಾತೆಗಳಿಗೆ ಆಧಾರ್, ಕೆವೈಸಿ ಲಿಂಕ್ ಮಾಡಿಲ್ಲ. ಕೆಲವರು ವರ್ಗಾವಣೆಯಾದ ನಂತರ ಹಿಂದಿನ ಸ್ಥಳದ ಬ್ಯಾಂಕ್‌ಗಳ ಖಾತೆಗಳನ್ನು ರದ್ದು ಮಾಡಿಕೊಂಡಿದ್ದರೂ, ಅಂತಹ ಖಾತೆಗಳಿಗೆ ಹಣ ಜಮೆಯಾಗಿದೆ. ಈ ಕುರಿತು ಪರೀಕ್ಷಾ ಮಂಡಳಿಗೆ ಸಾಕಷ್ಟು ದೂರುಗಳು ಸಲ್ಲಿಕೆಯಾಗಿವೆ.

10 ರಿಂದ ಪಿಡಿಒ ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಒಂದು ಬಾರಿಗೆ ಅನ್ವಯಿಸುವಂತೆ ಒಂದೇ ಸ್ಥಳದಲ್ಲಿ ಐದು ವರ್ಷಕ್ಕಿಂತ ಹೆಚ್ಚು ಕರ್ತವ್ಯ ನಿರ್ವಹಿಸಿದ ಎಲ್ಲ ಪಿಡಿಒಗಳನ್ನು ಕೌನ್ಸೆಲಿಂಗ್ ಮೂಲಕ ಕಡ್ಡಾಯವಾಗಿ ವರ್ಗಾವಣೆ ಮಾಡುವ ಪ್ರಕ್ರಿಯೆಗೆ ಇದೇ 10ರಿಂದ ಚಾಲನೆ ನೀಡಲಾಗುವುದು ಎಂದು ಇಲಾಖಾ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮೊದಲ ಹಂತದ ಪ್ರಕ್ರಿಯೆ ಇದೇ 20ರವರೆಗೆ ನಡೆಯಲಿದೆ ಎಂದೂ ಅವರು ಹೇಳಿದ್ದಾರೆ. ಅಲ್ಲದೇ, ಸೆ.23 ಮತ್ತು 24 ರಂದು ಸಾಮಾನ್ಯ ಕೋರಿಕೆ ವರ್ಗಾವಣೆಯ ಕೌನ್ಸೆಲಿಂಗ್ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ನಿಯಮ 2024 ಅನ್ನು ರಚಿಸಿ, ಅಧಿಸೂಚಿಸಲಾಗಿದೆ. ಈ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತಂದು, ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ಕಡ್ಡಾಯವಾಗಿ ವರ್ಗಾವಣೆಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದಿದ್ದಾರೆ.

'ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಒಟ್ಟು 1,730 ಅರ್ಜಿಗಳು ಸ್ವೀಕೃತವಾಗಿವೆ' ಎಂದು ಅವರು ಹೇಳಿದ್ದಾರೆ.

ಹೈಡ್ರೋಜನ್ ಬಾಂಬ್‌ನಂಥ ಮಾಹಿತಿ: ರಾಹುಲ್

ಒಂದನೇ ಪುಟದಿಂದ...

ಮೆರವಣಿಗೆಗೆ ತಡೆ: 'ಮತದಾರ ಅಧಿಕಾರ ಯಾತ್ರೆ'ಯ ಸಮಾರೋಪದ ಅಂಗವಾಗಿ ಕಾಂಗ್ರೆಸ್ ಪಕ್ಷ ನಡೆಸಿದ 'ಗಾಂಧಿ ಸೆ ಅಂಬೇಡ್ಕರ್' ಮೆರವಣಿಗೆಯನ್ನು ಪೊಲೀಸರು ಮಧ್ಯದಲ್ಲೇ ತಡೆದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪಟ್ನಾದ ಗಾಂಧಿ ಮೈದಾನದಿಂದ ಈ ಮೆರವಣಿಗೆ ಹೊರಟಿತು. ಮಹಿಳೆಯರೂ ಸೇರಿದಂತೆ ಅಸಂಖ್ಯಾತ ಬೆಂಬಲಿಗರು ಯಾತ್ರೆಯಲ್ಲಿ ಭಾಗಿಯಾದರು.

ಮೆರವಣಿಗೆಯುದ್ದಕ್ಕೂ 'ಮತ ಕಳ್ಳರೇ, ಅಧಿಕಾರದ ಕುರ್ಚಿಯನ್ನು ಬಿಡಿ' ಎಂಬ ಘೋಷಣೆಗಳು ಸೇರಿದಂತೆ ರಾಹುಲ್ ಗಾಂಧಿ ಪರ ಜಯ ಘೋಷ ಮೊಳಗಿದವು. ಡಾಕ್ ಬಂಗಲೆ ಚೌಕದಲ್ಲಿ ಜಮಾಯಿಸಿದ್ದ ಜನರನ್ನು ಉದ್ದೇಶಿಸಿ ಪಕ್ಷಗಳ ಮುಖಂಡರು ಮಾತನಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ವಿಕಾಸಶೀಲ ಇನ್ಸಾನ್ ಪಕ್ಷದ ಮುಖ್ಯಸ್ಥ ಮುಖೇಶ್ ಸಹಾನಿ, ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ, ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಸಿಪಿಐನ ಆ್ಯನಿ ರಾಜಾ, ಟಿಎಂಸಿ ಸಂಸದ ಯೂಸುಫ್ ಪಠಾಣ್, ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಸೇರಿದಂತೆ 'ಇಂಡಿಯಾ' ಕೂಟದ ಇನ್ನಿತರ ನಾಯಕರು ಭಾಗಿಯಾಗಿದ್ದರು.

ರಾಹುಲ್ ಹೇಳಿಕೆ ಅಸಂಬದ್ಧ: ಬಿಜೆಪಿ

ನವದೆಹಲಿ (ಪಿಟಿಐ): ಮತ ಕಳ್ಳತನಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಈ ಹಿಂದೆ ಹೇಳಿದ್ದ 'ಅಣು ಬಾಂಬ್' ಠುಸ್ಸಾಗಿದ್ದು, ಈಗಿನ ಹೈಡ್ರೋಜನ್ ಬಾಂಬ್ ಸಹ ಅಸಂಬದ್ಧ ಹೇಳಿಕೆಯಾಗಿದೆ ಎಂದು ಬಿಜೆಪಿ ಟೀಕಿಸಿದೆ.

'ಕಾಂಗ್ರೆಸ್ ನಾಯಕರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸುಳ್ಳು ಆರೋಪಗಳ ಸುರಿಮಳೆಗೈಯುತ್ತಿದ್ದರೂ ಜನರು ಮಾತ್ರ ಮೋದಿಯವರ ಮೇಲೆ ಅಪಾರ ನಂಬಿಕೆ ಹೊಂದಿದ್ದು, 'ಕೈ' ಪಡೆಯನ್ನು ತಿರಸ್ಕರಿಸುತ್ತಿದ್ದಾರೆ' ಎಂದು ಬಿಜೆಪಿ ಮುಖಂಡ ರವಿಶಂಕರ ಪ್ರಸಾದ್ ಹೇಳಿದ್ದಾರೆ.

'ಬಿಹಾರದಲ್ಲಿ ಕಾಂಗ್ರೆಸ್‌ಗೆ ನೆಲೆಯೇ ಇಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಈ ಯಾತ್ರೆಯು ಯಾವುದೇ ಪರಿಣಾಮ ಬೀರುವುದಿಲ್ಲ' ಎಂದು ಅವರು ಹೇಳಿದರು.

ಕಸ ಎಸೆಯುವಲ್ಲಿ ಬಿಸಾಡಲಿವೆ: ಖರ್ಗೆ

ಒಂದನೇ ಪುಟದಿಂದ...

'ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮತ ಕಳ್ಳತನದ ಮೂಲಕ ಗೆಲುವು ಸಾಧಿಸಲು ಪ್ರಧಾನಿ ನರೇಂದ್ರ ಮೋದಿ ಹುನ್ನಾರ ನಡೆಸಿದ್ದಾರೆ' ಎಂದು ಆರೋಪಿಸಿದರು.

'ಮತದಾರರ ಅಧಿಕಾರ ಯಾತ್ರೆಗೆ ಅಡ್ಡಿಪಡಿಸುವ ಪ್ರಯತ್ನ ನಡೆದರೂ ಮಹಾಘಟಬಂಧನ್ ಹಾಗೂ ಬಿಹಾರದ ಜನರು ಯಾತ್ರೆಯಿಂದ ಹಿಂದೆ ಸರಿಯಲಿಲ್ಲ' ಎಂದರು.

'ಬಿಹಾರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಯ ಡಬಲ್ ಎಂಜಿನ್ ಸರ್ಕಾರವು ಬದಲಾಗಲಿದ್ದು, ಬಡವರು, ಹಿಂದುಳಿದವರು, ದಲಿತರು ಹಾಗೂ ಮಹಿಳೆಯರ ಪರ ಸರ್ಕಾರವು ಅಧಿಕಾರದ ಚುಕ್ಕಾಣಿ ಹಿಡಿಯಲಿದೆ' ಎಂದು ತಿಳಿಸಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಎಲೆಯಿಲ್ಲದ ವೃಕ್ಷ ಬಲಿಯಬಲ್ಲುದೆ? ಜಲವಿಲ್ಲದ ತಟಾಕ ತೆರೆಗೊಡಲುಂಟೆ?

–ಅಲ್ಲಮ ಪ್ರಭು

ಸಂಪಾದಕೀಯ

ಭಾರತ–ಚೀನಾ ಮಾತುಕತೆ ಎಚ್ಚರಿಕೆಯೊಂದಿಗೆ ಆಶಾವಾದ

ವಿವಿಧ ದೇಶಗಳ ನಡುವಿನ ಸಂಬಂಧದಲ್ಲಿ ಈಗ ಬದಲಾವಣೆಯ ಗಾಳಿ ಬೀಸುತ್ತಿದೆ. ಭಾರತ ಮತ್ತು ಚೀನಾ ನಡುವಿನ ಸಂಬಂಧಕ್ಕೂ ಈ ಮಾತು ಅನ್ವಯವಾಗುತ್ತಿದೆ. ಭಾರತ ಮತ್ತು ಚೀನಾ ನಡುವಿನ ಹೊಸ ಸ್ನೇಹಬಂಧವು ಶಾಂಘೈನಲ್ಲಿ ಹಾಗೂ ತಿಯಾನ್‌ಜಿನ್‌ನಲ್ಲಿ ಕಳೆದ ಕೆಲವು ದಿನಗಳಲ್ಲಿ ಕಂಡುಬಂದಿದೆ. ಈಗ ಕಾಣಿಸುತ್ತಿರುವ ಬದಲಾವಣೆಗಳು ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ನಡುವೆ ಹಸ್ತಲಾಘವದ ಹಂತದಲ್ಲಿ ಮಾತ್ರವೇ ಇವೆ. ಬದಲಾವಣೆಯ ಗಾಳಿ ಬೀಸಲು ಕಾರಣವಾಗಿ ಒದಗಿಬಂದಿದ್ದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಆರಂಭಿಸಿದ ಸುಂಕ ಸಮರ. ಭಾರತ ಮತ್ತು ಚೀನಾ ನಡುವಿನ ಸಂಬಂಧವು ಬಹಳ ಪುರಾತನವಾದುದು, ಅದು ನಾಗರಿಕತೆಗಳ ನಡುವಿನ ಸಂಬಂಧ ಎಂದು ಹೇಳಲಾಗುತ್ತದೆಯಾದರೂ, ಆಧುನಿಕ ಕಾಲಘಟ್ಟದಲ್ಲಿ ಈ ಸಂಬಂಧವು ಹಲವಾರು ಏರಿಳಿತಗಳನ್ನು ಕಂಡಿದೆ. ಗಾಲ್ವನ್ ಕಣಿವೆಯಲ್ಲಿ ಎರಡೂ ದೇಶಗಳ ಯೋಧರ ನಡುವೆ ನಡೆದ ಸಂಘರ್ಷ, ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಚೀನಾ ಬೆಂಬಲ ನೀಡಿದ್ದುದು, ಜಾಗತಿಕ ವೇದಿಕೆಗಳಲ್ಲಿ ಭಾರತದ ವಿರುದ್ಧ ಚೀನಾ ಅಭಿಯಾನ ನಡೆಸಿರುವುದು... ಇವೆಲ್ಲವೂ ಬಹುಶ್ರುತ. ಆದರೆ ಇದೇ ಸಂದರ್ಭದಲ್ಲಿ ಹವಾಮಾನ ಬದಲಾವಣೆ ಕುರಿತ ಮಾತುಕತೆಗಳಲ್ಲಿ ಎರಡೂ ದೇಶಗಳ ನಡುವೆ ಸಹಕಾರ ಇದೆ. ಭಾರತ–ಚೀನಾ ನಡುವಿನ ಸಂಬಂಧವನ್ನು ಉತ್ತಮಪಡಿಸುವ ಯತ್ನವು ಟ್ರಂಪ್ ಅವರ ಸುಂಕ ಸಮರಕ್ಕೂ ಮೊದಲೇ ಶುರುವಾಗಿರಬಹುದು. ಬಹುಶಃ, ಕಾಜನ್‌ನಲ್ಲಿ ಕಳೆದ ವರ್ಷ ನಡೆದ ಬ್ರಿಕ್ಸ್ ದೇಶಗಳ ಶೃಂಗಸಭೆಯ ಸಂದರ್ಭದಲ್ಲಿ ಆ ಯತ್ನಗಳು ನಡೆದಿರಬಹುದು. ವಿಶ್ವದ ಎರಡು ಅತ್ಯಂತ ಜನನಿಬಿಡ ದೇಶಗಳ ನಡುವೆ ಇನ್ನಷ್ಟು ಉತ್ತಮವಾದ ಸಂಬಂಧದ ಅಗತ್ಯ ಇದೆ ಎಂಬುದು ಆಗ ಅನ್ನಿಸಿದ್ದಿರಬಹುದು.



ಭಾರತ ಮತ್ತು ಚೀನಾ ಮೈತ್ರಿಯಲ್ಲಿ ಹೊಸ ಶಕೆ ಆರಂಭವಾದಂತಿದೆ. ಆದರೆ, ಹಳೆಯ ಅನುಭವಗಳ ಹಿನ್ನೆಲೆಯಲ್ಲಿ, ಚೀನಾ ಜೊತೆಗಿನ ನಡಿಗೆಯಲ್ಲಿ ಆಶಾವಾದದೊಂದಿಗೆ ಎಚ್ಚರವೂ ಭಾರತಕ್ಕೆ ಅಗತ್ಯ.

ಪರಸ್ಪರ ಸಹಕಾರ ಮತ್ತು ಪರಸ್ಪರರನ್ನು ಅರ್ಥ ಮಾಡಿಕೊಳ್ಳುವ ಕೆಲಸ ಆಗಬೇಕು ಎಂಬ ಸಂದೇಶವನ್ನು ಎರಡೂ ದೇಶಗಳ ನಾಯಕರು ರವಾನಿಸಿದ್ದಾರೆ. ಚೀನಾ ಜೊತೆಗಿನ ಸಂಬಂಧವನ್ನು ಬಲಪಡಿಸುವ ಬಯಕೆ ಭಾರತಕ್ಕೆ ಇದೆ ಎಂದು ಮೋದಿ ಅವರು ಹೇಳಿದ್ದಾರೆ. ಭಾರತ ಮತ್ತು ಚೀನಾ ಪಾಲುದಾರರೇ ವಿನಾ ಎದುರಾಳಿಗಳಲ್ಲ ಎಂದು ಜಿನ್‌ಪಿಂಗ್ ಅವರು ಹೇಳಿದ್ದಾರೆ. ಇಬ್ಬರೂ ಜೊತೆಯಾಗಿ ಕೆಲಸ ಮಾಡುವುದೇ ಸರಿಯಾದ ಆಯ್ಕೆ ಎಂದು ತಾವು ಭಾವಿಸಿರುವುದಾಗಿಯೂ ಜಿನ್‌ಪಿಂಗ್ ಹೇಳಿದ್ದಾರೆ. ವ್ಯಾಪಾರ ಹಾಗೂ ಹೂಡಿಕೆ ಒಪ್ಪಂದಗಳನ್ನು ಬಲಪಡಿಸಲು ಎರಡೂ ದೇಶಗಳು ಈಗ ಸಹಮತ ವ್ಯಕ್ತಪಡಿಸಿವೆ. ಭಾರತವು ಸಂಬಂಧದಲ್ಲಿ ಸುಧಾರಣೆ ತರಲು ಈಗ ಯತ್ನಿಸುತ್ತಿರುವುದಕ್ಕೆ ಇದೇ ಮುಖ್ಯ ಕಾರಣವಾಗಿರುವಂತಿದೆ. ಸಂಬಂಧವು ಸುಧಾರಣೆ ಕಂಡಲ್ಲಿ, ಜಾಗತಿಕ ಶಕ್ತಿಕೇಂದ್ರಗಳ ನಡುವಿನ ಸಂಬಂಧಗಳಲ್ಲಿ ಹೊಸ ಹೊಂದಾಣಿಕೆಗಳು ಉಂಟಾಗಬಹುದು. ಇಡೀ ಸಮೀಕರಣದಲ್ಲಿ ರಷ್ಯಾವನ್ನು ಒಳಗೊಂಡಿರುವುದು, ಜಾಗತಿಕ ವ್ಯವಸ್ಥೆಯಲ್ಲಿ ಹಿಂದೆ ಕಾಣದಂತಹ ಪರಿಣಾಮಗಳು ಉಂಟಾಗಬಹುದು.

ಆದರೆ, ಯಾವುದೇ ಒಂದು ಒಕ್ಕೂಟದ ಜೊತೆ ಗುರುತಿಸಿಕೊಳ್ಳುವುದು ಭಾರತದ ಹಿತಕ್ಕೆ ಪೂರಕವಾಗಿ ಇಲ್ಲ. ಚೀನಾದ ಕಡೆ ಭಾರತ ಚಾಚಿರುವ ಸ್ನೇಹಹಸ್ತವು ತನ್ನ ಹಿತಕ್ಕೆ ಪೂರಕವಾಗಿ ಇರಬೇಕು. ಚೀನಾ ಜೊತೆ ಹೊಂದಿರುವ ಭಿನ್ನಾಭಿಪ್ರಾಯಗಳು ಯಾವುವು, ಚೀನಾ ಜೊತೆ ಯಾವೆಲ್ಲ ಸಂಗತಿಗಳಲ್ಲಿ ಸಹಮತ ಇದೆ ಎಂಬುದು ಸ್ಪಷ್ಟವಾಗಿರಬೇಕು. ಈಗಿನ ಸಂದರ್ಭದಲ್ಲಿ ಸಹಕಾರದಿಂದ ಸಾಧಿಸಬಹುದಾದುದು ಬಹಳಷ್ಟಿದೆ. ಅಮೆರಿಕವು ವಿಧಿಸಿರುವ ಭಾರೀ ಸುಂಕದ ಪರಿಣಾಮವನ್ನು ನಿಭಾಯಿಸುವಲ್ಲಿ ಚೀನಾದ ಹೂಡಿಕೆಗಳು ನೆರವಿಗೆ ಬರಬಹುದು. ಆದರೆ ಭಾರತ ಮತ್ತು ಚೀನಾ ನಡುವೆ ಗಡಿ ತಕರಾರು ಬಹುಕಾಲದಿಂದಲೂ ಇತ್ಯರ್ಥವಾಗದೆ ಉಳಿದಿದೆ. ಚೀನಾ ದೇಶವು ಭಾರತಕ್ಕೆ ರಫ್ತು ಮಾಡುವ ಸರಕು–ಸೇವೆಗಳ ಮೊತ್ತವು, ಅದು ಇಲ್ಲಿಂದ ಆಮದು ಮಾಡಿಕೊಳ್ಳುವ ಸರಕು ಮತ್ತು ಸೇವೆಗಳ ಮೊತ್ತಕ್ಕಿಂತ ಹೆಚ್ಚು. ಎರಡೂ ದೇಶಗಳ ಮಹತ್ವಾಕಾಂಕ್ಷೆಗಳಲ್ಲಿ ಹಿತಾಸಕ್ತಿಯ ಸಂಘರ್ಷಕ್ಕೆ ಕಾರಣವಾಗುವ ಅಂಶಗಳು ಇರಬಹುದು, ಪಾಕಿಸ್ತಾನದ ಜೊತೆ ಚೀನಾ ಹೊಂದಿರುವ ಗೆಳೆತನವು ಭಾರತಕ್ಕೆ ಪಥ್ಯವಾಗುವಂತೆ ಇಲ್ಲ. ಹೀಗಾಗಿ ಭಾರತವು ತನ್ನ ಎಚ್ಚರಿಕೆಯಲ್ಲಿ ತಾನಿರಬೇಕು. ಚೀನಾದ ಜೊತೆ ವ್ಯವಹರಿಸುವಾಗ ಎಚ್ಚರಿಕೆಯೊಂದಿಗೇ ಆಶಾವಾದವನ್ನು ಹೊಂದಬಹುದು. ಬೇರೆ ದೇಶಗಳ ಜೊತೆಗಿನ ಸಂಬಂಧವನ್ನು ಕೆಲವು ನಾಯಕರ ವೈಯಕ್ತಿಕ ಸಂಬಂಧದ ಜೊತೆ ಜೋಡಿಸುವ ಮೂಲಕ ಭಾರತವು ಈ ಹಿಂದೆ ಕೆಟ್ಟ ಅನುಭವ ಸಂಪಾದಿಸಿದೆ. ಅದು ಭವಿಷ್ಯಕ್ಕೆ ಒಂದು ಪಾಠವಾಗಬೇಕು. ಅಂತರರಾಷ್ಟ್ರೀಯ ಹಾಗೂ ದ್ವಿಪಕ್ಷೀಯ ಸಂಬಂಧಗಳು ರಾಷ್ಟ್ರದ ಹಿತಾಸಕ್ತಿಯನ್ನು ಆಧರಿಸಿರುತ್ತವೆ, ಈ ಹಿತಾಸಕ್ತಿಯು ಬದಲಾಗುತ್ತಿರುತ್ತದೆ.

ಚಾಟಿ

ವಲಸಿಗರಿಗಾಗಿ ತ್ರಿಭಾಷಾ ಸೂತ್ರ



ಹಿಂದಿ ಭಾಷಿಕರ ವಲಸೆಗೆ ಅನುವು ಮಾಡಿಕೊಡಲೆಂದೇ ತ್ರಿಭಾಷಾ ಸೂತ್ರ ಇರುವುದು. ಕನ್ನಡಿಗರೆಲ್ಲರಿಗೂ ಹಿಂದಿ ಹೇಳಿಕೊಟ್ಟರೆ ಬರುವ ವಲಸಿಗರಿಗೆ ಅನುಕೂಲ. ಅದಕ್ಕಾಗಿ ಈ ತ್ರಿಭಾಷಾ ಸೂತ್ರ. ಇದರಿಂದ ಕನ್ನಡ ನಾಡಿನ ಉದ್ಯೋಗಗಳು ಕನ್ನಡಿಗರ ಕೈತಪ್ಪುತ್ತವೆ.

ಗಣೇಶ್ ಚೇತನ್, 'ಎಕ್ಸ್'ನಿಂದ

ಕಿಡಿನುಡಿ



ಯಾತ್ರೆ ಮಾಡುವುದರಿಂದ ಹಿಂದುತ್ವ ಗಟ್ಟಿಯಾಗುತ್ತದೆ, ಹಿಂದೂಗಳೆಲ್ಲ ಒಟ್ಟಾಗುತ್ತಾರೆ ಎಂದು ಬಿಜೆಪಿಯವರು ತಿಳಿದಿದ್ದಾರೆ. ನಾನೂ ಹಿಂದೂವೇ. ನಮ್ಮೂರಿನಲ್ಲಿ ರಾಮಮಂದಿರ ಕಟ್ಟಿದ್ದೇವೆ. ಹಿಂದೂಗಳೆಂದರೆ ರಾಜಕೀಯ, ಅಪಪ್ರಚಾರ ಮಾಡುವುದಲ್ಲ, ಸುಳ್ಳು ಹೇಳುವುದಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಗಣೇಶ ಹಬ್ಬದ ಪ್ರಯುಕ್ತ 1.9.2000 ದಿನಾಂಕದಂದು 'ಪ್ರಜಾವಾಣಿ' ಕಾರ್ಯಾಲಯಕ್ಕೆ ಬಿಡುವಿತ್ತು. ಹಾಗಾಗಿ, ಸೆಪ್ಟೆಂಬರ್ 2ರ ಸಂಚಿಕೆ ಪ್ರಕಟವಾಗಿಲ್ಲ.

75 ವರ್ಷಗಳ ಹಿಂದೆ

ಶನಿವಾರ, 2-9-1950

• **ಕೃಪಲಾನಿಗೆ ಜಯದ ನಿರೀಕ್ಷೆ**

ನವದೆಹಲಿ, ಸೆಪ್ಟೆಂಬರ್ 1– ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಆಚಾರ್ಯ ಜೆ.ಬಿ. ಕೃಪಲಾನಿ ಅವರು, ಜಯಭೇರಿ ಬಾರಿಸುವ ಸಾಧ್ಯತೆಯಿದೆ.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಲಾವಣೆ ಆಗಿರುವ ಮತಗಳ ಎಣಿಕೆ ಕಾರ್ಯ ಇಂದು ಆರಂಭವಾಗಿದ್ದು, ಕೃಪಲಾನಿ ಅವರು 1,321 ಮತ ಪಡೆದಿದ್ದರೆ, ಪ್ರತಿಸ್ಪರ್ಧಿ ಪುರುಷೋತ್ತಮ ದಾಸ್ ಟಂಡನ್ 1,263 ಮತಗಳನ್ನು ಪಡೆದಿದ್ದಾರೆ. ಆದರೆ, ಕರ್ನಾಟಕದಲ್ಲಿ ಚಲಾವಣೆ ಆಗಿರುವ 60 ಮತಗಳು ಇನ್ನೂ ದೆಹಲಿಯ ಅಂಗಳಕ್ಕೆ ತಲುಪಿಲ್ಲ. ಈ ಬ್ಯಾಲೆಟ್‌ಗಳು ದೆಹಲಿ ತಲುಪಿದ ಬಳಿಕ ಎಣಿಕೆ ಕಾರ್ಯ ನಡೆಯಲಿದ್ದು, ನಾಳೆ ಅಧಿಕೃತವಾಗಿ ಫಲಿತಾಂಶ ಘೋಷಿಸುವ ಸಾಧ್ಯತೆಯಿದೆ.

• **ಅಸ್ಸಾಂಗೆ ನೆಹರೂ ಭೇಟಿ**

ನವದೆಹಲಿ, ಸೆಪ್ಟೆಂಬರ್ 1– ಪ್ರಧಾನಿ ಪಂಡಿತ್ ನೆಹರೂ ಅವರು, ಮೂರು ದಿನಗಳ ಅಸ್ಸಾಂ ಭೇಟಿಗೆ ತೆರಳಲಿದ್ದಾರೆ. ಸೋಮವಾರ ಬೆಳಿಗ್ಗೆ ವಿಮಾನದ ಮೂಲಕ ಗುವಾಹಟಿಗೆ ಪ್ರಯಾಣ ಆರಂಭಿಸಲಿದ್ದಾರೆ.

ಭೂಕಂಪನದಿಂದ ನಾಶವಾಗಿರುವ ಸ್ಥಳಗಳಿಗೆ ಅವರು ಭೇಟಿ ನೀಡಲಿದ್ದಾರೆ. ಇತರೆ ಸ್ಥಳಗಳಲ್ಲಿ ವೈಮಾನಿಕ ವೀಕ್ಷಣೆ ಮಾಡಲಿದ್ದಾರೆ. ಪ್ರಧಾನಿ ಅವರ ಜೊತೆಯಲ್ಲಿ ಕೇಂದ್ರ ಕೈಗಾರಿಕಾ ಸಚಿವ ಹರೇಕೃಷ್ಣ ಮತ್ತು ವಿದೇಶಾಂಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಎಸ್. ದತ್ತ ತೆರಳಲಿದ್ದಾರೆ.

ರಾಜ್ಯ ಶಿಕ್ಷಣ ನೀತಿ ಏಕೆ ಬೇಕು?



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ರಾಜ್ಯದ ಹಿತಾಸಕ್ತಿ ರಕ್ಷಣೆಗೆ ಹಾಗೂ ಶೈಕ್ಷಣಿಕ ಅಸಮಾನತೆಯ ನಿವಾರಣೆಗೆ 'ರಾಜ್ಯ ಶಿಕ್ಷಣ ನೀತಿ' ಅಗತ್ಯ. ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಆಶಯವಾಗುಳ್ಳ ರಾಜ್ಯ ನೀತಿ, ದೇಶದ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಪೂರಕ. ಶಿಕ್ಷಣದಲ್ಲಿ ಕನ್ನಡ ಹಾಗೂ ಸ್ಥಳೀಯ ತಾಯ್ನುಡಿಗಳ ಸಹಭಾಗಿತ್ವಕ್ಕೂ ಅನುಕೂಲಕರ.

'ಅವೈಜ್ಞಾನಿಕವಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (2020) ರದ್ದು ಮಾಡಿ, ಕರ್ನಾಟಕ ಶಿಕ್ಷಣ ನೀತಿಯ ಅನುಷ್ಠಾನ' ಮಾಡುವುದಾಗಿ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ನಂತರ, 2023ರ ಅ. 11ರಂದು 'ರಾಜ್ಯ ಶಿಕ್ಷಣ ನೀತಿ ಆಯೋಗ' ರಚಿಸಿ, ರಾಜ್ಯ ಶಿಕ್ಷಣ ನೀತಿ ರೂಪಿಸಲು ಆದೇಶ ಹೊರಡಿಸಿತ್ತು. ಕಳೆದ ಆಗಸ್ಟ್ 8ರಂದು 'ರಾಜ್ಯ ಶಿಕ್ಷಣ ನೀತಿ' (ಎಸ್‌ಇಪಿ) ವರದಿಯನ್ನು ಆಯೋಗ ಸರ್ಕಾರಕ್ಕೆ ಸಲ್ಲಿಸಿದೆ. ವರದಿ ಸಲ್ಲಿಕೆಯಾದ ನಂತರ 'ಎಸ್‌ಇಪಿ'ಯ ಸಾಧಕ–ಬಾಧಕಗಳ ಚರ್ಚೆ ಪ್ರಾರಂಭವಾಗಿದೆ. ಈಗಾಗಲೇ, ರಾಷ್ಟ್ರೀಯ ಶಿಕ್ಷಣ ನೀತಿ ಇರುವಾಗ, ರಾಜ್ಯ ಶಿಕ್ಷಣ ನೀತಿ ಅಗತ್ಯವಿದೆಯೇ ಎಂಬ ಪ್ರಶ್ನೆ ಹಲವು ವಲಯಗಳಿಂದ ವ್ಯಕ್ತವಾಗಿದೆ. ಆಶ್ಚರ್ಯವೆಂದರೆ, 'ಎಸ್‌ಇಪಿ' ಜಾರಿಗೊಳಿಸಬೇಕಾದ ಕೆಲವು ಹಿರಿಯ ಅಧಿಕಾರಿಗಳು ಎಸ್‌ಇಪಿ ಬಗ್ಗೆ ತಾತ್ಸಾರ ತೋರುತ್ತಿರುವುದು ಸಂಬಂಧಿಸಿದ ಇಲಾಖೆಗಳ ವಿವಿಧ ಹಂತಗಳಲ್ಲಿ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ, ರಾಜ್ಯಕ್ಕೆ ತನ್ನದೇ ಆದ ಒಂದು ಶಿಕ್ಷಣ ನೀತಿಯ ಅವಶ್ಯಕತೆ ಇತ್ತೆ? ಇದ್ದರೆ, ಅದು ರಾಷ್ಟ್ರೀಯ ನೀತಿಗಿಂತ ಹೇಗೆ ಭಿನ್ನವಾಗಿರುತ್ತದೆ ಎಂದು ಚರ್ಚಿಸುವ ಅಗತ್ಯವಿದೆ.

ಸಂವಿಧಾನದ ವಿಧಿ 1, 'ಇಂಡಿಯಾ ಅರ್ಥಾತ್ ಭಾರತ, ರಾಜ್ಯಗಳ ಒಂದು ಒಕ್ಕೂಟ ಆಗಿರತಕ್ಕದ್ದು' ಎಂದು ಹೇಳುತ್ತದೆ. ಒಕ್ಕೂಟ ವ್ಯವಸ್ಥೆಯ ಪ್ರತಿಯೊಂದು ರಾಜ್ಯವು ತನ್ನದೇ ಆದ ಅಸ್ಮಿತೆ, ಭಾಷೆ, ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದೆ. ಈ ಅನನ್ಯತೆಯನ್ನು ಉಳಿಸಿ ಬೆಳೆಸಲು ತನ್ನದೇ ಆದ ಉತ್ತಮ ಕಲಿಕಾ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕಿದೆ. ರಾಜ್ಯಗಳು ಬಲಿಷ್ಠವಾದರೆ, ಭಾರತ ಸಹಜವಾಗಿಯೇ ಬಲಗೊಳ್ಳುತ್ತದೆ.

ದೇಶದ ಶಿಕ್ಷಣ ನೀತಿ ನಿರೂಪಣೆಯ ಇತಿಹಾಸವನ್ನು ಅವಲೋಕಿಸಿದರೆ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರ ನಾವು ರಚನೆ ಮಾಡಿದ್ದ ಬಹುತೇಕ ಎಲ್ಲಾ ಶಿಕ್ಷಣ ಆಯೋಗಗಳು/ಸಮಿತಿಗಳು ಮತ್ತು ನಂತರ ರೂಪಿಸಿದ ರಾಷ್ಟ್ರೀಯ ಶಿಕ್ಷಣ ನೀತಿಗಳು, ರಾಷ್ಟ್ರಮಟ್ಟದಲ್ಲಿ ಶಿಕ್ಷಣ ವ್ಯವಸ್ಥೆಯ ರಚನೆ ಹಾಗೂ ಸ್ವರೂಪ ಹೇಗಿರಬೇಕೆಂಬ ವಿಶಾಲ ಚೌಕಟ್ಟು ಮತ್ತು ಮಾರ್ಗಸೂಚಿಗಳನ್ನು ಒದಗಿಸಲು ಸಹಾಯಕವಾಗಿದ್ದವು. ಉದಾಹರಣೆಗೆ, ಸ್ವಾತಂತ್ರ್ಯಪೂರ್ವದಲ್ಲಿ ರಚನೆಯಾಗಿದ್ದ ಶಿಕ್ಷಣ ಆಯೋಗ (1882), ಹರ್ಟಾಗ್ ಸಮಿತಿ (1929), ಸಾರ್ಜೆಂಟ್ ಯೋಜನೆ (1944) ಮತ್ತು ಸ್ವಾತಂತ್ರ್ಯಾನಂತರ ರಚನೆಯಾದ ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1948–49), ಪ್ರೌಢ ಶಿಕ್ಷಣ ಆಯೋಗ (1952–53), ಭಾರತದ ಅತ್ಯಂತ ಪ್ರಸಿದ್ಧ ಶಿಕ್ಷಣ ಆಯೋಗ (1964–66), ಆಚಾರ್ಯ ರಾಮಮೂರ್ತಿ ಸಮಿತಿ (1989), ರಾಷ್ಟ್ರೀಯ ಜ್ಞಾನ ಆಯೋಗ (2005), ಟಿಎಸ್‌ಆರ್ ಸುಬ್ರಮಣಿಯನ್ ಸಮಿತಿ (2016) ಹಾಗೂ ಕಸ್ತೂರಿ ರಂಗನ್ ಸಮಿತಿ (2017–2019). ಈ ಆಯೋಗಗಳ ಶಿಫಾರಸುಗಳನ್ನು ತಳಹದಿಯನ್ನಾಗಿಸಿಕೊಂಡು 1968, 1986, 1992 (ಪರಿಷ್ಕೃತ) ಹಾಗೂ 2020ರ ರಾಷ್ಟ್ರೀಯ ಶಿಕ್ಷಣ ನೀತಿಗಳನ್ನು ರೂಪಿಸಲಾಗಿತ್ತು.

ರಾಷ್ಟ್ರೀಯ ನೀತಿ ನಿರೂಪಣೆಯ ಪ್ರಕ್ರಿಯೆ, ರಾಜ್ಯಗಳು ತಮ್ಮದೇ ಆದ ನೀತಿ, ಕಾರ್ಯಕ್ರಮ ಹಾಗೂ ಕಾನೂನುಗಳನ್ನು ರೂಪಿಸಿಕೊಳ್ಳಲು ಪೂರಕವಾಗಬಹುದಾದ ವಿಸ್ತೃತ ಚೌಕಟ್ಟು ಅಥವಾ ಮಾರ್ಗಸೂಚಿಯನ್ನು ಒದಗಿಸುವುದು ಅಗತ್ಯ. ಆದರೆ, ನಮ್ಮಲ್ಲಿ ಪ್ರಾರಂಭದಿಂದಲೂ ಶಿಕ್ಷಣವನ್ನು ರಾಷ್ಟ್ರಮಟ್ಟದಲ್ಲಿ ಕೇಂದ್ರೀಕರಿಸುವ ಅಥವಾ ರಾಜ್ಯಗಳ ಮೇಲೆ ಹೇರುವ ಕೆಲಸವೇ ನಡೆಯುತ್ತಿದೆ. ಕೇಂದ್ರದಲ್ಲಿ ಬಲಪಂಥೀಯ ಸರ್ಕಾರಗಳು ಅಧಿಕಾರಕ್ಕೆ ಬಂದಾಗ, ಸಂವಿಧಾನ ವಿರೋಧಿ ಮತ್ತು ರಾಜಕೀಯಪ್ರೇರಿತ ಶಿಕ್ಷಣ ನೀತಿಗಳನ್ನು ರೂಪಿಸುವ ಮೂಲಕ ನಿರ್ದಿಷ್ಟ ರಾಜಕೀಯ ಸಿದ್ಧಾಂತದ ವಿಚಾರಗಳನ್ನು ಶಿಕ್ಷಣದಲ್ಲಿ ಅಳವಡಿಸುವ ಪ್ರಯತ್ನಗಳೂ ನಡೆದಿವೆ. ರಾಜ್ಯಗಳು, ಸಂವಿಧಾನ ಕೊಡಮಾಡಿರುವ ಒಕ್ಕೂಟ ತತ್ವಕ್ಕನುಗುಣವಾಗಿ ತಮ್ಮ ಅಸ್ಮಿತೆ ಕಾಪಾಡಿಕೊಳ್ಳಲು ಪೂರಕವಾದ ನೀತಿಗಳನ್ನು ರೂಪಿಸಿಕೊಳ್ಳುವ ಬದಲು ಕೇಂದ್ರದ ನೀತಿಗಳನ್ನೇ ಅಂಧಾನುಕರಣೆ ಮಾಡಿದವು ಎಂಬುದು ಇತಿಹಾಸ.

ಕರ್ನಾಟಕ ರಾಜ್ಯವು ಮೊದಲ ಬಾರಿಗೆ ತನ್ನ ವಿಶಿಷ್ಟ ಸವಾಲುಗಳನ್ನು ಎದುರಿಸಲು ರಾಜ್ಯ ಶಿಕ್ಷಣ ನೀತಿಯ ಅಗತ್ಯವನ್ನು ಮನಗಂಡು ನೀತಿ ರೂಪಿಸಿರುವುದು ಆಶಾದಾಯಕ ಬೆಳವಣಿಗೆ. ರಾಜ್ಯ ಶಿಕ್ಷಣ ನೀತಿಯು ಕೆಳಗಿನ ಕಾರಣಗಳಿಂದ ಅತ್ಯಗತ್ಯವಾಗಿದೆ.

ಮೊದಲನೆಯದಾಗಿ, ಕರ್ನಾಟಕ ತನ್ನದೇ ಆದ ಭಾಷೆ, ಸಂಸ್ಕೃತಿ, ಇತಿಹಾಸ, ಸಾಮಾಜಿಕ ಸಂರಚನೆ ಮತ್ತು ಆರ್ಥಿಕ ಅಭಿವೃದ್ಧಿಯ ಸವಾಲುಗಳನ್ನು ಹೊಂದಿದೆ. ರಾಜ್ಯ ಶಿಕ್ಷಣ ನೀತಿ ರಾಜ್ಯದ ಮಕ್ಕಳಿಗೆ ಸ್ಥಳೀಯ ಜೀವನಾನುಭವಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಕಲಿಕಾ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಜ್ಞಾನ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪೂರಕವಾಗುತ್ತದೆ.

ಎರಡನೆಯದಾಗಿ, ಕರ್ನಾಟಕ ಶೈಕ್ಷಣಿಕವಾಗಿ ದೊಡ್ಡಮಟ್ಟದ ಪ್ರಾದೇಶಿಕ ಅಸಮಾನತೆಗಳನ್ನು ಎದುರಿಸುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಅಸಮಾನತೆಯಿದೆ. ವಿಶೇಷವಾಗಿ, ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣದ ಲಭ್ಯತೆ, ಪ್ರವೇಶ ಮತ್ತು ಗುಣಮಟ್ಟದಲ್ಲಿ ಗಮನಾರ್ಹ ಅಸಮಾನತೆಯನ್ನು ಎದುರಿಸುತ್ತಿದೆ. ರಾಜ್ಯ–ನಿರ್ದಿಷ್ಟ ನೀತಿಯು ಸಂಪನ್ಮೂಲ ಹಂಚಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಮೂಲಕ ಕಾಲಮಿತಿಯೊಳಗೆ ಶೈಕ್ಷಣಿಕ ಅಸಮಾನತೆಯನ್ನು ನಿವಾರಿಸಲು ಸಹಾಯಕವಾಗುತ್ತದೆ. ಈ ಮೂಲಕ, ಸಮುದಾಯಗಳ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗನುಗುಣವಾಗಿ ಹೆಚ್ಚಿನ ಉದ್ಯೋಗಾವಕಾಶಗಳು ಮತ್ತು ಆದಾಯ ವೃದ್ಧಿಸುವ ಸೂಕ್ತವಾದ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಪಠ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗುತ್ತದೆ.


ಮೂರನೆಯದಾಗಿ, ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ, ಒಕ್ಕೂಟ ಮತ್ತು ರಾಜ್ಯ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವಲ್ಲಿ ಸಮಾನ ಹೊಣೆಗಾರರಾಗಿರುತ್ತಾರೆ. ಒಕ್ಕೂಟ ಸರ್ಕಾರ ಹೆಚ್ಚಿನ ಸಂಪನ್ಮೂಲ ಹಾಗೂ ನಮ್ಯತೆಯಿಂದ ಕೂಡಿದ ವಿಸ್ತೃತ ನೀತಿಯ ಚೌಕಟ್ಟನ್ನು ಒದಗಿಸಿದರೆ, ರಾಜ್ಯ ಅಗತ್ಯವಾದ ಮೂಲಭೂತ ಸೌಕರ್ಯ, ಶಿಕ್ಷಕರ ನೇಮಕಾತಿ, ಪಠ್ಯಪುಸ್ತಕ ಮುದ್ರಣ, ಮೌಲ್ಯಮಾಪನ, ಉತ್ತಮ ಆಡಳಿತ ಇತ್ಯಾದಿ ಒದಗಿಸುವ ಮೂಲಕ ವಿಕೇಂದ್ರೀಕೃತ ನೆಲೆಯಲ್ಲಿ ಸ್ಥಳೀಯ ಸರ್ಕಾರ ಹಾಗೂ ಸಮುದಾಯಗಳ ಸಹಭಾಗಿತ್ವದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವ ಹೊಣೆಗಾರಿಕೆ ಹೊಂದಿರುತ್ತದೆ. ಹೀಗಾಗಿ, ರಾಜ್ಯ ತನ್ನ ಸ್ಥಿತಿಗೆ ಅನುಗುಣವಾಗಿ ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ನಿರ್ದಿಷ್ಟ ಗುರಿಗಳನ್ನು ಹೊಂದಲು ಮತ್ತು ಗುಣಾತ್ಮಕ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಒದಗಿಸಲು ರಾಜ್ಯ ನೀತಿ ಅವಶ್ಯಕವಾಗಿದೆ.

ನಾಲ್ಕನೆಯದಾಗಿ, ರಾಜ್ಯವು ತನ್ನ ಅಧಿಕೃತ ರಾಜ್ಯಭಾಷೆಯನ್ನು ಶಿಕ್ಷಣದ ವಿವಿಧ ಹಂತದಲ್ಲಿ ಮಾಧ್ಯಮವಾಗಿ ಹಾಗೂ ಭಾಷೆಯಾಗಿ ಜಾರಿಗೊಳಿಸಲು ರಾಜ್ಯ ನೀತಿ ಬಲ ನೀಡುತ್ತದೆ. ರಾಜ್ಯದಲ್ಲಿರುವ ವಿವಿಧ ಸಮುದಾಯಗಳ ತಾಯ್ನುಡಿಯನ್ನು ಮತ್ತು ಭಾಷಾ ಅಲ್ಪಸಂಖ್ಯಾತರ ಭಾಷೆಗಳನ್ನು ಗೌರವಿಸುವ ಮೂಲಕ ಬಹುತ್ವ ಹಾಗೂ ಬಹು ಭಾಷಾ ಸಂಸ್ಕೃತಿಯನ್ನು ಉತ್ತೇಜಿಸುತ್ತದೆ. ರಾಜ್ಯ ಶಿಕ್ಷಣ ನೀತಿಯು ಶಿಕ್ಷಣದಲ್ಲಿ ಕನ್ನಡ ಮತ್ತು ಇತರ ಸ್ಥಳೀಯ ಭಾಷೆಗಳ ಅಳವಡಿಕೆಯನ್ನು ಖಚಿತಪಡಿಸುತ್ತದೆ. ಪಠ್ಯಕ್ರಮ ವಿನ್ಯಾಸ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ ಉತ್ತೇಜಿಸಲು ಸಹಾಯಕವಾಗುತ್ತದೆ.

ಶಿಕ್ಷಕರ ಸಾಮರ್ಥ್ಯವನ್ನು ಬಲವರ್ಧಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಹಿಂದುಳಿದ ಕಲ್ಯಾಣ ಕರ್ನಾಟಕದಲ್ಲಿ ಉತ್ತಮ ಗುಣಮಟ್ಟದ ಕಲಿಕೆ ತಾಯ್ನುಡಿ ಹಾಗೂ ಇಂಗ್ಲಿಷ್‌ನಲ್ಲಿ ಪ್ರಾವೀಣ್ಯತೆ ರೂಪಿಸಲು ಅನುವಾಗುವ ಭಾಷಾನೀತಿಯನ್ನು ರೂಪಿಸಲು ರಾಜ್ಯ ನೀತಿ ಸಹಾಯಕವಾಗುತ್ತದೆ. ಈ ಬಗೆಯ ಕ್ರಮಗಳು, ಕೆಳಸ್ತರದ ಮತ್ತು ಅವಕಾಶವಂಚಿತ ವರ್ಗಗಳಿಗೆ ಹೆಚ್ಚಿನ ಜೀವನಾಧಾರ ಅವಕಾಶಗಳನ್ನು ಕಲ್ಪಿಸಿ, ನಿರಂತರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಸಹಾಯವಾಗುತ್ತದೆ.

ಒಟ್ಟಾರೆ, ರಾಷ್ಟ್ರೀಯ ನೀತಿಗಳು ವಿಶಾಲ ಹಾಗೂ ವಿಸ್ತೃತವಾದ ಚೌಕಟ್ಟನ್ನು ಒದಗಿಸಲು ಸಹಾಯಕವಾದರೆ, ರಾಜ್ಯ ನೀತಿಯು ರಾಜ್ಯದ ವಿಶಿಷ್ಟ ಶೈಕ್ಷಣಿಕ ಭೂದೃಶ್ಯ, ಸವಾಲು ಮತ್ತು ಅವಕಾಶಗಳನ್ನು ಸಮರ್ಥವಾಗಿ ಎದುರಿಸಲು ಅತ್ಯಗತ್ಯವಾಗಿದೆ. ಇದು ನಮ್ಮ ಸಂದರ್ಭಕ್ಕೆ ಅನುಗುಣವಾಗಿ ಪರಿಹಾರಗಳನ್ನು ರೂಪಿಸುವಾಗ ಒಕ್ಕೂಟ ವ್ಯವಸ್ಥೆಯಿಂದ ನಿರ್ದಿಷ್ಟವಾಗಿ ಏನನ್ನು ನಿರೀಕ್ಷಿಸಬಹುದೆಂಬ ಬಗ್ಗೆ ಸ್ಪಷ್ಟತೆ ನೀಡುವ ಮೂಲಕ ಸೌಹಾರ್ದಕ್ಕೆ, ಸಮನ್ವಯತೆಗೆ ಅನುವು ಮಾಡಿಕೊಡುತ್ತದೆ.

ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಸುಧಾರಣೆಗಳನ್ನು ತರಲು ಮತ್ತು ಶಿಕ್ಷಣ ವ್ಯವಸ್ಥೆಗೆ ಮುಂಗಾಣ್ಕೆ ಹಾಗೂ ಸ್ಪಷ್ಟ ದೃಷ್ಟಿಕೋನವನ್ನು ಒದಗಿಸುವ ಮೂಲಕ ಶೈಕ್ಷಣಿಕ ಉಪಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ನೀತಿ ದಾರಿದೀಪವಾಗುತ್ತದೆ. ಒಟ್ಟಾರೆ, ಕರ್ನಾಟಕದ ಮಕ್ಕಳನ್ನು ರಾಜ್ಯ, ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ 21ನೇ ಶತಮಾನದ ಸವಾಲುಗಳನ್ನು ಧೈರ್ಯವಾಗಿ ಎದುರಿಸಿ ಉತ್ತಮ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವ ಮೂಲಕ ರಾಜ್ಯ–ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಲು ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸಲು ರಾಜ್ಯ ನೀತಿಯು ನೀಲಿ ನಕಾಶೆಯಾಗುತ್ತದೆ.



ವಾಚಕರ ವಾಣಿ

15 ತಿಂಗಳಿನಿಂದ ಸಂಬಳ ಇಲ್ಲ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 22 ಅಧ್ಯಾಪಕರು ಮತ್ತು 32 ಬೋಧಕೇತರ ಸಿಬ್ಬಂದಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ವಿಶ್ವವಿದ್ಯಾಲಯ ಕೊಡುವ ಸಂಬಳವೇ ನಮಗೆ ಜೀವನಾಧಾರ. ಇಲ್ಲಿ ಪೂರ್ಣಾವಧಿ ಕೆಲಸ ಮಾಡುತ್ತಿದ್ದು, ಬೇರೆ ಆದಾಯದ ಮೂಲಗಳಿಲ್ಲ. ನಮಗೆ ಕಳೆದ 15 ತಿಂಗಳಿನಿಂದಲೂ ಸಂಬಳ ನೀಡಿಲ್ಲ. ಈ ಬಗ್ಗೆ ಕುಲಪತಿ ಅವರನ್ನು ಕೇಳಿದರೆ, 'ಸರ್ಕಾರದಿಂದ ಯಾವುದೇ ಅನುದಾನ ಬರುತ್ತಿಲ್ಲ. ಅನುದಾನ ಲಭಿಸಿದರೆ ವೇತನ ಪಾವತಿಸುತ್ತೇವೆ' ಎನ್ನುತ್ತಾರೆ. ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರು, ವಿ.ವಿ.ಗೆ ಹೆಚ್ಚಿನ ಅನುದಾನ ಒದಗಿಸಲು ಕ್ರಮವಹಿಸಬೇಕಿದೆ.

ಯಲ್ಲಪ್ಪ ಟಿ. ಗಲಗ್ಗರ್, ಹಂಪಿ

ಶುದ್ಧಿಗೆ ಮುಂದಾಗದಿರುವುದೇ ಸೋಜಿಗ

ಗದಗ ಜಿಲ್ಲೆ ರೋಣ ತಾಲ್ಲೂಕಿನ ಸಂದಿಗವಾಡ ಗ್ರಾಮದ ಮಸೀದಿಯಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ನಿತ್ಯವೂ ಮುಸ್ಲಿಂ ಯುವಕರೇ ಪೂಜೆ ಸಲ್ಲಿಸುತ್ತಿರುವ ಸುದ್ದಿ ಓದಿ ಸಂತಸವಾಯಿತು (ಪ್ರ.ವಾ., ಸೆಪ್ಟೆಂಬರ್ 1). ಆದರೆ, ಇದರ ಬಗ್ಗೆ ತಕರಾರು ತೆಗೆದು ಗಣೇಶನ ಶುದ್ಧೀಕರಣ ಮಾಡಬೇಕು ಎಂದು ಸಂಘ–ಸಂಸ್ಥೆಗಳು, ರಾಜಕೀಯ ನಾಯಕರು ಏಕಿನ್ನೂ ಹೇಳಿಕೆ ನೀಡಿಲ್ಲ ಎಂಬುದೇ ಅಚ್ಚರಿ.

ಚಂದ್ರಶೇಖರ ಎಚ್.ಎಸ್., ಬೆಂಗಳೂರು

ಬಾನು ಭಾರತದ ಪ್ರಜೆಯಲ್ಲವೆ?

ಮೈಸೂರು ದಸರಾ ಉತ್ಸವವು ಯಾವುದೇ ಪಕ್ಷದ ಅಥವಾ ಸಂಘಟನೆಯ ಕಾರ್ಯಕ್ರಮವಲ್ಲ. ಇದು ನಾಡಹಬ್ಬ. ರಾಜ್ಯದ ಎಲ್ಲಾ ಜಾತಿ, ಧರ್ಮದವರು ಭಾಗವಹಿಸುತ್ತಾರೆ. ಆದರೆ, ಸಾಹಿತಿ ಬಾನು ಮುಷ್ತಾಕ್ ಅವರು ಮುಸ್ಲಿಂ ಧರ್ಮಕ್ಕೆ ಸೇರಿದವರು ಎಂಬ ಕಾರಣಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಪ್ರತಿಯೊಬ್ಬ ಪ್ರಜೆಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹಕ್ಕಿದೆ. ಬಾನು ಅವರೂ ಈ ದೇಶದ ಪ್ರಜೆ. ಹಿಂದೂ ರಾಜಕಾರಣಿಗಳಿಗೆ ಮುಸ್ಲಿಮರ ಮತಗಳು ಬೇಕು. ಆದರೆ, ಅವರು ನಾಡಹಬ್ಬಕ್ಕೆ ಉದ್ಘಾಟಕರಾಗಿ ಬರಬಾರದೆಂದು ಹೇಳುವುದು ಯಾವ ನ್ಯಾಯ?

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಉಚಿತ ಮನಃಸ್ಥಿತಿಯಿಂದ ಹೊರಬನ್ನಿ

ಕೃಷಿ ವಿ.ವಿ.ಯು ಸಲಹೆಗೆ ಶುಲ್ಕ ವಿಧಿಸುತ್ತಿರುವುದಕ್ಕೆ ಕೆಲವರ ಆಕ್ಷೇಪವಿದೆ. ಆದರೆ, ಇದೊಂದು ವಿಶೇಷ ಸಲಹಾ ಸೇವೆ. ಅದನ್ನು ಪಡೆಯುವವರು ಆರ್ಥಿಕವಾಗಿ ದುರ್ಬಲರೇನೂ ಅಲ್ಲ. ಉದಾಹರಣೆಗೆ, ಐ.ಟಿ. ಉದ್ಯೋಗಿಗಳು ಸಾಕಷ್ಟು ಆದಾಯ ಹೊಂದಿರುತ್ತಾರೆ. ಅವರಿಗೆ ಶುಲ್ಕ ಅನ್ವಯಿಸಲಿದೆ. ಈಗಾಗಲೇ, ಬೇಸಾಯ ಮಾಡುತ್ತಿರುವ ರೈತರಿಗೆ ಉಚಿತ ಸಲಹೆ ಮುಂದುವರಿಯುತ್ತದೆ. ಹೊಸದಾಗಿ ಕೃಷಿ ಕ್ಷೇತ್ರಕ್ಕೆ ಬರುವ ಆಸಕ್ತರಿಗೆ, ಬಂಡವಾಳ ಹೂಡುವವರಿಗೆ ಸೇವೆ ಒದಗಿಸಲು ಶುಲ್ಕ ವಿಧಿಸಲಾಗುವುದು ಎಂದು ವಿಶ್ವವಿದ್ಯಾಲಯವೂ ಸ್ಪಷ್ಟಪಡಿಸಿದೆ. 'ಉಚಿತ' ಎಂಬ ಮನಃಸ್ಥಿತಿಯಿಂದ ಇತರರು ಹೊರಬರಬೇಕಿದೆ.

ಎಚ್.ಎಸ್. ಮಂಜುನಾಥ, ಬೆಂಗಳೂರು

ಸಿದ್ದರಾಮಯ್ಯಗೆ ಸ್ಪಷ್ಟತೆ ಇಲ್ಲವೆ?

ಪತ್ರಕರ್ತರ ಮುಂದೆ ಮಾತನಾಡುತ್ತಾ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಚಾಮುಂಡಿಬೆಟ್ಟ ಹಿಂದೂಗಳದ್ದೇ ಇರಬಹುದು' ಎಂದಿದ್ದಾರೆ. ಅಂದರೆ ಅವರಿಗೆ ಚಾಮುಂಡಿಬೆಟ್ಟ ಯಾರದು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ ಎಂದರ್ಥವೇ?

ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

ನೇಮಕಾತಿಗೆ ವಿಳಂಬ ಬೇಡ

ರಾಜ್ಯ ಸರ್ಕಾರವು ನುಡಿದಂತೆ ಪರಿಶಿಷ್ಟ ಜಾತಿಯಲ್ಲಿನ ಒಳಮೀಸಲಾತಿ ಬಗ್ಗೆ ಸದನದಲ್ಲಿ ಘೋಷಿಸಿ, ಆದೇಶ ಹೊರಡಿಸಿದೆ. ಹಲವು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದ ಸಮುದಾಯಗಳು ನಿರಾಳವಾಗಿವೆ. ಆದರೆ, ಅಲೆಮಾರಿ ಸಮುದಾಯಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವ ಹೊಣೆಯನ್ನು ಸರ್ಕಾರ ಹೊರಬೇಕಿದೆ. ಶೀಘ್ರವೇ ನೇಮಕಾತಿ ಆರಂಭಿಸಿ ವಯೋಮಿತಿ ಸಡಿಲಿಸುವ ಬಗ್ಗೆ ಮುಖ್ಯಮಂತ್ರಿ ಅವರು ಸದನದಲ್ಲಿ ಹೇಳಿರುವುದು ಲಕ್ಷಾಂತರ ನಿರುದ್ಯೋಗಿಗಳಲ್ಲಿ ಬೆಳ್ಳಿಕಿರಣ ಮೂಡಿಸಿದೆ. ಇದುವರೆವಿಗೂ ನೇಮಕಾತಿ ನಡೆಯದೆ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನೂ ಆದ್ಯತೆ ಮೇಲೆ ಭರ್ತಿ ಮಾಡಬೇಕಿದೆ.

ಶಿವರಾಜ್ ಬ್ಯಾಡರಹಳ್ಳಿ, ಬೆಂಗಳೂರು

ಬೆಂಗಳೂರು ಕೊನೆಯ ನಿಲ್ದಾಣವೇ?

'ರಾಜ್ಯಗಳ ಕಾಲಿಗೆ ತೆರಿಗೆಯ ಗುಂಡು' ಲೇಖನದಲ್ಲಿ (ಪ್ರ.ವಾ., ಸೆಪ್ಟೆಂಬರ್ 1) ದೇವನೂರ ಮಹಾದೇವ ಅವರು, ಕೇಂದ್ರ–ರಾಜ್ಯಗಳ ನಡುವಿನ ಒಕ್ಕೂಟ ವ್ಯವಸ್ಥೆಯ ವೈರುಧ್ಯ ಕುರಿತು ಗಮನಸೆಳೆದಿದ್ದಾರೆ. ಆರ್‌ಎಸ್‌ಎಸ್‌ನ 'ಚಿಂತನಗಂಗಾ' ಕೃತಿಯಲ್ಲಿನ ಆಯ್ದ ವಾಕ್ಯಗಳನ್ನು ಉಲ್ಲೇಖಿಸಿದ್ದಾರೆ. ಆ ಪುಸ್ತಕದ ವಿಚಾರಗಳು 1950–60ರ ದಶಕದ್ದು. ಆಗ ಭಾಷಾವಾರು ಪ್ರಾಂತ್ಯಗಳ ರಚನೆ, ಸಂವಿಧಾನದ 370ನೇ ವಿಧಿ ಅಡಿ ಜಮ್ಮು–ಕಾಶ್ಮೀರ ರಾಜ್ಯಕ್ಕೆ ಕೊಟ್ಟ ವಿಶೇಷ ಸ್ಥಾನಮಾನದ ಹಿನ್ನೆಲೆ ಇತ್ತು.

ದೇವನೂರ ಅವರು ಬಿಜೆಪಿ, ಸಂಘ ಪರಿವಾರದ ಬಗ್ಗೆ ಹರಿಹಾಯುತ್ತಾರೆ. ಆದರೆ, ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ ಅನ್ಯಾಯಗಳ ಬಗ್ಗೆ ಅವರ ಧ್ವನಿ ಕ್ಷೀಣಿಸಿರುವುದು ಗುಟ್ಟೇನಲ್ಲ. ಅನುದಾನದ ಹಂಚಿಕೆ, ಒಕ್ಕೂಟ ವ್ಯವಸ್ಥೆಯ ವಿಷಯದಲ್ಲಿ ಬೆಂಗಳೂರೇ ಕೊನೆ ನಿಲ್ದಾಣವಲ್ಲ. ಸರ್ಕಾರವು ಸತತ ಮೂರು ವರ್ಷಗಳಿಂದ ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದೆ. ಈ ಬಗ್ಗೆಯೂ ಮಾತನಾಡಬೇಕು.

ಪಟಾಪಟ್ ಶ್ರೀನಿವಾಸ್, ಬೆಂಗಳೂರು

ಚುರುಮುರಿ



ಸಂಕಲ್ಪ ಯಾತ್ರೆ

• ಡಿ.ಎಸ್. ಲಿಂಗರಾಜು

'ಸಾ, ನಮ್ಮ ದೇಸದ ಮಾರಾಜ್ರು ಡಿಕಾವಾಗಿ ಶಾಂಘೈಗೆ ಹೋಗ್ಯವರೆ. ಪಿಂಗಣ್ಣ ಅರುಣಾಚಲದ ತಾವು ಬದ ಒತ್ತರಿಸಿಕ್ಯ ಬತ್ತಾವ್ನಲ್ಲ. ಖಾತೆ, ಕಂದಾಯ ಏನೋ ಅದೆ. ಜಮೀನು ಹದ್ದುಬಸ್ತು ಮಾಡಿಕ್ಯಂದು ಬರಬೇಕಾಗ್ಯದೆ' ಅಂತ ಆತಂಕ ವ್ಯಕ್ತಪಡಿಸಿದೆ.

'ಭಾರತ–ಚೀನಾ ಇಬ್ಬರೂವೆ ದಾಯಾದಿಗಳಲ್ಲವುಲಾ. ಹೋದಸಾರಿ ಟ್ರಂಪಣ್ಣ 'ಹೌ ಡಿ ಮೋಡಿ?' ಅಂದು ಕುಲುಕಾಡಿದ್ನಲ್ಲ, ಹಂಗೇ ಪಿಂಗಣ್ಣ 'ನೀ ಹಾವ್ರೋ ಮೋದಿ?' ಅಂದಿರತನೆ ಬುಡ್ಲಾ' ಅಂದ್ರು ತುರೇಮಣೆ.

'ಸಾ, ಮೋದಿ ಮಾರಾಜ್ರು ಶಾಲು–ಮುಗುಟ ತಕ್ಕೋಗಿ ಕೊಟ್ರೂವೆ, 'ಮನ್ನೆ ಪಾಕಿನೋರಿಗೆ ಆಟಾಡಿಕ್ಯಳಕ್ಕೆ ಅಂತ ಕೊಟ್ಟಿದ್ದ ನಮ್ಮ ಇಮಾನವೆಲ್ಲಾ ಮುರಿದಾಕಿದ್ದೀರಂತಲ್ರೀ?' ಅಂತ ಪಿಂಗಣ್ಣ ಅಡ್ಡ ಮಾತಾಡಿದ್ನಂತೆ'.

'ಮೋದಿ ಜೊತೆಗೆ ಒಂದಡಕೆ ಎರಡೆಲೆ ಇದ್ದಂಗೆ ಜಪಾನಣ್ಣ, ಪುಟನಣ್ಣ ನ್ಯಾಯ ಪಂಚಾತ್ಕೆಗೆ ಓಗ್ಯವ್ರಲ್ಲೋ. ಜಪಾನಣ್ಣ 'ನೀವು ನೀವು ಅಕ್ಕಪಕ್ಕದೋರು ಒಂದು ತಾಯಿ ಮಕ್ಕಳಿದ್ದಂಗಿರಬೇಕು ಕನ್ರಯ್ಯಾ' ಅಂತ ಬುದ್ಧಿ ಹೇಳಿ ಖಾಜಿ ನ್ಯಾಯ ಮಾಡಿರತನೆ. ಹದ್ದುಬಸ್ತು, ಪಾಲುಪಾರಿಕತ್ತು ಮಾಡಿ ನ್ಯಾಯ ಪೈಸಲ್ ಮಾಡಿಕ್ಯಬತ್ತರೆ ಬುಡು' ಎಂದು ತುರೇಮಣೆ ಸಮಾಧಾನಿಸಿದರು.

'ಅಲ್ಲ ಕಣ್ರಿ ಸಾ, ಪಕ್ಕಸಾಲಿಗರ ಥರ ಟರ್ಕಿ, ಪಾಕು ಹೋಗ್ಯವಲ್ಲಾ... ಅವು ಅಲ್ಲಿ ಏನೇನಾತು, ಈಥರಕೀತರ ಅಂತ ಟ್ರಂಪಣ್ಣನ ಕಿವಿ ಊದ್ತವೇನೋ' ಅಂತಂದೆ.

'ಅರೆಪಾವಿನೋರ ಅಬ್ಬರ ಜಾಸ್ತಿಯಾದ್ರೆ ಎಂಥೋರಿಗೂ ಒಂದೊಂದು ಸಾರಿ ಅಸಂದರ್ಪಾಯ್ತದೆ ಕಲಾ. ಹಂಗೇ ಚೀನಾದೋರು ವಿಶ್ವಗುರುಗಳ ಹೆಗಲ ಮ್ಯಾಲೆ ಬಂದೂಕಿಟ್ಟು ಟ್ರಂಪಿಗೆ ಗುಂಡು ಹಾರಿಸಬೈದು. ನೋಡಮು'

'ಸಾ ಅದೇನಾತದೋ ನಾ ಕಾಣೆ. ವತ್ತರೆಗೆ ಒಂದು ಮದುವ್ಯಾಗಿ, ಸಂದೆಗೆ ಸೋಬನಾಗಿ, ಮುಂಜಾವಕ್ಕೆ ಮಗಾ ಹುಟ್ಟಂತೆ ಅಂದಂಗೆ ಭಾರತದ ಕತೆ ಆಗಬಾರದು' ಅಂದೆ.

'ವಾಪಾಸ್ ಬರುವಾಗ ಪಿಂಗಣ್ಣ 'ಎಣ್ಣೆ ಥಣ್ಣಗಾದರೆ ಬೆಣ್ಣೆಯಾತದೇನ್ರೀ' ಅಂತ ಒಡಪು ಹಾಕಿ ಕಳಿಸಿರತನೆ ಬುಡ್ಲಾ' ಅಂದು ಮಾತು ಮುಗಿಸಿದರು ತುರೇಮಣೆ.

ಸಂಗತ

ಹೆಣ್ಣಿಗೆ ಜೀವವಿದೆ; ಹೃದಯವೂ ಇದೆ!

ಹೆಣ್ಣಿನ ಮೇಲೆ ಯಾಕೆ ನಿರಂತರ ದೌರ್ಜನ್ಯ? ಈ ಪ್ರಶ್ನೆಗೆ ಉತ್ತರ ಹೇಳಬೇಕಾದ ಶಿಕ್ಷಣ ವ್ಯವಸ್ಥೆ ತನ್ನ ಭಾವಕೋಶವನ್ನೇ ಕಳೆದುಕೊಂಡು, ಅಂಕಗಳ ಹಿಂದೆ ಬಿದ್ದಿದೆ.

• ಸದಾಶಿವ ಸೊರಟೂರು

ಮಂಗಳ ಗ್ರಹಕ್ಕೆ ಹೋದೆವು, ಚಂದ್ರನಲ್ಲಿ ಇಳಿದೆವು, ನಿಮಿಷಗಳಲ್ಲಿ ರೈಲಿನ ವೇಗ ಅಳೆದೆವು, ಜಿಡಿಪಿ ಬೆಳೆಸಿದೆವು, ಒಳ್ಳೊಳ್ಳೆ ಭಾಷಣ ಮಾಡಿದೆವು, ಇತ್ತೀಚೆಗೆ ಒಂಬತ್ತನೇ ತರಗತಿಯ ಬಾಲಕಿಯೊಬ್ಬಳು ತನ್ನ ವಸತಿಶಾಲೆಯ ಶೌಚಾಲಯದಲ್ಲಿ ಮಗುವನ್ನೂ ಹೆತ್ತಳು.

ಹೊಟ್ಟೆಯಲ್ಲಿ ಇರೋದು ಗಂಡಾ ಹೆಣ್ಣಾ ಎಂದು ದುಡ್ಡಿಗಾಗಿ ಕದ್ದು ನೋಡುವ ಆಸ್ಪತ್ರೆಗಳು, ಅದೇ ಆಸ್ಪತ್ರೆಯ ಕಸದ ಬುಟ್ಟಿಗೆ ಎಳೆಗೂಸುಗಳನ್ನು ಎಸೆದುಹೋಗುವ ಹೆತ್ತವರು, ಇಷ್ಟಪಟ್ಟವರನ್ನೇ ತುಂಡು ತುಂಡಾಗಿ ಕತ್ತರಿಸಿ ಎಸೆಯುವ ಮನಃಸ್ಥಿತಿಗಳು... ಈಗಿನ ಸಭ್ಯ ಸುಸಂಸ್ಕೃತ ಸಮಾಜದಲ್ಲಿ ಏನುಂಟು ಏನಿಲ್ಲ?

ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 80,813 ಬಾಲಕಿಯರು ಗರ್ಭಿಣಿಯರಾದ ಪ್ರಕರಣಗಳು ದಾಖಲಾಗಿವೆ ಎಂದು ಇತ್ತೀಚೆಗೆ ಒಂದು ವರದಿ, ಮೈ ನಡುಗಿಸುವ ಸುದ್ದಿಯನ್ನು ಬಹಿರಂಗಪಡಿಸಿದೆ. ಹೆಣ್ಣನ್ನು ಕೇವಲ ಸುಖಿಸುವ ಮತ್ತು ಮಗು ಹೆರುವ ವಸ್ತುವನ್ನಾಗಿ ಮಾತ್ರ ನೋಡುವುದರ ಸ್ಥಿತಿಯ ಪರಿಣಾಮ ಇದು. ಈ ತರಹದ ಘಟನೆಗಳು ಬೆಳಕಿಗೆ ಬಂದಾಗಲೆಲ್ಲಾ (ಬೆಳಕಿಗೆ ಬಾರದೆ ಉಳಿದವು ಅದೆಷ್ಟೋ) ಹಾಗೆ ಮಾಡಬೇಕು, ಹೀಗೆ ಮಾಡಬೇಕು... ಎನ್ನುತ್ತಾ ಎದ್ದು ಕೂರುತ್ತೇವೆ. ಮಾತಿನ ಮಂಟಪ ಕಟ್ಟುತ್ತೇವೆ. ಕಟ್ಟುನಿಟ್ಟಿನ ಆದೇಶಗಳೂ ಹೊರಬರುತ್ತವೆ. ಹಾಗಾದರೆ ಈ ಹಿಂದೆ ಆದೇಶಗಳು ಇರಲಿಲ್ಲವೇ? ಈ ನೆಲದಲ್ಲಿ ಎಲ್ಲವೂ ಕಟ್ಟುನಿಟ್ಟಾಗಿವೆ. ಆದರೆ, ನಡೆಯುವುದು ಮಾತ್ರ ನಡೆಯುತ್ತಲೇ ಇರುವುದೇಕೆ?



ಗಾಂಧಿ ಕನಸಿನ ಗ್ರಾಮ ಸ್ವರಾಜ್ಯ, ಸಮಾನತೆಯ ಭಾರತ, ಮಹಿಳಾ ಸಬಲೀಕರಣ... ಇವೆಲ್ಲ ಕೇವಲ ಭಾಷಣಗಳಲ್ಲಿ ಮತ್ತು ಕಾಗದಗಳಲ್ಲಿ ಮಾತ್ರ ಜೀವಂತವಾಗಿವೆಯೇ? ಆಧುನಿಕ ಭಾರತದ ಮುಖವಾಡದ ಹಿಂದಿರುವ ಭೀಕರ ವಾಸ್ತವ ಇದು. ತಂತ್ರಜ್ಞಾನದಲ್ಲಿ ನಾವು ಮುಂಚೂಣಿಯಲ್ಲಿದ್ದರೂ, ಮಾನವೀಯ ಮೌಲ್ಯಗಳಲ್ಲಿ ಎಷ್ಟೊಂದು ಹಿಂದಿದ್ದೇವೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ?

ಯಾಕಾಗಿ ಇಂತಹ ಘಟನೆಗಳು ನಿರಂತರವಾಗಿ ನಡೆಯುತ್ತಿವೆ? ಇದು ಕಾನೂನುಗಳ ಸೋಲಾ? ಅದರ ಅನುಷ್ಠಾನದ ಸೋಲಾ? ಕಾನೂನುಗಳ ಬಗ್ಗೆ ಸಾಮಾನ್ಯ ಜನರಿಗೆ ಎಷ್ಟು ತಿಳಿದಿದೆ? ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಯಾಕೆ ಅಷ್ಟೊಂದು ವಿಳಂಬ? ಸಂತ್ರಸ್ತರು ದೂರು ನೀಡಲು ಭಯದಿಂದ ಹಿಂಜರಿಯುವುದೇಕೆ? ಇದಕ್ಕೆಲ್ಲಾ ಉತ್ತರ ನಾವು ಕೊಡುವ ಶಿಕ್ಷಣದಲ್ಲಿ ಇರಬೇಕಿತ್ತು. ನಮ್ಮ ಶಿಕ್ಷಣದಲ್ಲಿ ಉತ್ತರಗಳಿಲ್ಲ, ಬರೀ ಅಂಕಗಳಿವೆ ಅಷ್ಟೇ! ಶಿಕ್ಷಣದಲ್ಲಿ ಕೊರತೆಯಾಗಿ ಕಾಣಿಸುತ್ತಿರುವ ನೈತಿಕತೆ ಸಮಾಜದಲ್ಲೂ ಕ್ಷೀಣವಾಗಿದೆ. ನೈತಿಕ ಶಿಕ್ಷಣ ಎನ್ನುವುದು ಒಂದು ಪಠ್ಯವೋ, ತರಗತಿಯ ಒಂದು ಪಿರಿಯೆಡ್ಡೋ ಅಲ್ಲ; ಅದು ನಾಗರಿಕ ಬದುಕಿನ ಭಾವಕೋಶ ಎನ್ನುವುದು ನಮಗೆ ಮರೆತುಹೋಗಿದೆ. ಭಾವಕೋಶ ಬರಿದಾದೊಡೆ ಬದುಕಿನಲ್ಲಿ ಆರ್ದ್ರತೆ ನಿರೀಕ್ಷಿಸಬಹುದೆ?

ನಮ್ಮ ಸಾಮಾಜಿಕ ಮನೋಭಾವದಲ್ಲಿ ಬೇರೂರಿರುವ ಪುರುಷಾಧಿಪತ್ಯ, ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ನೋಡುವ ದೃಷ್ಟಿಕೋನವೂ ಇಂತಹ ಕೃತ್ಯಗಳಿಗೆ ಪ್ರೇರೇಪಣೆ ನೀಡುತ್ತಿದೆ.

ಬಾಹ್ಯಾಕಾಶಕ್ಕೆ ಹೋಗಲು ಬೇಕಾದ ತಂತ್ರಜ್ಞಾನ ನಮ್ಮ ಬಳಿ ಇದೆ. ಹೆಣ್ಣುಶಿಶು ಗರ್ಭದಲ್ಲಿ ಇದೆಯೇ ಎಂದು ಪತ್ತೆ ಹಚ್ಚಿ ಗರ್ಭಪಾತ ಮಾಡಿಸುವ ವ್ಯವಸ್ಥೆಯೂ ನಮ್ಮಲ್ಲಿದೆ. ಇದು ತಂತ್ರಜ್ಞಾನದ ಪ್ರಗತಿಯ ದುರುಪಯೋಗ ಮಾತ್ರವಲ್ಲ, ನಮ್ಮ ಸಮಾಜದ ಒಳಗೊಳಗೇ ಕೊಳೆತುಹೋಗಿರುವ ಸ್ಥಿತಿ.

ಇಂತಹ ಸಂದರ್ಭಗಳಲ್ಲಿ, ನಾವು ಯಾರನ್ನು ದೂಷಿಸಬೇಕು? ಸರ್ಕಾರವನ್ನೇ, ವ್ಯವಸ್ಥೆಯನ್ನೇ, ಅಥವಾ ನಮ್ಮನ್ನೇ? ಈ ಪ್ರಶ್ನೆಗೆ ನೇರ ಉತ್ತರವಿಲ್ಲ. ಏಕೆಂದರೆ ಇದು ಬಹುಪದರಗಳಲ್ಲಿ ಅಡಗಿ ಕೂತ ಸಮಸ್ಯೆಯಾಗಿದೆ. ಸಮಾಜವಾಗಿ ನಾವು ನಮ್ಮ ಮಕ್ಕಳನ್ನು, ವಿಶೇಷವಾಗಿ ಹೆಣ್ಣುಮಕ್ಕಳನ್ನು, ಕೇವಲ ವಸ್ತುವಾಗಿ ನೋಡದೇ ಮನುಷ್ಯರಾಗಿ, ಸ್ವತಂತ್ರ ವ್ಯಕ್ತಿಗಳಾಗಿ ನೋಡಲು ಕಲಿಸಬೇಕಿದೆ. ಸಮಾಜದ ಬದಲಾವಣೆ ಎಂಬುದು ಪ್ರತಿಯೊಬ್ಬರಲ್ಲೂ ಆಗಬೇಕಾದ ಬದಲಾವಣೆಯನ್ನು ವ್ಯಾಖ್ಯಾನಿಸುತ್ತದೆ.

ನಾವು ಈ ದೇಶವನ್ನು 'ಮಾತೆ' ಎನ್ನುತ್ತೇವೆ. ನಾಡನ್ನು 'ತಾಯಿ' ಎನ್ನುತ್ತೇವೆ. ನೆಲವೂ ಹೆಣ್ಣು, ಹರಿಯುವ ನದಿಯೂ ಹೆಣ್ಣು, ಎಲ್ಲೆಲ್ಲೂ ಇರುವ ಹೆಣ್ಣಿನ ಮೇಲಿರುವ ಗೌರವ ನಿಜದ ಹೆಣ್ಣಿನ ಮೇಲೆ ಯಾಕಿಲ್ಲವೊ? ಈ ಪ್ರಶ್ನೆಗೆ ಪ್ರಾಮಾಣಿಕ ಉತ್ತರ ಸಿಕ್ಕಾಗ ಮಾತ್ರ ಈ ಅಸಹ್ಯಕರ ಘಟನೆಗಳು ನಿಲ್ಲುತ್ತವೆ.

ಶಿಕ್ಷಣ ಎನ್ನುವುದು ಕೇವಲ ಪುಸ್ತಕದ ರಾಶಿಯಲ್ಲ. ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳೂ ಅಲ್ಲ. ಶಿಕ್ಷಣವೆಂಬುದು ಪ್ರಜ್ಞೆ. ಇದೇ ಪ್ರಜ್ಞೆಗಾಗಿ ಅಂಬೇಡ್ಕರ್ ಸದಾ ಯತ್ನಿಸಿದ್ದು.

ಯಾವಾಗ ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯನ್ನು ಗೌರವಿಸುತ್ತಾನೋ, ಯಾವಾಗ ಹೆಣ್ಣು ಕೇವಲ ಹೆಣ್ಣಾಗಿರದೆ ಸ್ವತಂತ್ರವಾಗಿ ಬದುಕಲು ಸಾಧ್ಯವಾಗುತ್ತದೆಯೋ, ಯಾವಾಗ ಆ ಹೆಣ್ಣು ತಾನು ಸುರಕ್ಷಿತವಾಗಿ, ಸಮಾಜದಲ್ಲಿ ಸಮಾನ ಸ್ಥಾನಮಾನದಲ್ಲಿ ಇರುತ್ತೇನೆ ಎಂದು ಭಾವಿಸುತ್ತಾಳೋ... ಆಗ ಮಾತ್ರ ಅದು ನಿಜವಾಗಿಯೂ ಅಭಿವೃದ್ಧಿ ಹೊಂದಿದ ಸಮಾಜವಾಗುತ್ತದೆ. ಅಲ್ಲಿಯವರೆಗೂ ಅಂತಹ ಸಮಾಜ ಕೇವಲ ಕಾಲ್ಪನಿಕ; ಈಗ ನಮ್ಮ ಸಮಾಜ ಇದೆಯಲ್ಲ, ಅಂತಹದ್ದು!

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಇ20 ಪೆಟ್ರೋಲ್ ನೀಗದ ಗೊಂದಲ

ದೇಶದಾದ್ಯಂತ ಶೇ 20ರಷ್ಟು ಎಥೆನಾಲ್ ಮಿಶ್ರಿತ (ಇ20) ಪೆಟ್ರೋಲ್ ಪೂರೈಕೆ ಗುರಿಯನ್ನು ಸಾಧಿಸಿರುವ ಹೊತ್ತಿನಲ್ಲೇ, ಕೇಂದ್ರದ ಜೈವಿಕ ಇಂಧನ ಪ್ರೋತ್ಸಾಹ ನೀತಿಯ ವಿರುದ್ಧ ಮಿಶ್ರ ಅಭಿಪ್ರಾಯಗಳು ವ್ಯಕ್ತವಾಗಿವೆ. ಜುಲೈನಿಂದ ದೇಶದ ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ಇ20 ಪೆಟ್ರೋಲ್ ಮಾತ್ರ ಲಭ್ಯವಿದೆ. ಈ ಪೆಟ್ರೋಲ್ ಹಳೆಯ ವಾಹನಗಳಿಗೆ ಹೊಂದಾಣಿಕೆಯಾಗುತ್ತಿಲ್ಲ ಎಂಬ ಕೂಗು ಚಾಲಕರು ಮತ್ತು ಮಾಲೀಕರಿಂದ ಕೇಳಿಬರುತ್ತಿದೆ. ಇಂಧನ ಕ್ಷಮತೆ ಕುಸಿತ, ಎಂಜಿನ್‌ಗೆ ಹಾನಿಯಂತಹ ಸಮಸ್ಯೆಗಳ ಬಗ್ಗೆ ಜನರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರ ಜನರ ಆಕ್ಷೇಪಣೆಗಳನ್ನು ತಳ್ಳಿಹಾಕಿದ್ದು, ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ

ಹೊಸ ಪೆಟ್ರೋಲ್‌ನಿಂದ ಇಂಧನ ಕ್ಷಮತೆ ಕುಸಿತ, ವಾಹನಕ್ಕೆ ಹಾನಿ: ಮಾಲೀಕರು, ಚಾಲಕರ ಆತಂಕ

ಪ್ರಜಾವಾಣಿ ವಾರ್ತೆ

ದೇಶದಲ್ಲಿರುವ ಪೆಟ್ರೋಲ್, ಡೀಸೆಲ್ ಮತ್ತು ಇತರ ಇಂಧನ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಭಾರತವು ಶೇ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಹೊರದೇಶಗಳಿಂದ ತೈಲದ ಖರೀದಿಯನ್ನು ಕಡಿಮೆ ಮಾಡುವುದರ ಜೊತೆಗೆ ಇಂಗಾಲದ ಹೊರಸೂಸುವಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ಪರಿಸರ ಸ್ನೇಹಿ ಇಂಧನ ಬಳಕೆಗೆ ಕೇಂದ್ರ ಸರ್ಕಾರ ಉತ್ತೇಜನ ನೀಡುತ್ತಿದೆ. ಅದರಲ್ಲೊಂದು, ಪೆಟ್ರೋಲ್‌ಗೆ ಸಸ್ಯಜನ್ಯವಾದ ಎಥೆನಾಲ್ ಅನ್ನು ಬೆರೆಸಿ ಮಾರಾಟ ಮಾಡುವುದು. 2001ರಿಂದಲೂ ಈ ಕಾರ್ಯಕ್ರಮ ಜಾರಿಯಲ್ಲಿದೆ. ಪೆಟ್ರೋಲ್‌ಗೆ ಮಿಶ್ರಣ ಮಾಡುವ ಎಥೆನಾಲ್ ಪ್ರಮಾಣವನ್ನು ಹಂತ ಹಂತವಾಗಿ ಹೆಚ್ಚಿಸುತ್ತಾ ಬರಲಾಗಿದ್ದು, ಅದೀಗ ಶೇ 20ಕ್ಕೆ ತಲುಪಿದೆ. ಈ ವರ್ಷದ ಜುಲೈನಿಂದ ದೇಶದಲ್ಲಿರುವ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ 20 ಅಥವಾ ಇ20) ಮಾತ್ರ ಲಭ್ಯವಿದೆ. ಇದು ವಿವಾದವನ್ನೂ, ಗೊಂದಲವನ್ನೂ ಸೃಷ್ಟಿಸಿದೆ.

ಪೆಟ್ರೋಲ್ ವಾಹನಗಳ ಮಾಲೀಕರು, ಚಾಲಕರು ಪ್ರತಿ ದಿನ ಪೆಟ್ರೋಲ್ ಬಂಕ್‌ಗಳಲ್ಲಿ ಅಲ್ಲಿನ ಸಿಬ್ಬಂದಿಯೊಂದಿಗೆ ಜಗಳವಾಡುವ ಪರಿಸ್ಥಿತಿ ತಲೆದೋರಿದೆ. ಇ20 ಪೆಟ್ರೋಲ್ ಸರಿ ಇಲ್ಲ. ಎಥೆನಾಲ್ ಬೆರೆಸದ ಪೆಟ್ರೋಲ್ ಕೊಡಿ ಎಂದು ಆಗ್ರಹಿಸುತ್ತಿದ್ದಾರೆ. ಅವರ ಕೋಪಕ್ಕೆ ಕಾರಣವೂ ಇದೆ. ಇ20 ಪೆಟ್ರೋಲ್ ಪೂರೈಕೆ ಆರಂಭವಾದ ನಂತರ ವಾಹನಗಳ ಕಾರ್ಯಕ್ಷಮತೆ ಕುಗ್ಗಿದೆ. ಎಂಜಿನ್‌ನಲ್ಲಿ ತಾಂತ್ರಿಕ ದೋಷಗಳು ಕಾಣಿಸಿಕೊಳ್ಳುತ್ತಿವೆ. ತುಂಬಾ ಹಳೆಯ ವಾಹನಗಳ ಎಂಜಿನ್‌ಗಳು ಹಾಳಾಗಿದ್ದೂ ಇದೆ. ಇದರಿಂದ ವಾಹನಗಳ ನಿರ್ವಹಣೆಯ ವೆಚ್ಚ ಹೆಚ್ಚಾಗುತ್ತಿದ್ದು, ಜನರ ಜೇಬಿಗೆ ಹೊರೆಯಾಗಲು ಆರಂಭಿಸಿದೆ. ಹೊಸ ಪೆಟ್ರೋಲ್ ಹಾಕಿಸಿಕೊಂಡ ಬಹುತೇಕ ಬೈಕ್, ಕಾರುಗಳ ಇಂಧನ ಕ್ಷಮತೆ (ಮೈಲೇಜ್) ಗಣನೀಯವಾಗಿ ಕುಸಿತ ಕಂಡಿದೆ. ಕಾರುಗಳಲ್ಲಿ ಪ್ರತಿ ಲೀಟರ್‌ಗೆ ನಾಲ್ಕೈದು ಕಿ.ಮೀನಷ್ಟು ಇಳಿಕೆಯಾಗಿದೆ ಎಂಬುದು ಬಹುತೇಕ ಗ್ರಾಹಕರ ಹೇಳಿಕೆ.

ಆದರೆ, ಸರ್ಕಾರ ಇದನ್ನು ಒಪ್ಪುತ್ತಿಲ್ಲ. ವಾಹನಗಳ ಇಂಧನ ಕ್ಷಮತೆ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಬಹುದು. ಕೆಲವು ರಬ್ಬರ್ ಬಿಡಿಭಾಗಗಳು/ ಗ್ಯಾಸ್ಕೆಟ್‌ಗಳನ್ನು ಬದಲಿಸಿದರೆ ಈ ಸಮಸ್ಯೆಯೂ ಪರಿಹಾರವಾಗುತ್ತದೆ ಎಂಬುದು ಅದರ ವಾದ. ಆದರೆ, ಇದು ಜನರಿಗೆ ಸಮಾಧಾನ ತಂದಿಲ್ಲ.

ಗೊಂದಲ ಏಕೆ?: 2000ದ ದಶಕದಲ್ಲಿ ಭಾರತದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಪೂರೈಕೆ ಆರಂಭವಾಯಿತು. ಆರಂಭದಲ್ಲಿ ಶೇ 5ರಷ್ಟಿದ್ದ ಎಥೆನಾಲ್ ಪ್ರಮಾಣವನ್ನು ಶೇ 10ಕ್ಕೆ ಏರಿಸಲಾಯಿತು. ಇತ್ತೀಚಿನವರೆಗೂ ಈ ಪೆಟ್ರೋಲ್ ಅನ್ನೇ ಗ್ರಾಹಕರು ಬಳಸುತ್ತಿದ್ದರು. ಈ ಪ್ರಮಾಣವನ್ನು ಶೇ 20ಕ್ಕೆ ಹೆಚ್ಚಿಸಿದಾಗ ಸಮಸ್ಯೆ ತಲೆದೋರಿದೆ. 2023ರ ಏಪ್ರಿಲ್ ನಂತರ ತಯಾರಿಸಲಾದ ವಾಹನಗಳು ಇ20 ಪೆಟ್ರೋಲ್ ಬಳಕೆಗೆ ಯೋಗ್ಯವಾಗಿದೆ ಎಂದು ಹೇಳಲಾಗುತ್ತಿದೆ. ಅದಕ್ಕೂ ಹಳೆಯ ವಾಹನಗಳಿಗೆ ಈ ಪೆಟ್ರೋಲ್ ಹೊಂದಿಕೆಯಾಗುತ್ತಿಲ್ಲ ಎಂಬುದು ವಾಹನ ಉದ್ಯಮದ ತಜ್ಞರು ಹಾಗೂ ಗ್ರಾಹಕರ ಅಭಿಪ್ರಾಯ. ಬಿಎಸ್– 6 ಹಂತದ ವಾಹನಗಳಲ್ಲೂ ಸಮಸ್ಯೆಗಳು ಕಾಣಿಸಿಕೊಂಡಿವೆ. 2023ರ ಏಪ್ರಿಲ್ ನಂತರ ತಯಾರಿಸಲಾದ ವಾಹನಗಳಲ್ಲಿ, ವಾಹನವು ಇ5, ಇ10 ಪೆಟ್ರೋಲ್ ಬಳಸಲು ಯೋಗ್ಯ ಎಂದಷ್ಟೇ ಇದೆ. ಇತ್ತೀಚೆಗೆ ತಯಾರಾಗುತ್ತಿರುವ ವಾಹನಗಳ ಟ್ಯಾಂಕ್ ಮುಚ್ಚಳದಲ್ಲಿ 'ಇ20 ಪೆಟ್ರೋಲ್ ಬಳಸಲು ಅರ್ಹ' ಎಂಬ ಉಲ್ಲೇಖ ಇದೆ.

ಕೆಲವು ವಾಹನ ತಯಾರಿಕಾ ಕಂಪನಿಗಳು ತಮ್ಮ ಹಳೆಯ ವಾಹನಗಳನ್ನು ಇ20 ಪೆಟ್ರೋಲ್ ಬಳಸಿ ಪರೀಕ್ಷೆಗೆ ಒಳಪಡಿಸಿಲ್ಲ ಎಂದು ಆರಂಭದಲ್ಲಿ ಹೇಳಿಕೆ ನೀಡಿದ್ದರೂ ನಂತರ ತಮ್ಮ ಹೇಳಿಕೆ ಬದಲಿಸಿವೆ. ದೇಶದ ಅತಿದೊಡ್ಡ ಕಾರು ತಯಾರಿಕಾ ಸಂಸ್ಥೆ ಮಾರುತಿ ಸುಜುಕಿ ಸೇರಿದಂತೆ ಕೆಲವು ಕಂಪನಿಗಳು ಇ20 ಪೆಟ್ರೋಲ್ ಕಿಟ್ ಅನ್ನು ಸಿದ್ಧಪಡಿಸಿವೆ ಎಂದು ವರದಿಯಾಗಿದೆ. ಹೊಸ ಪೆಟ್ರೋಲ್‌ಗೆ ವಾಹನವನ್ನು ಹೊಂದಿಸಲು ಅಗತ್ಯವಾದ ಬಿಡಿಭಾಗಗಳನ್ನು ಈ ಕಿಟ್ ಹೊಂದಿದೆ.

ಇತ್ತೀಚೆಗೆ ನವದೆಹಲಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಭಾರತೀಯ ವಾಹನ ತಯಾರಿಕಾ ಸೊಸೈಟಿಯ (ಎಸ್‌ಐಎಎಂ) ಕಾರ್ಯನಿರ್ವಾಹಕ ನಿರ್ದೇಶಕ ಪಿ.ಕೆ.ಬ್ಯಾನರ್ಜಿ, 'ಹಳೆಯ ವಾಹನಗಳಲ್ಲಿ ಇ20 ಪೆಟ್ರೋಲ್ ಬಳಸುವುದರಿಂದ ಇಂಧನ ಕ್ಷಮತೆ ಸ್ವಲ್ಪ ಕಡಿಮೆಯಾಗಬಹುದು. ಆದರೆ, ವಾಹನಕ್ಕೆ ಯಾವುದೇ ಸಮಸ್ಯೆ ಇಲ್ಲ. ಕೆಲವು ಸಮಯದಿಂದ ಎಲ್ಲ ವಾಹನಗಳು ಇ20 ಪೆಟ್ರೋಲ್ ಅನ್ನೇ ಬಳಸುತ್ತಿವೆ. ಆದರೆ, ಎಲ್ಲೂ ವಾಹನ ಹಾಳಾಗಿ ನಿಂತ ಉದಾಹರಣೆ ಇಲ್ಲ. ಒಂದು ವೇಳೆ ಅಂತಹ ಯಾವುದೇ ಸಮಸ್ಯೆ ಬಂದರೆ ಕಂಪನಿಗಳು ವಾರಂಟಿ, ವಿಮೆಯ ಕ್ಲೇಮುಗಳಿಗೆ ಸ್ಪಂದಿಸಲಿವೆ' ಎಂದು ಹೇಳಿದ್ದರು. ಆದರೆ, ಇ20 ಪೆಟ್ರೋಲ್‌ನಿಂದ ವಾಹನಕ್ಕೆ ಹಾನಿಯಾದರೆ, ಅದಕ್ಕೆ ವಿಮಾ ಕಂಪನಿಗಳು ಪರಿಹಾರ ನೀಡುತ್ತವೆಯೇ ಇಲ್ಲವೇ ಎಂಬ ಬಗ್ಗೆ ಗೊಂದಲ ಇದೆ.

'ಭಾರತದಲ್ಲಿ ಹಳೆಯ ವಾಹನಗಳನ್ನು ಹೊಂದಿರುವವರೇ ಹೆಚ್ಚು. ವಾಹನ ತಯಾರಿಕಾ ಕಂಪನಿಗಳು ಕೂಡ ಈ ಬಗ್ಗೆ ತಮ್ಮ ಗ್ರಾಹಕರಿಗೆ ತಿಳಿ ಹೇಳುವ ಕೆಲಸವನ್ನು ಮಾಡುತ್ತಿಲ್ಲ. ಸರ್ಕಾರವೂ ತನ್ನ ನಿರ್ಧಾರದ ಬಗ್ಗೆ ದೇಶದ ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಿಲ್ಲ. ಇ20 ಪೆಟ್ರೋಲ್ ಕಾರಣಕ್ಕೆ ಹೊಸ ವಾಹನಗಳನ್ನು ಖರೀದಿಸುವ ಸಾಮರ್ಥ್ಯ ಬಹುತೇಕರಿಗೆ ಇಲ್ಲ. ಇ20 ಪೆಟ್ರೋಲ್ ಬಗ್ಗೆ ನಮಗೆ ಆಕ್ಷೇಪ ಇಲ್ಲ. ಆದರೆ, ಹಳೆಯ ವಾಹನಗಳಿಗೆ ಹೊಂದುವಂತಹ ಪೆಟ್ರೋಲ್ ಲಭ್ಯವಿರುವಂತೆ ಸರ್ಕಾರ ನೋಡಿಕೊಳ್ಳಬೇಕು. ಪೆಟ್ರೋಲ್ ಬಂಕ್‌ಗಳಲ್ಲಿ ತಮಗೆ ಬೇಕಾದ ಪೆಟ್ರೋಲ್ ಖರೀದಿಸುವ ಆಯ್ಕೆ ಇರಬೇಕು' ಎಂಬುದು ಬಹುತೇಕ ಗ್ರಾಹಕರ ಅಭಿಪ್ರಾಯ. ಇದೇ ವಾದವನ್ನು ಮುಂದಿಟ್ಟುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಪೀಠ ವಜಾ ಮಾಡಿದೆ.

ಪಳೆಯುಳಿಕೆ ಇಂಧನದ ಮೇಲೆ ಅವಲಂಬನೆ ತಪ್ಪಿಸುವುದಕ್ಕಾಗಿ ಸರ್ಕಾರ ಜೈವಿಕ ಇಂಧನ ನೀತಿಯನ್ನು ರೂಪಿಸಿದ್ದು, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿದೆ. ಹೀಗಾಗಿ, ಜನರಿಂದ ವಿರೋಧ ವ್ಯಕ್ತವಾದರೂ ಅದು ತನ್ನ ನಿರ್ಧಾರದಿಂದ ಹಿಂದೆ ಸರಿಯುವ ಸಾಧ್ಯತೆ ಕ್ಷೀಣ ಎಂದೂ ಹೇಳಲಾಗುತ್ತಿದೆ.

ದರ ಕಡಿಮೆ ಏಕಿಲ್ಲ?

ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡಿದರೂ ಸರ್ಕಾರ ಪೆಟ್ರೋಲ್ ದರವನ್ನು ಕಡಿಮೆ ಮಾಡಿಲ್ಲ ಏಕೆ ಎಂಬುದು ಹಲವರ ಪ್ರಶ್ನೆ. ಇದಕ್ಕೂ ಸರ್ಕಾರ ಉತ್ತರಿಸಿದೆ. ಎಥೆನಾಲ್‌ನ ಬೆಲೆ ಹೆಚ್ಚಿದೆ. ಪ್ರತಿ ಲೀಟರ್‌ಗೆ ₹71.32ರಷ್ಟಿದೆ. ಇ20 ಪೆಟ್ರೋಲ್ ತಯಾರಿಸಲು ಬಳಸುವ ಮೋಟರ್ ಸ್ಪಿರಿಟ್‌ನ ದರವೂ ಹೆಚ್ಚಾಗಿದೆ. ಜೋಳ ಆಧಾರಿತ ಎಥೆನಾಲ್ ಬೆಲೆ ₹52.92ರಿಂದ ₹71.86ಕ್ಕೆ ಏರಿದೆ ಎಂದು ಅದು ಹೇಳಿದೆ.



ಬೆಂಗಳೂರಿನ ಪೆಟ್ರೋಲ್ ಬಂಕ್ ಒಂದರಲ್ಲಿ ಇ20 ಪೆಟ್ರೋಲ್ ಎಂದು ಫಲಕ ಹಾಕಿರುವುದು

ಇ–ಪೆಟ್ರೋಲ್ ನಡೆದು ಬಂದ ಹಾದಿ

2001: ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ) ಯೋಜನೆ ಮಹಾರಾಷ್ಟ್ರದ ಮಿರಾಜ್ ಮತ್ತು ಉತ್ತರ ಪ್ರದೇಶದ ಬರೇಲಿಯಲ್ಲಿ ಪ್ರಯೋಗಿಕವಾಗಿ ಜಾರಿ

2003: ಯೋಜನೆ ಅಧಿಕೃತವಾಗಿ ಅನುಷ್ಠಾನ. ಒಂಬತ್ತು ರಾಜ್ಯಗಳು ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶೇ 5ರಷ್ಟು ಎಥೆನಾಲ್ ಮಿಶ್ರಿತ (ಇ5) ಪೆಟ್ರೋಲ್ ಗ್ರಾಹಕರಿಗೆ ಪೂರೈಕೆ

2006: ಇ5 ಪೆಟ್ರೋಲ್ ಪೂರೈಕೆ 20 ರಾಜ್ಯಗಳಿಗೆ ವಿಸ್ತರಣೆ

2018: ಜೈವಿಕ ಇಂಧನ ರಾಷ್ಟ್ರೀಯ ನೀತಿ ರೂಪಿಸಿದ ಸರ್ಕಾರ. 2030ರ ಒಳಗಾಗಿ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಮತ್ತು ಶೇ 5ರಷ್ಟು ಜೈವಿಕ ಡೀಸೆಲ್ ಮಿಶ್ರಣ ಮಾಡಿದ ಡೀಸೆಲ್ ಬಳಸುವ ಗುರಿ ನಿಗದಿ

2019: ಶೇ 10ರಷ್ಟು ಎಥೆನಾಲ್ ಮಿಶ್ರಿತ (ಇ10) ಪೆಟ್ರೋಲ್ ಮಾರಾಟ ಆರಂಭ

2022: ದೇಶದಾದ್ಯಂತ ಇ10 ಪೆಟ್ರೋಲ್ ಮಾರಾಟದ ಗುರಿ ಸಾಧನೆ

2022: ರಾಷ್ಟ್ರೀಯ ಜೈವಿಕ ಇಂಧನ ನೀತಿಗೆ ತಿದ್ದುಪಡಿ. 2025–26ರ ವೇಳೆಗೆ ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಮಿಶ್ರಣದ ಗುರಿ ತಲುಪುವ ಪ್ರಸ್ತಾವ. 2030ರ ವೇಳೆಗೆ ಶೇ 5ರಷ್ಟು ಎಥೆನಾಲ್ ಮಿಶ್ರಿತ ಡೀಸೆಲ್ ಅಥವಾ ಜೈವಿಕ ಡೀಸೆಲ್‌ನ ನೇರ ಮಾರಾಟದ ಗುರಿ ನಿಗದಿ

2023ರ ಏಪ್ರಿಲ್ 1: ಇ20 ಪೆಟ್ರೋಲ್ ಯೋಜನೆಗೆ ಚಾಲನೆ. ಪೆಟ್ರೋಲ್‌ಗೆ ಬೆರೆಸುವ ಎಥೆನಾಲ್ ಪ್ರಮಾಣ ಶೇ 14.06ಕ್ಕೆ ಹೆಚ್ಚಳ

2025ರ ಏಪ್ರಿಲ್: ಎಲ್ಲ ಹೊಸ ವಾಹನಗಳು ಇ20 ಪೆಟ್ರೋಲ್‌ಗೆ ಹೊಂದುವಂತೆ ಇರುವುದನ್ನು ಕಡ್ಡಾಯಗೊಳಿಸಿದ ಸರ್ಕಾರ

2025ರ ಜುಲೈ: ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಬೆರೆಸುವ ಗುರಿ ಸಾಧನೆ

ಆಧಾರ: ರಾಷ್ಟ್ರೀಯ ಜೈವಿಕ ಇಂಧನ ನೀತಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಪಿಐಬಿ, ಬಿಬಿಸಿ, ರಾಯಿಟರ್ಸ್

ಸರ್ಕಾರದ ಅಂಕಿ ಅಂಶಗಳು ಹೇಳುವುದೇನು?

₹1.44 ಲಕ್ಷ ಕೋಟಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆಯಿಂದ 2014–15ರಿಂದ 2025ರ ಜುಲೈವರೆಗೆ ಉಳಿತಾಯ ಆಗಿರುವ ವಿದೇಶಿ ವಿನಿಮಯ ಮೊತ್ತ

₹1.20 ಲಕ್ಷ ಕೋಟಿ ಎಥೆನಾಲ್ ಉತ್ಪಾದನೆಗೆ ಕಬ್ಬು, ಜೋಳ ಮತ್ತು ಇತರ ವಸ್ತುಗಳ ಖರೀದಿಗಾಗಿ ರೈತರಿಗೆ ಪಾವತಿ ಮಾಡಲಾದ ಹಣ

2.45 ಕೋಟಿ ಟನ್ ಎಥೆನಾಲ್ ಮಿಶ್ರಣದಿಂದಾಗಿ ಕಚ್ಚಾ ತೈಲದಲ್ಲಿ ಆದ ಉಳಿಕೆ

7.36 ಕೋಟಿ ಟನ್ ಇಂಗಾಲದ ಡೈಆಕ್ಸೈಡ್‌ನ ಹೊರಸೂಸುವಿಕೆಯಲ್ಲಿ ಆದ ಕಡಿತ. ಇದು 30 ಕೋಟಿಯಷ್ಟು ಗಿಡಗಳನ್ನು ನೆಟ್ಟದ್ದಕ್ಕೆ ಸಮ

ಸರ್ಕಾರದ ವಾದವೇನು?

- ಇಂಧನ ಆಮದು ಅವಲಂಬನೆ ಕಡಿಮೆ ಮಾಡಲು, 2070ರ ವೇಳೆಗೆ ಶೂನ್ಯ ಇಂಗಾಲದ ಗುರಿ ಸಾಧಿಸಲು ಈ ಕ್ರಮ ಅನಿವಾರ್ಯ
- ವಿಸ್ತೃತ ಅಧ್ಯಯನ, ವಾಹನ ಉದ್ದಿಮೆಗಳ ಸಂಘಟನೆಯೊಂದಿಗೆ ಚರ್ಚಿಸಿದ ಬಳಿಕವೇ ಈ ನಿರ್ಧಾರ ಕೈಗೊಳ್ಳಲಾಗಿದೆ
- ಎಥೆನಾಲ್‌ನಿಂದಾಗಿ ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ಸಿಗುತ್ತದೆ. ಗ್ರಾಮೀಣ ರೈತರಿಗೆ ಅನುಕೂಲವಾಗುತ್ತದೆ. ಉದ್ಯೋಗವೂ ಸೃಷ್ಟಿಯಾಗುತ್ತದೆ
- ಇ20 ಪೆಟ್ರೋಲ್‌ನಿಂದ ವಾಹನಗಳ ವೇಗವರ್ಧನೆ ಉತ್ತಮವಾಗಿರುತ್ತದೆ. ಆರಾಮದಾಯಕ ಪ್ರಯಾಣವೂ ಸಾಧ್ಯ. ಇಂಗಾಲ ಉಗುಳುವಿಕೆ ಕಡಿಮೆಯಾಗುತ್ತದೆ
- ಇ10 ಪೆಟ್ರೋಲ್ ಬಳಸುತ್ತಿದ್ದ ನಾಲ್ಕು ಚಕ್ರಗಳ ವಾಹನಗಳ ಇಂಧನ ಕ್ಷಮತೆ ಶೇ 1ರಿಂದ ಶೇ 2ರಷ್ಟು, ಉಳಿದ ವಾಹನಗಳಲ್ಲಿ ಶೇ 3ರಿಂದ 6ರಷ್ಟು ಕಡಿಮೆಯಾಗಬಹುದು. ರಬ್ಬರ್ ಬಿಡಿಭಾಗಗಳನ್ನು ಬದಲಿಸುವುದರಿಂದ, ಎಂಜಿನ್ ಟ್ಯೂನಿಂಗ್ ಮಾಡುವುದರಿಂದ ಇದನ್ನು ಸರಿಪಡಿಸಬಹುದು
- 2009ರಿಂದಲೂ ದೇಶದ ವಾಹನಗಳು ಎಥೆನಾಲ್ ಮಿಶ್ರಣದ ಪೆಟ್ರೋಲ್ ಅನ್ನೇ ಬಳಸುತ್ತಿವೆ. ಇ10 ಪೆಟ್ರೋಲ್ ಬಳಸುತ್ತಿರುವ ವಾಹನಗಳಲ್ಲಿ ಇಂಧನ ಕ್ಷಮತೆಯ ಕುಸಿತ ಪ್ರಮಾಣ ತುಂಬಾ ಕಡಿಮೆ
- ಮೊದಲಿನಂತೆ ಎಥೆನಾಲ್ ಮುಕ್ತ ಪೆಟ್ರೋಲ್ ವ್ಯವಸ್ಥೆಗೆ ಹೋಗುವುದರಿಂದ ದೇಶವು ಇಂಧನ ಪರಿವರ್ತನೆಯಲ್ಲಿ ಮತ್ತು ಮಾಲಿನ್ಯ ನಿಯಂತ್ರಣದಲ್ಲಿ ಸಾಧಿಸಿರುವ ಯಶಸ್ಸು ನಷ್ಟವಾಗುತ್ತದೆ

ವಿದೇಶಗಳಲ್ಲಿ...

- ಬ್ರೆಜಿಲ್, ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ಹಲವು ದೇಶಗಳು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸುತ್ತಿವೆ
- ಬೆಜ್ರಿಲ್‌ನಲ್ಲಿ 1970ರ ದಶಕದಿಂದಲೇ ಎಥೆನಾಲ್ ಮಿಶ್ರಿತ ಪೆಟ್ರೋಲ್ ಲಭ್ಯವಿದೆ. ಕಬ್ಬಿನಿಂದ ಭಾರಿ ಪ್ರಮಾಣದಲ್ಲಿ ಎಥೆನಾಲ್ ಅನ್ನು ಉತ್ಪಾದಿಸಲಾಗುತ್ತದೆ. ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನದಲ್ಲಿ ತಯಾರಿಸಿದ ವಾಹನಗಳು ಅಲ್ಲಿ ಈಗ ಹೆಚ್ಚು ಮಾರಾಟವಾಗುತ್ತಿವೆ. ಈ ವಾಹನಗಳು ಯಾವುದೇ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಹಾಗೂ ಎಥೆನಾಲ್ ರಹಿತ ಪೆಟ್ರೋಲ್‌ನಿಂದಲೂ ಚಲಿಸುವ ಸಾಮರ್ಥ್ಯ ಹೊಂದಿವೆ
- ಅಮೆರಿಕದಲ್ಲಿ 2005ರಿಂದಲೇ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಸಲಾಗುತ್ತಿದೆ. ಎ10 ಪೆಟ್ರೋಲ್ ಬಳಕೆ ಹೆಚ್ಚಿದೆ. ಕೆಲವು ಕಡೆಗಳಲ್ಲಿ ಇ51, ಇ85 ಪೆಟ್ರೋಲ್ ಕೂಡ ಲಭ್ಯವಿವೆ
- ಯುರೋಪಿನ ಫ್ರಾನ್ಸ್, ಜರ್ಮನಿ, ಬ್ರಿಟನ್‌ನಲ್ಲಿ ಇ10 ಪೆಟ್ರೋಲ್ ಬಳಕೆಯಲ್ಲಿದೆ. ಉಳಿದ ರಾಷ್ಟ್ರಗಳಲ್ಲಿ ಇ5 ಪೆಟ್ರೋಲ್ ಜನಪ್ರಿಯ

ರಾಷ್ಟ್ರೀಯ

'ಬೇಡಿಕೆ ಆಲಿಸದಿದ್ದರೆ ಐದು ಕೋಟಿ ಮರಾಠರು ಮುಂಬೈಗೆ'



ಮನೋಜ್ ಜರಾಂಗೆ

ಮುಂಬೈ (ಪಿಟಿಐ): ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ನಮ್ಮ ಮೀಸಲಾತಿ ಬೇಡಿಕೆಯನ್ನು ಆಲಿಸದಿದ್ದರೆ 5 ಕೋಟಿಗೂ ಹೆಚ್ಚು ಮರಾಠರು ಮುಂಬೈಗೆ ಬರಲಿದ್ದಾರೆ ಎಂದು ಹೋರಾಟಗಾರ ಮನೋಜ್ ಜರಾಂಗೆ ಅವರು ಎಚ್ಚರಿಸಿದ್ದಾರೆ.

ಆಜಾದ್ ಮೈದಾನದಲ್ಲಿ ನಾಲ್ಕು ದಿನಗಳಿಂದ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಜರಾಂಗೆ, 'ಫಡಣವೀಸ್ ಉದ್ದೇಶಪೂರ್ವಕವಾಗಿ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಲು ವಿಳಂಬ ಮಾಡುತ್ತಿದ್ದಾರೆ' ಎಂದು ಸೋಮವಾರ ಆರೋಪಿಸಿದರು.

'ಮರಾಠರಿಗೆ ಮೀಸಲಾತಿ ನೀಡುವ ನಿರ್ಧಾರವನ್ನು ಸುಲಭವಾಗಿ ತೆಗೆದುಕೊಳ್ಳಬಹುದು. ರಾಜ್ಯ ಸರ್ಕಾರವು ಮರಾಠವಾಡದಲ್ಲಿರುವ ಮರಾಠರನ್ನು ಕುಣಬಿಗಳು ಎಂದು ಘೋಷಿಸಬೇಕು ಮತ್ತು ಅಂತಹ ಪ್ರಮಾಣಪತ್ರಗಳನ್ನು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳೇ ವಿತರಿಸಬಹುದು' ಎಂದು ಹೇಳಿದರು.

ಮರಾಠಾ ಸಮುದಾಯಕ್ಕೆ ಇತರ ಹಿಂದುಳಿದ ವರ್ಗಗಳ (ಒಬಿಸಿ) ಅಡಿಯಲ್ಲಿ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ 10ರಷ್ಟು ಮೀಸಲಾತಿ ನೀಡಬೇಕು ಎಂಬುದು ಅವರ ಆಗ್ರಹವಾಗಿದೆ.

'ಜರಾಂಗೆ ಪ್ರತಿಭಟನೆ ಶಾಂತಿಯುತವಾಗಿಲ್ಲ'

ಮನೋಜ್ ಜರಾಂಗೆ ನೇತೃತ್ವದ ಮರಾಠ ಮೀಸಲಾತಿ ಆಂದೋಲನದಿಂದಾಗಿ ಇಡೀ ನಗರ ಸ್ತಬ್ಧಗೊಂಡಿದೆ ಎಂದು ಬಾಂಬೆ ಹೈಕೋರ್ಟ್ ಸೋಮವಾರ ಹೇಳಿದೆ. ಅವರ ಪ್ರತಿಭಟನೆಯು ಶಾಂತಿಯುತವಾಗಿಲ್ಲ ಮತ್ತು ಎಲ್ಲಾ ಷರತ್ತುಗಳನ್ನು ಉಲ್ಲಂಘಿಸಿದೆ ಎಂದೂ ತಿಳಿಸಿದೆ.

ಮುಂಬೈನಲ್ಲಿ ಸಹಜ ಸ್ಥಿತಿ ಮರುಸ್ಥಾಪನೆಯಾಗಬೇಕು ಎಂದು ಹೈಕೋರ್ಟ್ ಹೇಳಿದ್ದು, ಮಂಗಳವಾರ ಮಧ್ಯಾಹ್ನದೊಳಗೆ ಪರಿಸ್ಥಿತಿಯನ್ನು ಸರಿಪಡಿಸುವಂತೆ ಮತ್ತು ಎಲ್ಲಾ ಬೀದಿಗಳನ್ನು ತೆರವುಗೊಳಿಸುವಂತೆ ಜರಾಂಗೆ ಮತ್ತು ಅವರ ಬೆಂಬಲಿಗರಿಗೆ ಸೂಚನೆ ನೀಡಿದೆ.

'ಚುನಾವಣಾ ಆಯೋಗದ ಕಾರ್ಯ: ಸಂವಿಧಾನಕ್ಕೆ ಸವಾಲು'

ಪ್ರಜಾವಾಣಿ ವಾರ್ತೆ



ಸುದರ್ಶನ್

ಹೈದರಾಬಾದ್: ಚುನಾವಣಾ ಆಯೋಗದ ಕಾರ್ಯನಿರ್ವಹಣೆಯು ಭಾರತದ ಸಂವಿಧಾನ ಪ್ರಸ್ತುತ ಎದುರಿಸುತ್ತಿರುವ ದೊಡ್ಡ ಸವಾಲನ್ನು ಪ್ರತಿನಿಧಿಸುತ್ತದೆ ಎಂದು ಉಪರಾಷ್ಟ್ರಪತಿ ಚುನಾವಣೆಯ ವಿಪಕ್ಷಗಳ ಅಭ್ಯರ್ಥಿ, ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅವರು ಸೋಮವಾರ ಹೇಳಿದರು.

ಪ್ರಚಾರ ಕಾರ್ಯದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣಾ ಆಯೋಗವು ಇದೇ ರೀತಿ ಕೆಲಸವನ್ನು ಮುಂದುವರಿಸಿದರೆ ಪ್ರಜಾಪ್ರಭುತ್ವವು ಅಪಾಯಕ್ಕೀಡಾಗುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಮತದಾರರ ಪಟ್ಟಿ ಕೇವಲ ಒಂದು ಕಾಗದ ಎಂದು ಕೆಲವರು ಭಾವಿಸಿದ್ದಾರೆ. 'ಬಹುಮತ ಪಡೆದಿದ್ದೇವೆ. ಆದ್ದರಿಂದ ನಾವೇ ಕಾನೂನುಗಳನ್ನು ರೂಪಿಸುತ್ತೇವೆ' ಎಂಬುದು ಹೇಗೆ ಸ್ವೀಕಾರಾರ್ಹವಾಗುತ್ತದೆ? ನಮ್ಮದು ಬಹುಸಂಖ್ಯಾತ ರಾಷ್ಟ್ರವಲ್ಲದಿರಬಹುದು. ಆದರೆ, ಬಹು ಭಾಷೀಯ, ಬಹುಸಂಸ್ಕೃತಿಯ ಮತ್ತು ಬಹುಧರ್ಮೀಯ ರಾಷ್ಟ್ರ' ಎಂದರು.

'ಸಂವಿಧಾನವು ಯಾರಿಗೂ ಅಧಿಕಾರವನ್ನು ನೀಡುವುದಿಲ್ಲ. ಅಧಿಕಾರಕ್ಕೆ ಮಿತಿ ವಿಧಿಸುವುದು ಅದರ ಕರ್ತವ್ಯ. ಉತ್ತಮರ ಕೈಯಲ್ಲಿದ್ದರೆ ಮಾತ್ರ ಸಂವಿಧಾನದ ರಕ್ಷಣೆ ಯಾಗುತ್ತದೆ' ಎಂದು ಹೇಳಿದರು.

ಸಲ್ವಾ ಜುಡುಮ್ ತೀರ್ಪಿನ ಕುರಿತು ಅಮಿತ್ ಶಾ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಸುದರ್ಶನ್ ಅವರು, 'ಇದು ವೈಯಕ್ತಿಕ ತೀರ್ಪಲ್ಲ, ಸುಪ್ರೀಂ ಕೋರ್ಟ್‌ನ ತೀರ್ಪು. ಹೇಳಿಕೆಗಳನ್ನು ನೀಡುವ ಮೊದಲು ಶಾ ಅವರು ತೀರ್ಪನ್ನು ಸರಿಯಾಗಿ ಓದಿಕೊಳ್ಳಬೇಕು ಎಂದು ಸಲಹೆ ನೀಡಿದರು.

'ಟೀಕೆಗಳ ಕಾರಣಕ್ಕೆ ನಾನು ಚುನಾವಣೆಯಿಂದ ಹಿಂದೆ ಸರಿಯುವುದಿಲ್ಲ, ವಿರೋಧಿಗಳ ಕಾರ್ಯತಂತ್ರವು ಫಲಿಸುವುದಿಲ್ಲ' ಎಂದು ಎನ್‌ಡಿಎಗೆ ತಿರುಗೇಟು ನೀಡಿದರು..

ಮಾತನಾಡಿದರೆ ಚರ್ಚೆ ಸಾಧ್ಯ: ಎನ್‌ಡಿಎ ಅಭ್ಯರ್ಥಿ ಸಿ.ಪಿ ರಾಧಾಕೃಷ್ಣನ್ ಅವರನ್ನು ಟೀಕಿಸಿದ ಸುದರ್ಶನ್, 'ಯಾವುದೇ ಸಂವಾದ ಮತ್ತು ಚರ್ಚೆಯಲ್ಲಿ ನನ್ನ ಪ್ರತಿಸ್ಪರ್ಧಿ ಕಾಣಿಸುತ್ತಿಲ್ಲ' ಎಂದರು.

'ನಾನು ಪ್ರತಿದಿನ ಮಾಧ್ಯಮಗಳೊಂದಿಗೆ ಮಾತನಾಡುತ್ತೇನೆ. ಆದರೆ ನನ್ನ ಪ್ರತಿಸ್ಪರ್ಧಿ ಮಾತನಾಡುತ್ತಿಲ್ಲ. ಅವರು ಮಾತನಾಡಿದರೆ ಒಳ್ಳೆಯ ಚರ್ಚೆ ನಡೆಯಲು ಸಾಧ್ಯ' ಎಂದು ಅವರು ಹೇಳಿದರು.

ನಿಜವಾದ ಸೌಂದರ್ಯವೆಂದರೆ...

ನುಡಿ ಬೆಳಗು



ದೀಪಾ ಹಿರೇಗುತ್ತಿ

ಸೋನಾ ಎನ್ನುವ ಯುವತಿ ತನ್ನ ಅಪ್ರತಿಮ ಚೆಲುವಿಗೆ ಹೆಸರಾಗಿದ್ದಳು. ಶ್ರೀಮಂತ ವ್ಯಾಪಾರಿಯೊಬ್ಬನ ಪತ್ನಿಯಾಗಿದ್ದ ಆಕೆ ಎಲ್ಲ ಅನುಕೂಲಗಳಿದ್ದರೂ ಯಾವಾಗಲೂ ಅಸಮಾಧಾನದಿಂದ ಇರುತ್ತಿದ್ದಳು. ಅಯ್ಯೋ ವಯಸ್ಸಾಗುತ್ತ ಹೋದಂತೆ ತನ್ನ ಚೆಲುವು ಕುಂದುತ್ತ ಹೋಗುತ್ತದಲ್ಲ ಎಂದು ಸದಾ ಕೊರಗುತ್ತಿದ್ದಳು. ಎಲ್ಲಾ ಇದ್ದರೂ ಏನೂ ಇಲ್ಲದ ಶೂನ್ಯ, ಖಾಲಿತನದಿಂದ ಕೂಡಿತ್ತು ಅವಳ ಬದುಕು. ಒಮ್ಮೆ ತಮ್ಮೂರಲ್ಲಿ ಬುದ್ಧನ ಪ್ರವಾಸದ ಬಗ್ಗೆ ಕೇಳಿದ ಯುವತಿ ದರ್ಶನಕ್ಕೆಂದು ಬಂದಳು. 'ಗುರುಗಳೇ, ನನ್ನ ಸೌಂದರ್ಯ ಮತ್ತು ಸಂತೋಷ ಎರಡನ್ನೂ ಸದಾಕಾಲ ಕಾಪಾಡಿಕೊಳ್ಳುವುದು ಹೇಗೆ' ಎಂದು ಕೇಳಿದಳು.

ಹಜಾರದಲ್ಲಿದ್ದ ಅಗಲ ಪಾತ್ರೆಯೊಂದರಲ್ಲಿ ನೀರು ತುಂಬಿತ್ತು. ಅದರ ಮೇಲೆ ಹೂವಿನ ಪಕಳೆಗಳು ತೇಲುತ್ತಿದ್ದವು. ಬುದ್ಧ ಒಂದು ಕಡ್ಡಿಯನ್ನು ತೆಗೆದುಕೊಂಡು ನೀರನ್ನು ಕಲಕಲು ಹೇಳಿದ. ಕಲಕಿದಳು. ಪಕಳೆಗಳು ಚೆಲ್ಲಾಪಿಲ್ಲಿಯಾದವು. ಆಗ ಬುದ್ಧನೆಂದ, 'ನೋಡು, ಶಾಂತವಾಗಿರುವ ನೀರಿನ ಮೇಲೆ ಪಕಳೆಗಳು ಶಾಂತವಾಗಿ ತೇಲುತ್ತಿದ್ದವು. ನೋಡಲೂ ಸುಂದರವಾಗಿ ಕಾಣುತ್ತಿದ್ದವು. ಆದರೆ ಅದೇ ಕಲಕಿದ ನೀರಲ್ಲಿ ಹೇಗಿವೆ? ಎಲ್ಲ ಪಕಳೆಗಳೂ ಚೆಲ್ಲಾಪಿಲ್ಲಿಯಾಗಿವೆ. ಪಾತ್ರೆ ಎಷ್ಟು ಸುಂದರವಾಗಿದ್ದರೇನು? ಪಾತ್ರೆಯೊಳಗಿನ ನೀರು ಹೇಗಿರುತ್ತದೆಂಬುದರ ಮೇಲೆ ಪಕಳೆಗಳ ಸೌಂದರ್ಯ ಕಾಣುವುದು. ಅದೇ ರೀತಿ ನೀನು ಯಾವಾಗಲೂ ತಳಮಳದಲ್ಲಿ, ಗೊಂದಲದಲ್ಲಿ, ಚಿಂತೆಯಲ್ಲಿ ಇದ್ದರೆ ಸುಖವಾಗಿರಲು ಸಾಧ್ಯವಿಲ್ಲ, ಸುಂದರವಾಗಿ ಕಾಣಲೂ ಸಾಧ್ಯವಿಲ್ಲ'. ಸೋನಾ ಸುಮ್ಮನೆ ಕೇಳುತ್ತಿದ್ದಳು. ಬುದ್ಧ ಮುಗುಳ್ನಕ್ಕು ಹೇಳಿದ, 'ಮಗೂ ದೈಹಿಕ ಸೌಂದರ್ಯ ಹೂವಿನಂತೆ, ಇಂದು ಅರಳಿ ನಾಳೆ ಮುದುಡಿ ಹೋಗುತ್ತದೆ. ಕೊನೆಯವರೆಗೂ ಉಳಿಯುವುದು ಮನಸ್ಸಿನ ಚೆಲುವು. ಸಹನೆ, ಕರುಣೆ, ಸಹಾನುಭೂತಿಯಂತಹ ಗುಣಗಳನ್ನು ಬೆಳೆಸಿಕೋ, ಅವು ಸಮಯಾತೀತ. ಸುಮ್ಮನೆ ಇಲ್ಲದ ವಿಚಾರಗಳ ಬಗ್ಗೆ ಯೋಚಿಸುತ್ತ ಕೊರಗಬೇಡ'. ಸೋನಾಳಿಗೆ ಬುದ್ಧನ ಮಾತು ಅರ್ಥವಾಗಿತ್ತು. ಅವಳ ಮುಖ ಅವಳ ಮನಸ್ಸಿನ ನೆಮ್ಮದಿಯನ್ನು ಹೊರಸೂಸುತ್ತಿತ್ತು.

ನಮ್ಮ ಬದುಕಿನ ಕಷ್ಟಕಾಲದಲ್ಲಿ ಅಥವಾ ನೆಮ್ಮದಿಯ ಕಾಲದಲ್ಲಿ ಅಥವಾ ನಾವು ಏಕಾಂಗಿಯಾಗಿರುವಾಗ ನಮಗೆ ನೆನಪಾಗುವ ವ್ಯಕ್ತಿ ಯಾರು? ನಾವು ನೋಡಿದ ಅತ್ಯಂತ ಸುಂದರ ಮಹಿಳೆ ಅಥವಾ ಪುರುಷನೇ? ನಮಗೆ ಗೊತ್ತಿರುವ ಬಹು ಶ್ರೀಮಂತ ಅಥವಾ ಜನಪ್ರಿಯ ವ್ಯಕ್ತಿಗಳೇ? ಅಲ್ಲ, ಇವರು ಯಾರೂ ಈ ಸಂದರ್ಭಗಳಲ್ಲಿ ನಮಗೆ ನೆನಪಿಗೆ ಬರುವುದಿಲ್ಲ. ನಮಗೆ ಕಷ್ಟಸುಖದಲ್ಲಿ ನೆನಪಾಗುವವರು ನಮ್ಮ ನೈಜ ಸ್ನೇಹಿತರು ಮತ್ತು ಆಪ್ತರಾದ ಬಂಧುಗಳು. ಅವರಲ್ಲಿರುವ ಒಳ್ಳೆಯ ಗುಣಗಳಿಂದ ಅವರು ನಮಗೆ ಹತ್ತಿರವಾಗಿದ್ದಾರೆಯೇ ವಿನಾ ಸೌಂದರ್ಯದಿಂದಲ್ಲ. ವಯಸ್ಸಾದಂತೆ ದೈಹಿಕ ಚೆಲುವು ಕುಂದುತ್ತದೆ, ಆದರೆ ಅನುಭವಗಳು ಮನಸ್ಸಿನ ಸೌಂದರ್ಯವನ್ನು ಹೆಚ್ಚಿಸುತ್ತವೆ. ತಾಳ್ಮೆ, ಕ್ಷಮೆ, ಸಹಿಷ್ಣುತೆಯಂತಹ ಸ್ವಭಾವಗಳನ್ನು ರೂಢಿಸಿಕೊಳ್ಳುತ್ತ ಹೋದಂತೆ ಅವು ನಮ್ಮ ವ್ಯಕ್ತಿತ್ವವನ್ನು ಆಕರ್ಷಕವಾಗಿಸುತ್ತವೆ. ಇದೇ ವಾಸ್ತವ.

ಪದಬಂಧ 6152


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಟ್ರಾನ್ಸ್‌ಪರೆಂಟ್ ಅನ್ನು ಕನ್ನಡೀಕರಿಸಿ! (5)
3.ಒಂದು ಸಲ ಕುಡಿಯುವಷ್ಟು ದ್ರವ (3)
5.ಆಹಾ! ರುಚಿಕಟ್ಟಾದ ಭೋಜನ (5)
7.ಕೊನೆಗೆ ಹಣ್ಣನ್ನಿಟ್ಟರೆ ಖಂಡಿತಾ ಯಶಸ್ವಿ! (3)
8.ಯಾವುದೇ ಅಪರಾಧವನ್ನು ಮಾಡದಿರುವವನು (5)
10.ಅಪೇಕ್ಷೆ ಇಲ್ಲದವನ ಅಲಕ್ಷ್ಯ! (3)
11.ನವ ಬಾಳಿದು (5)
14.ಮರಿಗೆ ಜರೂರಾಗಿ ನೀಡಿದ ಕೂಲಿ (3)
15.ಪ್ರಸವ ಕೋಣೆಯಿದು (5)

ಮೇಲಿಂದ ಕೆಳಕ್ಕೆ

1.ಏನೂ ತಿಳಿಯದವನು ಮರದ ಹತ್ತಿರ ನಿಂತಿದ್ದಾನಲ್ಲಾ! (3)
2.ಹತ್ತು ವರ್ಷಗಳ ಕಾಲದ ಅವಧಿ (3)
4.ಕುಲದಲ್ಲಿ ಮೋಸಗಾರಿಕೆಯೇ? (3)
6.ವರನಲ್ಲಿ ಪ್ರತಿನಿಧಿ ಕಾಣಿಸಿದನೇ? (3)
7.ಸತ್ತವರನ್ನು ಹೂಳುವ ಸ್ಥಳ (3)
8.ಪರೀಕ್ಷೆಯನ್ನು ಎದುರು ನೋಡುವುದು! (3)
9.ರಾಯರಿಂದ ಬಂದಿರುವ ನಿರೂಪ (3)
10.ಶ್ರೇಷ್ಠವಾದುದನ್ನು ಹೀಗೆನ್ನಿ (3)
12.ಇದೊಂದು ಸಾಂಬಾರ ದ್ರವ್ಯ (3)
13.ಮಾದರಿ ಇಲ್ಲಿದೆ (3)



6151ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 3.ಗದಗ 5.ರತ್ನಾಕರ 7.ಸಾಕ್ಷರ 10.ವರ್ತಮಾನಪತ್ರಿಕೆ 13.ಪ್ರಸಾದ 16.ಸ್ವಯಾರ್ಜಿತ 18.ಗಮಾರ 19.ಟಗರು

ಮೇಲಿಂದ ಕೆಳಕ್ಕೆ:
1.ಆಪದ್ಬಂದು 2.ಬರ 3.ಗರ 4.ಗವಾಕ್ಷ 6.ಕಪ್ಪ 7.ಸಾರ್ವತ್ರಿಕ 8.ರದ 9.ಆರ್ತನಾದ 11.ವಿಪ್ರ 12.ಮಂಗಳೂರು 14.ಸಾರಂಗ 15.ದಿಯಾ 16.ಸ್ವರ 17.ತಟ

ಸುಡೊಕು 6536

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	8			9		5		
6		5					1	
			1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

6535 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಸೆಪ್ಟೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದಶಮಿ ಗಂ. 27-53 **ನಕ್ಷತ್ರ:** ಮೂಲ ಗಂ. 21-51 **ಯೋಗ:** ಪ್ರೀತಿ ಗಂ. 16-39 **ಕರಣ:** ತೈತಿಲ ಗಂ. 15-23 ಸಿಂಹ ಮಾಸದ 16 ನೇ ದಿನ. **ಮಳೆ ನಕ್ಷತ್ರ :** ಹುಬ್ಬಾ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 04-30 , **ಸೂರ್ಯೋದಯ :** 06-23 **ಸೂರ್ಯಾಸ್ತ :** 06-38, **ಮುಸ್ಲಿಂ ದಿನಾಂಕ :** 09 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ :** 6, 11

ಮೇಷ: ಒಡಹುಟ್ಟಿದವರ ಸಹಕಾರದಿಂದ ಮಾನಸಿಕ ನೆಮ್ಮದಿ ಪಡೆಯುವಿರಿ. ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ಸಾಮಾಜಿಕವಾಗಿ ಬದುಕಿನಲ್ಲಿ ಹೊಸ ಹುರುಪನ್ನು ಕಾಣಲಿದ್ದೀರಿ.

ವೃಷಭ: ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ. ಮಗಳಿಗೆ ಆತ್ಮೀಯರೊಬ್ಬರ ಸಹಾಯದಿಂದ ಉದ್ಯೋಗ ದೊರೆಯಲಿದೆ. ಸಾಧು–ಸಂತರ ದರ್ಶನ ಮಾಡುವಿರಿ.

ಮಿಥುನ: ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ದುರ್ಗಾದೇವಿಯ ಆರಾಧನೆಯಿಂದ ಸರಿಯಾಗುವುದು. ಆರೋಗ್ಯದ ವಿಚಾರದಲ್ಲಿ ಉದಾಸೀನತೆ ತೋರುವುದು ಸರಿಯಲ್ಲ.

ಕರ್ಕಾಟಕ: ಭ್ರಾತೃವರ್ಗದವರಲ್ಲಿ ಮೃದುವಾಗಿ ವರ್ತಿಸುವುದು ಒಳ್ಳೆಯದು. ಇದರಿಂದಾಗಿ ಹಲವು ಕಾರ್ಯಗಳು ಕೈಗೂಡಲಿವೆ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅನುಕೂಲ ತೋರಿ ಬರುವುದು.

ಸಿಂಹ: ದೇಹದಲ್ಲಿ ವಾತದ ಬಾಧೆಯು ತುಸು ಉಪಶಮನವಾಗುವುದು. ವೃಥಾ ಅಲೆದಾಟದಿಂದ ಆಯಾಸ. ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರುವುದು. ಮಾನಸಿಕ ಶಾಂತಿ ಹೆಚ್ಚಾಗಲಿದೆ.

ಕನ್ಯಾ: ಸುಖ-ದುಃಖ, ಲಾಭ-ನಷ್ಟಗಳೆರಡೂ ಸಮಾನವಾಗಿದ್ದರೂ ಪ್ರತಿಷ್ಠಿತರ ಸಹಕಾರದಿಂದ ಸುಧಾರಣೆ ಕಂಡುಬರಲಿದೆ. ರೈತರಿಗೆ ಹೆಚ್ಚಿನ ಲಾಭಾಂಶ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ಅಧಿಕ ಬೆಲೆ ಕಂಡು ಬರುತ್ತದೆ.

ತುಲಾ: ಅಭಿವೃದ್ಧಿಯಲ್ಲಿ ಹಲವು ಅಡೆತಡೆಗಳು ಎದುರಾಗಲಿವೆ. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ. ನೂತನ ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು.

ವೃಶ್ಚಿಕ: ದೈಹಿಕ ಸಹಾಯ ನಿರೀಕ್ಷಿಸಿದ ಕಡೆಯಿಂದ ದೊರಕಲಿದೆ. ಅಪರಿಚಿತರ ಹತ್ತಿರ ಗೌಪ್ಯ ವಿಚಾರಗಳನ್ನು ಹಂಚಿಕೊಳ್ಳಬೇಡಿ. ಹೊಸ ಜವಾಬ್ದಾರಿಗಳು ಅರಸಿ ಬರಲಿವೆ. ಹೊಸತನದಲ್ಲಿ ಜಯ ಕಾಣುವಿರಿ.


ಧನು: ಪ್ರೀತಿಸುವವರ ಮಾರ್ಗದರ್ಶನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿಬರಲಿದೆ. ವೃತ್ತಿಯ ಪರವಾಗಿ ಬಹಳ ಮುಖ್ಯ ಕೆಲಸವನ್ನು ಮಾತ್ರ ಈ ದಿನ ಕೈಗೆತ್ತಿಕೊಳ್ಳಿ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ಮಕರ: ಸರ್ಕಾರಿ ನೌಕರರಿಗೆ ನಾನಾ ರೀತಿಯಲ್ಲಿ ಅಡ್ಡಿ-ಆತಂಕಗಳು ಕಾಡಬಹುದು. ವ್ಯಕ್ತಿತ್ವವು ವಿಶೇಷವಾಗಿ ಆಕರ್ಷಿಸುವುದು. ಮಾನಸಿಕ ಒತ್ತಡ ಹೆಚ್ಚಾಗಿರುವುದು, ತಪ್ಪುಗಳು ಆಗದಂತೆ ಎಚ್ಚರವಹಿಸಿ.

ಕುಂಭ: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುವಿರಿ. ಸಂಜೆಯ ವೇಳೆ ಸಣ್ಣಮಟ್ಟಿನ ಪ್ರಯಾಣ ಸಂಭವಿಸಲಿದೆ.

ಮೀನ: ಅಧಿಕವಾದ ಆತ್ಮವಿಶ್ವಾಸದಿಂದ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡಲು ಹೋಗುವುದು ಸರಿಯಲ್ಲ. ಮಧ್ಯವರ್ತಿಗಳ ಸಹಾಯದಿಂದಾಗಿ ವಿವಾಹದ ವಿಷಯದಲ್ಲಿ ಅನುಕೂಲವಾಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು — ಹಿಂದಿನ ಅಂತ್ಯ 79,809; ಇಂದಿನ ಅಂತ್ಯ 80,364; 554

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,426
ಇಂದಿನ ಅಂತ್ಯ:	24,625
ದಿನದ ಗರಿಷ್ಠ:	24,635
	198

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹565

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹356-655
ದ್ವಿತಳಿ (ಬಿ.ವಿ)	₹496-860

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹167

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ದಾವಣಗೆರೆ	₹14800-14800
ತಿಪಟೂರು	₹25000-28200

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1360 (1355)
ಸೋಯಾ (ರಿಫೈನ್ಡ್)	₹1275 (1255)
ಸೂರ್ಯಕಾಂತಿ (ರಿಫೈನ್ಡ್)	₹1410 (1405)
ಪಾಮೋಲಿನ್	₹1270 (1260)

ನಿತ್ಯಬಳಕೆಯ 175 ಉತ್ಪನ್ನಗಳ ತೆರಿಗೆ ಇಳಿಕೆ?

ಶಾಂಪೂ, ಎಲೆಕ್ಟ್ರಾನಿಕ್ಸ್ ಉಪಕರಣಗಳ ಮೇಲಿನ ಜಿಎಸ್‌ಟಿ ತಗ್ಗಿಸಲು ಚಿಂತನೆ



ನವದೆಹಲಿ (ರಾಯಿಟರ್ಸ್/ಪಿಟಿಐ): ದಿನನಿತ್ಯ ಬಳಕೆ ಮಾಡುವ ಶಾಂಪೂವಿನಿಂದ ಆರಂಭಿಸಿ, ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ ಉಪಕರಣಗಳು, ಹೈಬ್ರಿಡ್ ಕಾರುಗಳು ಸೇರಿ ಸರಿಸುಮಾರು 175 ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇಕಡ 10ರಷ್ಟು ಕಡಿಮೆ ಮಾಡುವ ಇರಾದೆಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳನ್ನು ತರುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 15ರಂದು ಹೇಳಿದ್ದಾರೆ.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ಪ್ರಮಾಣ ಕಡಿಮೆ ಮಾಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಸಿದ್ಧಪಡಿಸಿದೆ. ಟಾಲ್ಕಂ ಪೌಡರ್, ಟೂತ್‌ಪೇಸ್ಟ್, ಶಾಂಪೂಗಳ ಮೇಲಿನ ತೆರಿಗೆ ಪ್ರಮಾಣ ಶೇ 18ರಷ್ಟು ಇರುವುದನ್ನು ಶೇ 5ಕ್ಕೆ ಇಳಿಸುವ ಉಲ್ಲೇಖವು ಈ ಪ್ರಸ್ತಾವದಲ್ಲಿದೆ ಎಂದು ಗೊತ್ತಾಗಿದೆ. ಇದು ಕಾರ್ಯರೂಪಕ್ಕೆ ಬಂದಲ್ಲಿ ಹಿಂದುಸ್ತಾನ್ ಯೂನಿಲಿವರ್ ಮತ್ತು ಗೋದ್ರೆಜ್ ಇಂಡಸ್ಟ್ರೀಸ್‌ನಂತಹ ಕಂಪನಿಗಳ ಮಾರಾಟ ಪ್ರಮಾಣದಲ್ಲಿ ಏರಿಕೆ ಆಗುವ ನಿರೀಕ್ಷೆ ಇದೆ.

ಹವಾನಿಯಂತ್ರಕಗಳು ಹಾಗೂ ಟಿ.ವಿ.ಗಳ ಮೇಲಿನ ತೆರಿಗೆ ಪ್ರಮಾಣ ಈಗಿನ ಶೇ 28ರ ಮಟ್ಟದಿಂದ ಶೇ 18ಕ್ಕೆ ಇಳಿಕೆ ಆಗುವ ಸಾಧ್ಯತೆ ಇದೆ. ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯದಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದ ಜಿಎಸ್‌ಟಿ ಮಂಡಳಿಯು ಬುಧವಾರ, ಗುರುವಾರ ಸಭೆ ಸೇರಲಿದೆ.

ಅಮೆರಿಕಕ್ಕೆ ಭಾರತದಿಂದ ಆಗುವ ರಫ್ತುಗಳಲ್ಲಿ ಉಂಟಾಗಬಹುದಾದ ಇಳಿಕೆಯ ಪರಿಣಾಮವನ್ನು ನಿಭಾಯಿಸುವ ಉದ್ದೇಶ ಕೂಡ ಜಿಎಸ್‌ಟಿ ತೆರಿಗೆ ಹಂತಗಳ ಇಳಿಕೆ ಪ್ರಸ್ತಾವದ ಹಿಂದಿದೆ ಎಂದು ಮೂಲಗಳು ಹೇಳಿವೆ. ರಫ್ತಾಗುವ ಉತ್ಪನ್ನಗಳಾದ ರಸಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು ಮತ್ತು ಟ್ರ್ಯಾಕ್ಟರ್‌ಗಳು, ಅವುಗಳ ಬಿಡಿಭಾಗಗಳ ಮೇಲಿನ ತೆರಿಗೆ ಪ್ರಮಾಣವನ್ನು ಈಗಿನ ಶೇ 12 ಅಥವಾ ಶೇ 18ರ ಮಟ್ಟದಿಂದ ಶೇ 5ಕ್ಕೆ ಇಳಿಕೆ ಮಾಡುವ ಚಿಂತನೆಯು ಕೇಂದ್ರ ಸರ್ಕಾರಕ್ಕೆ ಇದೆ.

ತೆರಿಗೆ ಇಳಿಕೆ ಪ್ರಸ್ತಾವ ಹೀಗಿದೆ...

- ಪೆಟ್ರೋಲ್ ಹೈಬ್ರಿಡ್ ಕಾರುಗಳ ಮೇಲಿನ ತೆರಿಗೆ ಶೇ 18ಕ್ಕೆ ಇಳಿಸುವ ಚಿಂತನೆ
- 350 ಸಿ.ಸಿ.ಗಿಂತ ಕಡಿಮೆ ಎಂಜಿನ್ ಸಾಮರ್ಥ್ಯದ ದ್ವಿಚಕ್ರ ವಾಹನಗಳ ಮೇಲಿನ ತೆರಿಗೆ ತಗ್ಗಿಸುವ ಪ್ರಸ್ತಾವ
- 4 ಮೀಟರ್‌ಗಿಂತ ಹೆಚ್ಚು ಉದ್ದದ ಕಾರುಗಳ ಮೇಲಿನ ತೆರಿಗೆಯನ್ನು ಶೇ 40ಕ್ಕೆ ಹೆಚ್ಚಿಸಿ, ಅವುಗಳ ಮೇಲಿನ ಇತರ ಸೆಸ್‌ಗಳನ್ನು ಕಡಿಮೆ ಮಾಡಿ, ಒಟ್ಟು ತೆರಿಗೆ ಪ್ರಮಾಣವನ್ನು ಶೇ 50ರ ಮಟ್ಟದಲ್ಲಿ ಉಳಿಸಿಕೊಳ್ಳುವ ಆಲೋಚನೆ ಇದೆ
- ಕಲ್ಲಿದ್ದಲು, ಕ್ಯಾಸಿನೊ, ಕುದುರೆ ರೇಸ್ ಮೇಲಿನ ತೆರಿಗೆ ಪ್ರಮಾಣ ಹೆಚ್ಚಳ ಸಾಧ್ಯತೆ

ವಾಹನ ರವಾನೆ ಇಳಿಕೆ

ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿಗಳಾದ ಮಾರುತಿ ಸುಜುಕಿ, ಹುಂಡೈ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಟಾಟಾ ಮೋಟರ್ಸ್ ಡೀಲರ್‌ಗಳಿಗೆ ರವಾನಿಸಿದ ವಾಹನಗಳ ಸಂಖ್ಯೆಯು ಆಗಸ್ಟ್‌ನಲ್ಲಿ ಇಳಿಕೆಯಾಗಿದೆ.

ವಾಹನಗಳಿಗೆ ಜಿಎಸ್‌ಟಿ ವ್ಯವಸ್ಥೆಯ ಅಡಿ ಪ್ರಸ್ತುತ ವಿಧಿಸಲಾಗುತ್ತಿರುವ ಶೇ 28ರ ತೆರಿಗೆ ದರ ತಗ್ಗಬಹುದು ಎಂಬ ನಿರೀಕ್ಷೆಯಿಂದ ಬಹುತೇಕ ಖರೀದಿದಾರರು ವಾಹನಗಳ ಖರೀದಿಯನ್ನು ಮುಂದೂಡಿರುವುದು ವಾಹನಗಳ ರವಾನೆ ಕಡಿಮೆಯಾಗಲು ಕಾರಣ ಎನ್ನಲಾಗಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಮಾರುತಿ ಸುಜುಕಿ ಕಂಪನಿಯು ಡೀಲರ್‌ಗಳಿಗೆ 1,43,075 ಪ್ರಯಾಣಿಕ ವಾಹನಗಳನ್ನು ಕಳುಹಿಸಿತ್ತು. ಈ ಬಾರಿ ಅದು 1,31,278 ವಾಹನಗಳನ್ನು ಕಳುಹಿಸಿದ್ದು, ಶೇ 8ರಷ್ಟು ಇಳಿಕೆ ಆಗಿದೆ.


ಹುಂಡೈ ಮೋಟರ್ ಇಂಡಿಯಾದ ರವಾನೆಯಲ್ಲಿ ಶೇ 11ರಷ್ಟು ಇಳಿಕೆಯಾಗಿದ್ದು, 44,001 ವಾಹನ ರವಾನೆ ಆಗಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಟಾಟಾ ಮೋಟರ್ಸ್ ಕಡೆಯಿಂದ ಆಗಿರುವ ರವಾನೆಯು ಕ್ರಮವಾಗಿ ಶೇ 9 ಮತ್ತು ಶೇ 7ರಷ್ಟು ಕಡಿಮೆಯಾಗಿದೆ.

ಈಗ ನಾಲ್ಕು ಹಂತಗಳ (ಶೇ 5, ಶೇ 12, ಶೇ 18 ಮತ್ತು ಶೇ 28) ಜಿಎಸ್‌ಟಿ ಇದೆ. ವಾಹನಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ನಾಲ್ಕು ಹಂತಗಳ ತೆರಿಗೆ ವ್ಯವಸ್ಥೆಯನ್ನು ಎರಡು ಹಂತಗಳಿಗೆ ಇಳಿಸಲಾಗುವುದು ಎಂದು ಹೇಳಿದ್ದಾರೆ. ಹೀಗಾಗಿ ವಾಹನ ಖರೀದಿಸಲು ಖರೀದಿದಾರರು ತಡ ಮಾಡುತ್ತಿದ್ದಾರೆ. ಇದೇ ರವಾನೆ ಪ್ರಮಾಣ ಕಡಿಮೆ ಆಗಲು ಕಾರಣ ಎನ್ನಲಾಗಿದೆ.

ಜಿಎಸ್‌ಟಿ ಸಂಗ್ರಹ ಶೇ 6.5ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಆಗಸ್ಟ್ ತಿಂಗಳಿನಲ್ಲಿ ₹1.86 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಜುಲೈನಲ್ಲಿ ಸಂಗ್ರಹ ವಾಗಿದ್ದ ₹1.96 ಲಕ್ಷ ಕೋಟಿಗೆ ಹೋಲಿಸಿದರೆ ವರಮಾನ ಕಡಿಮೆಯಾಗಿದೆ. ಆದರೆ 2024ರ ಆಗಸ್ಟ್‌ನಲ್ಲಿ ₹1.75 ಲಕ್ಷ ಕೋಟಿ ಸಂಗ್ರಹವಾಗಿದ್ದು, ಇದಕ್ಕೆ ಹೋಲಿಸಿದರೆ ವರಮಾನ ಶೇ 6ರಷ್ಟು ಏರಿಕೆಯಾಗಿದೆ.



ದೇಶಿ ವಹಿವಾಟುಗಳ ಮೂಲಕ ಸಂಗ್ರಹವಾದ ಜಿಎಸ್‌ಟಿ ವರಮಾನ ಶೇ 9.6ರಷ್ಟು ಏರಿಕೆಯಾಗಿದ್ದು, ₹1.37 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ವಹಿವಾಟು ಮೂಲಕ ₹49,354 ಕೋಟಿ ಸಂಗ್ರಹವಾಗಿದ್ದು, ಶೇ 1.2ರಷ್ಟು ಕಡಿಮೆಯಾಗಿದೆ. ಜಿಎಸ್‌ಟಿ ಮರುಪಾವತಿ ಶೇ 20ರಷ್ಟು ಇಳಿಕೆಯಾಗಿದ್ದು, ₹19,359 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ವರಮಾನ ₹1.67 ಲಕ್ಷ ಕೋಟಿಯಾಗಿದ್ದು, ಶೇ 10.7ರಷ್ಟು ಹೆಚ್ಚಳವಾಗಿದೆ.

ದೇಶದಲ್ಲಿ ಜನರು ಸರಕುಗಳನ್ನು ಖರೀದಿಸುವ ಪ್ರಮಾಣ ಹೆಚ್ಚಳವಾಗಿದೆ. ಮುಂಬರುವ ಹಬ್ಬದ ಋತುವಿನಲ್ಲಿ ಜಿಎಸ್‌ಟಿ ಸಂಗ್ರಹವು ಮತ್ತಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

> **ಆಮದು ವಹಿವಾಟು ಮೂಲಕ ಸಂಗ್ರಹವಾದ ವರಮಾನದ ಪ್ರಮಾಣವು ಇಳಿಕೆಯಾಗಿದೆ. ಜಾಗತಿಕ ಸುಂಕವು ದೇಶದ ರಫ್ತು ವಲಯದ ಮೇಲೆ ಪ್ರಭಾವ ಬೀರಿರುವುದರ ಸ್ಪಷ್ಟ ಸೂಚನೆ ಇದಾಗಿದೆ**
>
> **ಸೌರಭ್ ಅಗರವಾಲ್,** ಇ.ವೈ. ತೆರಿಗೆ ಪಾಲುದಾರ

ಸುದ್ದಿ 2 ನಿಮಿಷ

10 ಗ್ರಾಂ ಚಿನ್ನದ ದರ ₹1.05 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟ ಮುಟ್ಟಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1 ಸಾವಿರ ಹೆಚ್ಚಳವಾಗಿ, ₹1,05,670ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆ ಏರಿಕೆಯಾಗಿ, ₹1,04,800 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಜಿಗಿತವಾಗಿ, ₹1.26 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಈ ತಿಂಗಳು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿಸಿದೆ. ಅಲ್ಲದೆ, ಸಾಗರೋತ್ತರ ಮಾರುಕಟ್ಟೆಯಲ್ಲಿ ಹಳದಿ ಲೋಹಕ್ಕೆ ಬೇಡಿಕೆ ಹೆಚ್ಚಳವಾಗಿದೆ. ಹೀಗಾಗಿ, ಚಿನ್ನದ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಅಮೆರಿಕದ ಸುಂಕ ನೀತಿಯ ಅನಿಶ್ಚಿತತೆ ಸಹ ದರ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.



ಹಸಿರು ಇಂಧನ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತಯಾರಿಸುವ ಕೈಗಾರಿಕೆಗಳಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದು ಬೆಳ್ಳಿ ದರ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಷೇರುಪೇಟೆಗೆ ಜಿಡಿಪಿ ಬಲ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ, ವಾಹನ ಕಂಪನಿಗಳು ಮತ್ತು ಬ್ಯಾಂಕಿಂಗ್ ಷೇರುಗಳ ಖರೀದಿ ಹೆಚ್ಚಳದಿಂದ ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 554 ಅಂಶ ಹೆಚ್ಚಳವಾಗಿ, 80,364ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ನಿಫ್ಟಿ) 198 ಅಂಶ ಏರಿಕೆಯಾಗಿ, 24,625ಕ್ಕೆ ಕೊನೆಗೊಂಡಿದೆ.

'ಜಾಗತಿಕ ಅನಿಶ್ಚಿತತೆಯ ನಡುವೆಯೂ ದೇಶದ ಜಿಡಿಪಿ ಬೆಳವಣಿಗೆಯು ಜೂನ್ ತ್ರೈಮಾಸಿಕದಲ್ಲಿ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿದೆ. ಇದು ಹೂಡಿಕೆದಾರರಲ್ಲಿ ವಿಶ್ವಾಸವನ್ನು ಹೆಚ್ಚಿಸಿದೆ. ಅಲ್ಲದೆ, ಬುಧವಾರದಿಂದ ನಡೆಯಲಿರುವ ಜಿಎಸ್‌ಟಿ ಮಂಡಳಿಯ ಸಭೆಯ ಬಗ್ಗೆ ಹೂಡಿಕೆದಾರರಲ್ಲಿ ಆಶಾಭಾವನೆ ಇದೆ. ಹೀಗಾಗಿ, ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.92ರಷ್ಟು ಏರಿಕೆ ಆಗಿದೆ. ಪ್ರತೀ ಬ್ಯಾರೆಲ್ ದರವು 68.10 ಡಾಲರ್ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹8,312 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹11,487 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

01-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1370 (1365)
ಒಂದು ವಾರದ ಡೆಲಿವರಿ	1365 (1360)
ಪಾಮ್ ವಾರದ ಡೆಲಿವರಿ	1268 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,04,500 (1,03,200)
ಬೆಳ್ಳಿ ಕೆ.ಜಿಗೆ	1,23,000 (1,20,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಾಣಿಜ್ಯ ಸಿಲಿಂಡರ್ ₹51 ಇಳಿಕೆ



ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳು ಕಡಿತಗೊಳಿಸಿವೆ. ಹೊಸ ದರವು ಸೋಮವಾರದಿಂದ ಜಾರಿಗೆ ಬಂದಿದೆ.

19 ಕೆ.ಜಿ ತೂಕದ ವಾಣಿಜ್ಯ ಸಿಲಿಂಡರ್ ದರವು ₹51.50 ಕಡಿಮೆಯಾಗಿದ್ದು, ದೆಹಲಿಯಲ್ಲಿ ₹1,580 ಆಗಿದೆ. ಏಪ್ರಿಲ್‌ನಿಂದ ಇದುವರೆಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ ₹223ರಷ್ಟು ಇಳಿಕೆಯಾಗಿದೆ.

ಎಟಿಎಫ್ ದರ ಇಳಿಕೆ: ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರ್‌ಗೆ (1 ಸಾವಿರ ಲೀಟರ್) ಶೇ 1.4ರಷ್ಟು ಇಳಿಕೆಯಾಗಿದೆ. ದೆಹಲಿಯಲ್ಲಿ ಬೆಲೆ ₹1,308ರಷ್ಟು ಕಡಿಮೆಯಾಗಿದ್ದು, ₹90,713 ಆಗಿದೆ.

14.2 ಕೆ.ಜಿ ತೂಕದ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಬದಲಾವಣೆ ಇಲ್ಲ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	38999-43098	ಬೆಟ್ಟೆ	56099-65600	ಬೆಟ್ಟೆ	29211-45989
ಚಿಪ್ಪು	25089-32269	ಗೊರಬಲು	19500-34680	ಬಿಳಿಗೋಟು	21599-34869
ಕೋಕ	6589-25059	ರಾಶಿ	49319-60311	ಚಾಲಿ	38561-43699
ಫ್ಯಾಕ್ಟರಿ	3019-31000	ಸರಕು	60069-97396	ಕೆಂಪುಗೋಟು	18099-26599
ಹೊಸಚಾಲಿ	37129-43299			ರಾಶಿ	45099-50399

ಸಾಗರ		ಸಿದ್ದಾಪುರ		ಯಲ್ಲಾಪುರ	
ಬಿಳಿಗೋಟು	17269-29699	ಬಿಳಿಗೋಟು	24299-31189	ಬಿಳಿಗೋಟು	20519-33650
ಚಾಲಿ	20369-39119	ಚಾಲಿ	35899-42639	ಚಾಲಿ	36569-43309
ಕೋಕ	9099-26699	ಕೋಕ	20319-26669	ಕೋಕ	10009-18009
ಕೆಂಪುಗೋಟು	24989-32299	ಕೆಂಪುಗೋಟು	18319-18319	ಕೆಂಪುಗೋಟು	21676-26713
ರಾಶಿ	28299-60029	ರಾಶಿ	44099-50399	ರಾಶಿ	40199-55199
ಸಿಪ್ಪೆಗೋಟು	8399-19635	ತಟ್ಟಿಬೆಟ್ಟೆ	27419-36309	ತಟ್ಟಿಬೆಟ್ಟೆ	29009-38821

ತಯಾರಿಕಾ ವಲಯ ಚುರುಕು

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಕಾರ್ಯಾಚರಣೆ ಪರಿಸ್ಥಿತಿಯು ಆಗಸ್ಟ್ ತಿಂಗಳಲ್ಲಿ ಕಳೆದ 17 ವರ್ಷಗಳ ಅತ್ಯುತ್ತಮ ಬೆಳವಣಿಗೆಯನ್ನು ಕಂಡಿದೆ. ಉತ್ಪಾದನೆಯ ದಕ್ಷತೆಯು ಹೆಚ್ಚಳ ಕಂಡಿರುವುದು, ಬೇಡಿಕೆಯು ಆರೋಗ್ಯಕರವಾದ ಮಟ್ಟದಲ್ಲಿ ಇರುವುದು ಇದಕ್ಕೆ ಕಾರಣ.

ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನ್ಯುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಸೂಚ್ಯಂಕವು ಜುಲೈನಲ್ಲಿ 59.1ರಷ್ಟು ಇದ್ದಿದ್ದು ಆಗಸ್ಟ್‌ನಲ್ಲಿ 59.3ಕ್ಕೆ ಹೆಚ್ಚಳ ಕಂಡಿದೆ.

ಪಿಎಂಐ ಮಾನದಂಡಗಳ ಪ್ರಕಾರ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

ಚಲಾವಣೆಯಲ್ಲಿವೆ ₹2,000 ಮುಖಬೆಲೆಯ ₹5,956 ಕೋಟಿ ಮೌಲ್ಯದ ನೋಟುಗಳು

ಮುಂಬೈ (ಪಿಟಿಐ): ₹2,000 ಮುಖಬೆಲೆಯ ಒಟ್ಟು ₹5,956 ಕೋಟಿ ಮೌಲ್ಯದ ನೋಟುಗಳು ಈಗಲೂ ಜನರ ಕೈಯಲ್ಲಿ ಇವೆ ಎಂದು ಆರ್‌ಬಿಐ ಸೋಮವಾರ ಹೇಳಿದೆ.



ಆರ್‌ಬಿಐ ಈ ಮುಖಬೆಲೆಯ ನೋಟುಗಳನ್ನು 2023ರ ಮೇ 19ರಿಂದ ಚಲಾವಣೆಯಿಂದ ಹಿಂಪಡೆದಿದೆ. ಆದರೆ ಈ ನೋಟುಗಳು ಅಮಾನ್ಯ ಅಲ್ಲ.

2023ರ ಮೇ 19ರಂದು ಚಲಾವಣೆಯಲ್ಲಿ ಇದ್ದ ಈ ಮುಖಬೆಲೆಯ ನೋಟುಗಳ ಒಟ್ಟು ಮೊತ್ತವು ₹3.56 ಲಕ್ಷ ಕೋಟಿ ಆಗಿತ್ತು ಎಂದು ತಿಳಿಸಿದೆ. ಅಂದರೆ, ಈವರೆಗೆ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇ 98.33ರಷ್ಟು ನೋಟುಗಳು ವಾಪಸ್ ಬಂದಿವೆ.

ಈ ಮುಖಬೆಲೆಯ ನೋಟುಗಳನ್ನು ಬೆಂಗಳೂರು ಸೇರಿದಂತೆ ಆರ್‌ಬಿಐನ 19 ಕಚೇರಿಗಳ ಮೂಲಕ ಬೇರೆ ನೋಟುಗಳಿಗೆ ವಿನಿಮಯ ಮಾಡಿಕೊಳ್ಳಲು ಅವಕಾಶ ಇದೆ. ಸಾರ್ವಜನಿಕರು ಅಂಚೆ ಮೂಲಕ ಈ ನೋಟುಗಳನ್ನು ಆರ್‌ಬಿಐ ಕಚೇರಿಗೆ ಕಳುಹಿಸಿ, ಅದನ್ನು ತಮ್ಮ ಖಾತೆಗೆ ಜಮಾ ಮಾಡುವಂತೆ ಹೇಳಬಹುದು.

ಸುಂಕ ಕಡಿತಕ್ಕೆ ಭಾರತ ಪ್ರಸ್ತಾಪ: ಟ್ರಂಪ್

'ಸಮಯ ಮೀರಿದೆ, ಹಿಂದೆಯೇ ಯೋಚಿಸಬೇಕಿತ್ತು'

ವಾಷಿಂಗ್ಟನ್ (ಪಿಟಿಐ): 'ಅಮೆರಿಕದ ಸರಕುಗಳ ಮೇಲಿನ ಸುಂಕವನ್ನು ಸಂಪೂರ್ಣವಾಗಿ ತೆಗೆದು ಹಾಕುವುದಾಗಿ ಭಾರತ ಈಗ ಹೇಳುತ್ತಿದೆ. ಆದರೆ, ಈಗಾಗಲೇ ಸಮಯ ಮೀರಿಹೋಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ 'ಟ್ರುತ್ ಸೋಷಿಯಲ್'ನಲ್ಲಿ ಟ್ರಂಪ್ ಈ ಕುರಿತು ಪೋಸ್ಟ್ ಮಾಡಿದ್ದಾರೆ. 'ಭಾರತವು ಅಮೆರಿಕಕ್ಕೆ ಅಪಾರ ಪ್ರಮಾಣದ ಸರಕುಗಳನ್ನು ರಫ್ತು ಮಾಡುತ್ತದೆ. ಆದರೆ, ನಾವು ಅವರಿಗೆ ಅತಿ ಕಡಿಮೆ ಪ್ರಮಾಣದ ಸರಕುಗಳನ್ನು ಮಾರಾಟ ಮಾಡುತ್ತಿದ್ದೇವೆ. ಭಾರತ ನಮ್ಮ ವಸ್ತುಗಳ ಮೇಲೆ ವಿಧಿಸಿರುವ ಹೆಚ್ಚಿನ ಪ್ರಮಾಣದ ಸುಂಕವೇ ಇದಕ್ಕೆ ಕಾರಣವಾಗಿದೆ. ಹಲವು ದಶಕಗಳಿಂದಲೂ ಇದು ಹೀಗೆಯೇ ಇದೆ' ಎಂದು ಟ್ರಂಪ್ ಬರೆದುಕೊಂಡಿದ್ದಾರೆ.

'ಭಾರತವು ಬಹುತೇಕ ತೈಲ, ಮಿಲಿಟರಿ ಉತ್ಪನ್ನಗಳನ್ನು ರಷ್ಯಾದಿಂದಲೇ ಖರೀದಿಸುತ್ತಿದ್ದು, ಅಮೆರಿಕದಿಂದ ಅತ್ಯಲ್ಪ ಖರೀದಿ ಮಾಡುತ್ತಿದೆ. ಈ ವಿಚಾರವು ಕೆಲವೇ ಮಂದಿಗಷ್ಟೇ ತಿಳಿದಿದೆ. ಈಗ ಸಂಪೂರ್ಣ ಸುಂಕವನ್ನು ಕಡಿತಗೊಳಿಸುವ ವಿಚಾರವನ್ನು ಭಾರತ ಪ್ರಸ್ತಾಪಿಸುತ್ತಿದೆ. ಆದರೆ, ಸಮಯ ಮೀರಿ ಹೋಗಿದೆ. ಭಾರತ ಈ ವಿಚಾರವನ್ನು ಹಲವು ವರ್ಷಗಳ ಹಿಂದೆಯೇ ಯೋಚಿಸಬೇಕಿತ್ತು' ಎಂದೂ ಟ್ರಂಪ್ ಹೇಳಿದ್ದಾರೆ.

ಶ್ರೀಮಂತರ ಪಾಲಾಗುತ್ತಿರುವ ಲಾಭ: ನವರೊ

ನ್ಯೂಯಾರ್ಕ್ (ಪಿಟಿಐ): ಭಾರತದ ಜನರಿಗೆ ಸಿಗಬೇಕಾದ ಹಣವು ಕೆಲವೇ ಕೆಲವು ಶ್ರೀಮಂತರ (ಬ್ರಾಹ್ಮಣರು) ಪಾಲಾಗುತ್ತಿದೆ. ಇದನ್ನು ನಿಲ್ಲಿಸಬೇಕು' ಎಂದು ಶ್ವೇತ ಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಹೇಳಿದ್ದಾರೆ.

ಅಮೆರಿಕವು ಭಾರತದ ಮೇಲೆ ಶೇ 50ರಷ್ಟು ಸುಂಕ ಹೇರಿದರೂ, ಭಾರತವು ರಷ್ಯಾದಿಂದ ತೈಲ ಖರೀದಿ ಮುಂದುವರಿಸಿರುವ ಬೆನ್ನಲ್ಲೇ ನವರೊ ಹೇಳಿಕೆ ಹೊರಬಿದ್ದಿದೆ.

'ಫಾಕ್ಸ್ ನ್ಯೂಸ್'ಗೆ ನೀಡಿರುವ ಸಂದರ್ಶನದಲ್ಲಿ ನವರೊ, 'ನೋಡಿ... ಮೋದಿ ದೊಡ್ಡ ನಾಯಕ. ಆದರೆ, ಪ್ರಪಂಚದಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ದೇಶವೊಂದರ ಪ್ರಧಾನಿಯಾದ ಅವರು, ಹೇಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಸಹಕರಿಸುತ್ತಾರೆ ಎನ್ನುವುದೇ ನನಗೆ ಅರ್ಥ ಆಗುತ್ತಿಲ್ಲ' ಎಂದು ಹೇಳಿದ್ದಾರೆ.

ಮೊಬೈಲ್ ನಿಶ್ಶಬ್ದ ವಲಸಿಗರ ಆತಂಕ

ನವದೆಹಲಿ (ಪಿಟಿಐ): ಭೂಕಂಪದ ಸುದ್ದಿ ತಿಳಿಯುತ್ತಿದ್ದಂತೆ ನವದೆಹಲಿಯಲ್ಲಿ ವಾಸವಾಗಿರುವ ಅಫ್ಗಾನಿಸ್ತಾನದ ವಲಸಿಗರು ಭಾನುವಾರ ಇಡೀ ರಾತ್ರಿ ನಿದ್ರೆಯಿಲ್ಲದೆ ಕಳೆದರು. ತಮ್ಮ ಪುಟ್ಟ ಅಂಗಡಿಗಳು, ಬಾಡಿಗೆ ಕೋಣೆಗಳಲ್ಲಿ ಮೊಬೈಲ್ ಹಿಡಿದುಕೊಂಡು ಕುಳಿತಿದ್ದ ಅವರು ಅಫ್ಗಾನಿಸ್ತಾನದಲ್ಲಿರುವ ತಮ್ಮ ಕುಟುಂಬಸ್ಥರು, ಬಂಧುಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತಲೇ ಇದ್ದರು. ಭೂಕಂಪದ ಬೆನ್ನಲ್ಲೇ ದೂರವಾಣಿ ಸಂಪರ್ಕ ಸ್ಥಗಿತಗೊಂಡಿದ್ದು ವಲಸಿಗರ ಆತಂಕ ಹೆಚ್ಚಿಸಿತ್ತು.

'ನನ್ನ ಕುಟುಂಬವು ಭೂಕಂಪ ಸಂಭವಿಸಿರುವ ಜಲಾಲಾಬಾದ್ ನಗರದಲ್ಲಿ ನೆಲಸಿದೆ. ಅಲ್ಲಿ ಅವರಿಗೆ ಏನಾಗಿದೆಯೋ ಗೊತ್ತಿಲ್ಲ. ಮೊಬೈಲ್ ಸಂಪರ್ಕವೂ ಸಾಧ್ಯವಾಗುತ್ತಿಲ್ಲ' ಎಂದು ದೆಹಲಿಯಲ್ಲಿ ಒಣ ಹಣ್ಣುಗಳ ವ್ಯಾಪಾರಿಯಾಗಿರುವ ಅಫ್ಗಾನಿಸ್ತಾನದ 20 ವರ್ಷದ ಯುವಕ ಅಸೀಮ್ ಆತಂಕದಿಂದ ನುಡಿದರು.

'ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಮೌಲವಿ ಅಮೀರ್ ಖಾನ್ ಮುತ್ತಾಕಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಭಾರತವು ಈಗಾಗಲೇ 1 ಸಾವಿರ ಟೆಂಟ್‌ಗಳನ್ನು ಪೂರೈಸಿದೆ. ಕಾಬೂಲ್‌ನಿಂದ ಕುನಾರ್‌ಗೆ 15 ಟನ್‌ಗಳಷ್ಟು ಆಹಾರ ಸಾಮಗ್ರಿ ಶೀಘ್ರದಲ್ಲೇ ರವಾನೆ ಆಗಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಎಕ್ಸ್ ನಲ್ಲಿ ತಿಳಿಸಿದ್ದಾರೆ.

ಪಹಲ್ಗಾಮ್ ದಾಳಿಗೆ ಖಂಡನೆ

ಒಂದನೇ ಪುಟದಿಂದ...

'ಉಕ್ರೇನ್‌ನಲ್ಲಿ ಶಾಂತಿ ಸ್ಥಾಪಿಸುವುದಕ್ಕಾಗಿ ಇತ್ತೀಚೆಗೆ ನಡೆದ ಎಲ್ಲ ಪ್ರಯತ್ನಗಳನ್ನು ನಾವು ಸ್ವಾಗತಿ ಸುತ್ತೇವೆ. ಎರಡೂ ದೇಶಗಳು ಈ ದಿಸೆಯಲ್ಲಿ ರಚನಾತ್ಮಕ ಹೆಜ್ಜೆಯಿಡಲಿವೆ ಎಂದು ನಿರೀಕ್ಷಿಸುತ್ತಿದ್ದೇವೆ' ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭೇಟಿಗೆ ಕಾತರ: 'ಪುಟಿನ್ ಅವರು ಭಾರತಕ್ಕೆ ಭೇಟಿ ನೀಡುತ್ತಿರುವುದನ್ನು ಎದುರು ನೋಡುತ್ತಿದ್ದೇವೆ' ಎಂದು ಮೋದಿ ಹೇಳಿದರು.

ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ ಭಾರತ ಹಾಗೂ ರಷ್ಯಾ ನಡುವಿನ 23ನೇ ಶೃಂಗಸಭೆಗೆ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ.

'ಅತ್ಯಂತ ಸಂಕಷ್ಟದ ಕಾಲದಲ್ಲಿ ಭಾರತ ಹಾಗೂ ರಷ್ಯಾ ಸದಾ ಒಟ್ಟಿಗೆ ಸಾಗಿವೆ. ಜಾಗತಿಕ ಶಾಂತಿ, ಸ್ಥಿರತೆ ಹಾಗೂ ಸಮೃದ್ಧಿಗೆ ಉಭಯ ರಾಷ್ಟ್ರಗಳ ನಿಕಟ ಬಾಂಧವ್ಯ ಅಗತ್ಯವಾಗಿದೆ' ಎಂದು ಮೋದಿ ಪ್ರತಿಪಾದಿಸಿದ್ದಾರೆ.

ಪುಟಿನ್ ಕಾರಿನಲ್ಲಿ ಪ್ರಯಾಣಿಸಿದ ಮೋದಿ

ಪ್ರಧಾನಿ ಮೋದಿ ಇಲ್ಲಿ ನಡೆದ ಎಸ್‌ಸಿಒ ಶೃಂಗಸಭೆ ಬಳಿಕ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಸೇರಿದ 'ಔರಸ್' ಕಾರಿನಲ್ಲಿ ಜೊತೆಯಾಗಿ ಪ್ರಯಾಣಿಸಿದರು.


'ಉಭಯ ನಾಯಕರ ದ್ವಿಪಕ್ಷೀಯ ಮಾತುಕತೆ ನಡೆಯಬೇಕಿದ್ದ ಸ್ಥಳಕ್ಕೆ ಪ್ರಧಾನಿ ಮೋದಿ ಅವರನ್ನು ಕರೆದೊಯ್ಯುವುದಕ್ಕಾಗಿ ಪುಟಿನ್ 10 ನಿಮಿಷ ಕಾದರು. ನಂತರ ಇಬ್ಬರೂ ಒಂದೇ ಕಾರಿನಲ್ಲಿ ಪ್ರಯಾಣಿಸಿ, ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದರು. ಹೋಟೆಲ್‌ಗೆ ತಲುಪಿದ ಬಳಿಕವೂ, ಕಾರಿನಲ್ಲೇ ಕುಳಿತು ಸುಮಾರು 50 ನಿಮಿಷ ಮಾತುಕತೆ ನಡೆಸಿದರು' ಎಂದು ರಷ್ಯಾದ ರಾಷ್ಟ್ರೀಯ ರೇಡಿಯೊ ಸ್ಟೇಷನ್ 'ವೆಸ್ತಿ–ಎಫ್‌ಎಂ' ವರದಿ ಮಾಡಿದೆ.

'ಉಭಯ ನಾಯಕರು ಕಾರಿನಲ್ಲೇ ಕುಳಿತು ಸುಮಾರು ಒಂದು ತಾಸು ಖಾಸಗಿ ಸಂಭಾಷಣೆ ನಡೆಸಿದರು' ಎಂದು ಕ್ರೆಮ್ಲಿನ್‌ನ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿಕೆ ನೀಡಿದ್ದಾರೆ.

ಕಾರಿನಲ್ಲಿ ಪುಟಿನ್ ಜೊತೆಗಿರುವ ಚಿತ್ರವನ್ನು ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ಎಸ್‌ಸಿಒ ಶೃಂಗಸಭೆಯ ನಂತರ ಪುಟಿನ್ ಹಾಗೂ ನಾನು ಒಟ್ಟಾಗಿ ಪ್ರಯಾಣಿಸಿದೆವು. ಅವರೊಂದಿಗಿನ ದ್ವಿಪಕ್ಷೀಯ ಸಭೆಯು ಯಾವಾಗಲೂ ಒಳನೋಟದ್ದಾಗಿರುತ್ತದೆ' ಎಂದು ಮೋದಿ ಹೇಳಿದ್ದಾರೆ.

'ಇಬ್ಬರ ನಡುವೆ ಅತ್ಯಂತ ಗೌಪ್ಯ ಸಂಭಾಷಣೆ ನಡೆದಿದ್ದು, ಬೇರೆಯವರ ಕಿವಿಗೆ ಕೇಳಿಸಬಾರದು ಎಂಬ ಕಾರಣಕ್ಕೆ ಕಾರಿನಲ್ಲಿ ಚರ್ಚೆ ನಡೆಸಿರುವ ಸಾಧ್ಯತೆಯಿದೆ' ಎಂದು ಮಾಸ್ಕೊ ರಾಜನೀತಿ ತಜ್ಞರು ವ್ಯಾಖ್ಯಾನಿಸಿದ್ದಾರೆ.



ಅಫ್ಗಾನಿಸ್ತಾನದಲ್ಲಿ ಸಂಭವಿಸಿದ ಭೂಕಂಪನದಿಂದಾಗಿ ಗ್ರಾಮವೊಂದರಲ್ಲಿ ಮನೆಗಳು ಹಾನಿಗೊಳಗಾಗಿವೆ ಎಪಿ/ಪಿಟಿಐ ಚಿತ್ರ

ಅಫ್ಗಾನಿಸ್ತಾನ ಭೂಕಂಪ: 800 ಮಂದಿ ಸಾವು

ಒಂದನೇ ಪುಟದಿಂದ...

ಭಾನುವಾರ ರಾತ್ರಿ 11.47ರ ಸುಮಾರಿಗೆ 8 ಕಿ.ಮೀ. ಆಳದಲ್ಲಿ ರಿಕ್ಟರ್ ಮಾಪಕದಲ್ಲಿ 6.0 ತೀವ್ರತೆಯ ಪ್ರಬಲ ಕಂಪನ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದು ನಂಗರಹಾರ್ ಪ್ರಾಂತ್ಯದ ಜಲಾಲಾಬಾದ್ ನಗರದಿಂದ ಪೂರ್ವಕ್ಕೆ 27 ಕಿ.ಮೀ. ದೂರದಲ್ಲಿದೆ ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (ಯುಎಸ್‌ಜಿಎಸ್) ದೃಢಪಡಿಸಿದೆ. ನಂತರ ಬೆಳಿಗ್ಗಿನ ಜಾವ 4 ಗಂಟೆಯವರೆಗೆ 6ಕ್ಕೂ ಹೆಚ್ಚು ಲಘು ಕಂಪನಗಳು ವರದಿಯಾಗಿವೆ.

ನೆಲದಿಂದ ಹೆಚ್ಚು ಆಳವಲ್ಲದ ಸ್ಥಳಗಳಲ್ಲಿನ ಇಂತಹ ಪ್ರಬಲ ಕಂಪನಗಳು ಅಪಾರ ಹಾನಿ ಉಂಟುಮಾಡುತ್ತವೆ ಎಂದು ಯುಎಸ್‌ಜಿಎಸ್ ಹೇಳಿದೆ. ಇದಕ್ಕೆ ಸಾಕ್ಷ್ಯ ಎನ್ನುವಂತೆ ಭೂಕಂಪದಲ್ಲಿ ಪಾಕಿಸ್ತಾನದ ಗಡಿ ಭಾಗದಲ್ಲಿರುವ ಕುನಾರ್ ಮತ್ತು ನಂಗರಹಾರ್ ಪ್ರಾಂತ್ಯದ ಹಲವು ಗ್ರಾಮಗಳು ಮಣ್ಣಿನಡಿಗೆ ಹೋಗಿವೆ. ನೂರಾರು ಕಟ್ಟಡಗಳು ಕುಸಿದಿವೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿದವರು, ನಾಪತ್ತೆಯಾದವರ ಸಂಖ್ಯೆ ಇನ್ನಷ್ಟೇ ತಿಳಿಯಬೇಕಿದೆ.

ಮುಂದುವರಿದ ರಕ್ಷಣಾ ಕಾರ್ಯ

ಗಾಯಗೊಂಡವರನ್ನು ರಕ್ಷಿಸಿ ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ತಮ್ಮ ಪ್ರೀತಿಪಾತ್ರರನ್ನು ಹುಡುಕುತ್ತಾ ಜನರು ಗೋಳಾಡುತ್ತಿರುವ ದೃಶ್ಯ ಮನ ಕಲಕುವಂತಿದೆ.

ಕುನಾರ್ ಪ್ರಾಂತ್ಯದಲ್ಲಿ ಹೆಚ್ಚಿನ ಮನೆಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಮರ ಬಳಸಿ ನಿರ್ಮಿಸಲಾಗಿದೆ. ಕಳಪೆ ಗುಣಮಟ್ಟದ ಈ ಮನೆಗಳು ಭೂಕಂಪದಲ್ಲಿ ನಾಮಾವಶೇಷ ಆಗಿವೆ. ಕುನಾರ್ ಪ್ರಾಂತ್ಯದ ನುರ್ಗಲ್ ಜಿಲ್ಲೆಯಲ್ಲಿ ಗರಿಷ್ಠ ಹಾನಿ ಸಂಭವಿಸಿದೆ. 'ವೃದ್ಧರು, ಮಕ್ಕಳು ಎಲ್ಲರೂ ಮಣ್ಣಿನಡಿ ಇದ್ದಾರೆ. ದಯವಿಟ್ಟು ನಮಗೆ ಸಹಾಯ ಮಾಡಿ. ಅವಶೇಷಗಳಡಿ ಸಿಲುಕಿರುವ ಮೃತದೇಹಗಳನ್ನು ಹೊರತೆಗೆದು ಅಂತ್ಯಸಂಸ್ಕಾರ ನೆರವೇರಿಸಿ' ಎಂದು ಗ್ರಾಮಸ್ಥರೊಬ್ಬರು ನೋವಿನಿಂದ ನುಡಿದರು.

ಅಫ್ಗಾನಿಸ್ತಾನದಲ್ಲಿ ಸಂಭವಿಸಿದ ಪ್ರಮುಖ ಭೂಕಂಪ

ವರ್ಷ	ತೀವ್ರತೆ	ಸಾವು
2022	5.9	1,000
2023	6.3	1,500


*1990ರಿಂದ 12 ಭೂಕಂಪಗಳು ಸಂಭವಿಸಿವೆ.

ಅಪಘಾತ: ರಾಜ್ಯದಲ್ಲಿ 12,321 ಮಂದಿ ಸಾವು

ರಸ್ತೆ ಅಪಘಾತ 2023ರ ವರದಿ

ನವದೆಹಲಿ: ಕರ್ನಾಟಕದಲ್ಲಿ 2023ರಲ್ಲಿ 43,440 ರಸ್ತೆ ಅಪಘಾತಗಳು ಸಂಭವಿಸಿ 12,321 ಮಂದಿ ಮೃತಪಟ್ಟಿದ್ದಾರೆ. ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಇಲಾಖೆ ಬಿಡುಗಡೆ ಮಾಡಿರುವ '2023ರ ರಸ್ತೆ ಅಪಘಾತ'ಗಳ ವರದಿ ಪ್ರಕಾರ, ಅತಿ ಹೆಚ್ಚು ಅಪಘಾತಗಳು ಸಂಭವಿಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಐದನೆಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಅಪಘಾತದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳ ಪೈಕಿ ಬೆಂಗಳೂರು ಎರಡನೇ ಸ್ಥಾನದಲ್ಲಿದೆ.

ಐದು ವರ್ಷಗಳಲ್ಲಿ ಅಪಘಾತ



2023ರಲ್ಲಿ ಅಪಘಾತ ಸ್ವರೂಪ

11,603 ಜನರ ಸಾವಿಗೆ ಕಾರಣವಾದ ಅಪಘಾತಗಳು

20,195 ಗಂಭೀರ ಗಾಯಗಳಿಗೆ ಕಾರಣವಾದ ಅಪಘಾತಗಳು

8,370 ಸಣ್ಣಪುಟ್ಟ ಗಾಯಗಳಿಗೆ ಕಾರಣವಾದ ಅಪಘಾತಗಳು


3,272 ಯಾರಿಗೂ ಗಾಯವಾಗದ ಅಪಘಾತಗಳು

52,547 2023ರಲ್ಲಿ ಅಪಘಾತಗಳಿಂದ ಒಟ್ಟು ಗಾಯಗೊಂಡವರು

26,618 ಗಂಭೀರ ಗಾಯ

25,929 ಸಣ್ಣಪುಟ್ಟ ಗಾಯಗೊಂಡವರು

ಹೆದ್ದಾರಿಗಳಲ್ಲಿ ಅಪಘಾತ





ಬೆಂಗಳೂರಿನಲ್ಲಿ ರಸ್ತೆ ಅಪಘಾತ

ವರ್ಷ	ಪ್ರಕರಣಗಳು	ಸಾವು	ಗಾಯಾಳು
2022	3,822	772	3,189
2023	4,974	915	4,162

2023ರಲ್ಲಿ ಯಾವ ಹೆದ್ದಾರಿಯಲ್ಲಿ ಎಷ್ಟು ಅಪಘಾತ

ಎನ್‌ಎಚ್‌ಎಐ		ಲೋಕೋಪಯೋಗಿ		ಇತರ ಇಲಾಖೆ	
ಅಪಘಾತ	ಸಾವು	ಅಪಘಾತ	ಸಾವು	ಅಪಘಾತ	ಸಾವು
11,501	3,524	2,541	792	228	67

ಡಿಸೆಂಬರ್ 25ಕ್ಕೆ ಮಾರ್ಕ್ ರಿಲೀಸ್

ನಟ ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ಡಿಸೆಂಬರ್ 25ಕ್ಕೆ ತೆರೆಕಾಣಲಿದೆ. ಸುದೀಪ್ ಜನ್ಮದಿನದ ಹೊಸ್ತಿಲಲ್ಲಿ (ಸೆ.1) ಚಿತ್ರದ ಫಸ್ಟ್‌ಲುಕ್ ಟೀಸರ್ ಹಾಗೂ ಶೀರ್ಷಿಕೆಯನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಚಿತ್ರದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಸುದೀಪ್. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾವನ್ನು 'ಸತ್ಯಜ್ಯೋತಿ ಫಿಲ್ಮ್ಸ್' ನಿರ್ಮಾಣ ಮಾಡುತ್ತಿದೆ.

ಸಿನಿಮಾದ ಬಗ್ಗೆ ಸುದ್ದಿಗೋಷ್ಠಿ ನಡೆಸಿ ವಿವರ ನೀಡಿದ ಸುದೀಪ್, 'ಚಿತ್ರದ ಶೇಕಡ 60ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಹಗಲಿರುಳು ಈ ತಂಡ ಕೆಲಸ ಮಾಡುತ್ತಿದೆ. ಅಕ್ಟೋಬರ್ ಅಂತ್ಯಕ್ಕೆ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಪೂರ್ಣಗೊಳ್ಳಲಿದೆ. ಡಿಸೆಂಬರ್‌ನಲ್ಲಿ ಸಿನಿಮಾ ರಿಲೀಸ್ ಆಗಲಿದೆ. ಜುಲೈ 5ರಂದೇ ನಾನು ಬಿಡುಗಡೆಯನ್ನು ಘೋಷಣೆ ಮಾಡಿದ್ದೆ. ಇದು 'ಮ್ಯಾಕ್ಸ್–2' ಅಲ್ಲ. ಸಿನಿಮ್ಯಾಟಿಕ್ ಯೂನಿವರ್ಸ್ ಇರಬಹುದು. ಒಂದು ಪಾತ್ರದ ಮೇಲೆ ಉತ್ಸಾಹ ಬಂದಾಗಲಷ್ಟೇ ಈ ರೀತಿ ಪ್ರಯೋಗ ಮಾಡಲು ಸಾಧ್ಯ. 'ಮ್ಯಾಕ್ಸ್'ನ ನಿರ್ದೇಶಕರು, ತಾಂತ್ರಿಕ ತಂಡವೇ ಕೆಲಸ ಮಾಡುತ್ತಿರುವ ಕಾರಣ ಅದೇ ಮಾದರಿಯಲ್ಲಿ ಸಿನಿಮಾವಿರಬಹುದು. ಈ ಪಾತ್ರದಲ್ಲಿ ವಿಭಿನ್ನತೆ ಇದ್ದು, ಅನಿಮಲ್ ಇನ್‌ಸ್ಟಿಂಕ್ಟ್ ಇದೆ. ನನ್ನ ಮೊದಲಿನ ಕೇಶವಿನ್ಯಾಸದಲ್ಲಿ ಗ್ಲ್ಯಾಮರಸ್ ಆಗಿ ಕಾಣಿಸುತ್ತಿದ್ದೆ, ಹೀಗಾಗಿ ಈ ಬದಲಾವಣೆ' ಎಂದರು.

'ವರ್ಷದಲ್ಲಿ ಒಂದು ಸಿನಿಮಾ ಇರಲೇಬೇಕು. ವೇಗವಾಗಿ ಈ ಸಿನಿಮಾವನ್ನು ಪೂರ್ಣಗೊಳಿಸಬಹುದು ಎನ್ನುವ ಕಾರಣಕ್ಕೇ ಚಿತ್ರೀಕರಣ ಹಗಲಿರುಳು ನಡೆಯುತ್ತಿದೆ. ಇಷ್ಟು ವೇಗವಾಗಿ ಸಿನಿಮಾ ಮಾಡಿದರೆ ಕನಿಷ್ಠ ₹5–6 ಕೋಟಿಯನ್ನು ಉಳಿಸಬಹುದು. ಬಹಳ ಅದ್ಭುತವಾಗಿ ಯೋಜನೆ ಹಾಕಿಕೊಂಡು ಈ ಸಿನಿಮಾದ ತಾಂತ್ರಿಕ ತಂಡ ಕೆಲಸ ಮಾಡಿದೆ' ಎಂದು ಸುದೀಪ್ ಮೆಚ್ಚುಗೆ ವ್ಯಕ್ತಪಡಿಸಿದರು.



ಸೆ.28ರಿಂದ 'ಬಿಗ್‌ಬಾಸ್' 12ನೇ ಆವೃತ್ತಿ ಆರಂಭ

ಸ್ಪರ್ಧೆ–ಸವಾಲು ಅಲ್ಲ

'ಮೂರು ಸಿನಿಮಾಗಳು ಡಿಸೆಂಬರ್‌ನಲ್ಲಿ ಬರುತ್ತಿವೆ. ಇದನ್ನು ಸ್ಪರ್ಧೆ–ಸವಾಲು ಎಂದುಕೊಳ್ಳುವುದು ಅವರವರ ದೃಷ್ಟಿಕೋನಕ್ಕೆ ಬಿಟ್ಟಿದ್ದು. ಸ್ಪರ್ಧೆ ಮಾಡುವ ವ್ಯಕ್ತಿತ್ವ ನನ್ನದಲ್ಲ. ಅನವಶ್ಯಕವಾಗಿ ನಾನು ಸವಾಲು ಹಾಕುವುದಿಲ್ಲ. ನಾವು ಯೋಜನೆ ಹಾಕಿಕೊಂಡೇ ಹೆಜ್ಜೆ ಇಡುತ್ತಿದ್ದೇವೆ. ನಾನು ಯಾವ ಸಿನಿಮಾಗೂ ಹೆದರಲ್ಲ, ಅವರೂ ನಮ್ಮ ಸಿನಿಮಾಗೆ ಹೆದರಬೇಕಿಲ್ಲ. 'ಡೆವಿಲ್'ಗೆ ಒಳ್ಳೆಯದಾಗಲಿ. ಯಾವುದೇ ಸಿನಿಮಾ ಆಗಿರಲಿ ಅದು ಯಶಸ್ಸು ಕಾಣಬೇಕು. ಜನರು ಯಾವತ್ತೂ ಗೊಂದಲಕ್ಕೀಡಾಗುವುದಿಲ್ಲ. ದಿನಕ್ಕೆ ನಾಲ್ಕೈದು ಶೋಗಳು ಇರುತ್ತವೆ. ನೂರಾರು ಚಿತ್ರಮಂದಿರಗಳಿವೆ. ಡಿಸೆಂಬರ್‌ನಲ್ಲಿ 25 ಬಿಟ್ಟರೆ ಬೇರೆ ದಿನಗಳು ಇಲ್ಲ. ಸಂಕ್ರಾಂತಿಗೆ ಒಂದೇ ದಿನ ರಜೆ. ಇದನ್ನು ಬಿಟ್ಟರೆ ಮುಂದಿನ ವರ್ಷದ ಜೂನ್–ಜುಲೈಗೆ ಬರಬೇಕು' ಎನ್ನುತ್ತಾರೆ ಸುದೀಪ್.

'ಅಮ್ಮನ ಹೆಸರಿನಲ್ಲಿ ಒಂದು ಪಾರ್ಕ್ ದತ್ತು ಪಡೆದಿದ್ದೇನೆ. ಅಮ್ಮನ ಜೊತೆ ನಿರಂತರ ಸಂಪರ್ಕದಲ್ಲಿ ಇರುವಂತೆ ಗಿಡ ನೆಡುವ ಕೆಲಸ ಮಾಡುತ್ತಿದ್ದೇನೆ. ಅಮ್ಮನ ಹೆಸರಿನಲ್ಲಿ ಇಂತಹ ಸಾಮಾಜಿಕ ಕಾರ್ಯ ಮುಂದುವರಿಸಲಿದ್ದೇನೆ' ಎಂದರು.

> ಕಲಾವಿದರಿಲ್ಲ, ಸಿನಿಮಾ ಓಡುತ್ತಿಲ್ಲ, ಸಿನಿಮಾ ಮಾಡಲು ಬರುತ್ತಿಲ್ಲ ಎನ್ನುವವರಿಗೆ 'ಸು ಫ್ರಮ್ ಸೋ' ಉತ್ತರಕೊಟ್ಟಿದೆ. ಹೊಸಬರಿಗೆ ಈ ಸಿನಿಮಾದ ಯಶಸ್ಸು ಧೈರ್ಯ ನೀಡಿದೆ. ಯಶಸ್ಸು ಕಂಡ ಹೊಸ ಸಿನಿಮಾಗಳೆಲ್ಲವೂ ದೇವಸ್ಥಾನಗಳೇ.
> **ಸುದೀಪ್**, ನಟ

'ವಿಷ್ಣು ದರ್ಶನ ಕೇಂದ್ರ' ವಿಡಿಯೊ

'ಬುಧವಾರ (ಸೆ.3) ವಿಷ್ಣುವರ್ಧನ್ ಅವರ ದರ್ಶನ ಕೇಂದ್ರ ಹೇಗಿರಲಿದೆ ಎನ್ನುವ ಒಂದು ವಿಡಿಯೊ ರಿಲೀಸ್ ಮಾಡುತ್ತಿದ್ದೇವೆ. ನಮ್ಮ ಯೋಜನೆಯನ್ನು ಅದರ ಮೂಲಕ ತಿಳಿಸಲಿದ್ದೇವೆ. ಈ ಭೂಮಿ ಒಂದು ಬಣ್ಣದ ಬುಗುರಿ ಎನ್ನುವ ಕಲ್ಪನೆಯಲ್ಲಿ ಇದು ಇರಲಿದೆ. ಭೂಮಿಗಾಗಿ ಒಂದು ಕಡೆ ಕಿತ್ತಾಟ ನಡೆಯುತ್ತಿದೆ. ಅದು ಅದರ ಪಾಡಿಗೆ ಆಗಲಿದೆ. ಇದಕ್ಕೆ ಅಂತ್ಯವಿಲ್ಲ. ಒಬ್ಬ ಅಭಿಮಾನಿಯಾಗಿ ಏನಾದರೂ ಮಾಡಬೇಕು ಎಂದೆನಿಸಿತು. ಹೀಗಾಗಿ ಈ ನಿರ್ಧಾರ ಮಾಡಿದೆ. ಇದರಲ್ಲಿ ಯಾವುದೇ ವಾಣಿಜ್ಯ ಉದ್ದೇಶವಿಲ್ಲ' ಎಂದರು.

'ರಾಜಕೀಯಕ್ಕೆ ಬರುವ ಯೋಚನೆ ಇಲ್ಲ. ಯೋಚನೆ ಬರುವ ಹಾಗೆ ಕೆಲವರು ಮಾಡುತ್ತಿರುತ್ತಾರೆ. ನಾನು ರಾಜಕೀಯಕ್ಕೆ ಹೋದರೆ ಬದಲಾಗದ ಹಾಗೆ ನಟ್ ಬೋಲ್ಟ್ ಟೈಟ್ ಮಾಡಿಕೊಳ್ಳುತ್ತೇನೆ' ಎಂದರು ಸುದೀಪ್.

2026ರ ವರ್ಷಾಂತ್ಯಕ್ಕೆ 'ಬಿಲ್ಲ ರಂಗ ಬಾಷಾ'

ಅನೂಪ್ ಭಂಡಾರಿ ಆ್ಯಕ್ಷನ್ ಕಟ್ ಹೇಳುತ್ತಿರುವ ಪ್ಯಾನ್ ಇಂಡಿಯಾ ಸಿನಿಮಾ 'ಬಿಲ್ಲ ರಂಗ ಬಾಷಾ–ಫಸ್ಟ್ ಬ್ಲಡ್' 2026ರ ವರ್ಷಾಂತ್ಯದಲ್ಲಿ ತೆರೆಕಾಣಲಿದೆ ಎಂದಿದ್ದಾರೆ ಸುದೀಪ್. 'ಈ ಚಿತ್ರದ ಎರಡು ಹಂತದ ಚಿತ್ರೀಕರಣ ಪೂರ್ಣಗೊಳಿಸಿ ಬಳಿಕ ಮಾರ್ಕ್ ಕೈಗೆತ್ತಿಕೊಂಡಿದ್ದೆ. 'ಬಿಲ್ಲ ರಂಗ ಬಾಷಾ' ಸಿನಿಮಾ ನಿಂತಿದೆ ಎನ್ನುವ ಮೀಮ್‌ಗಳು ಸುಳ್ಳು. ಸಿನಿಮಾ ಇನ್ನೂ ದೊಡ್ಡದಾಗಿ ಆಗುತ್ತಿದೆ. ಡಿಸೆಂಬರ್‌ನಲ್ಲಿ ಇದರ ಚಿತ್ರೀಕರಣಕ್ಕೆ ಮತ್ತೆ ಇಳಿಯಲಿದ್ದೇನೆ. ಇದರಲ್ಲಿ 'ಬಿಲ್ಲ' ಎನ್ನುವ ಪಾತ್ರದ ಮೇಕಪ್‌ಗೇ ಎರಡು ಗಂಟೆ ಹಿಡಿಯುತ್ತಿದೆ. ತೆಗೆಯಲು 25 ನಿಮಿಷ ಹಿಡಿಯುತ್ತಿದೆ. ಇದೊಂದು ಹೊಸ ಲೋಕ' ಎಂದರು.



ನನಗೆ ಖುಷಿ ತಂದ ಒಂದು ಕಥೆ ಬರೆದಿದ್ದೇನೆ. ನಿರ್ದೇಶನಕ್ಕೆ ತಯಾರಿ ಆರಂಭವಾಗಿದೆ

ಪೌರಾಣಿಕ ಪಾತ್ರಕ್ಕೆ 'ಕುದುರೆ' ಅಡ್ಡಿ!

'ನನಗೆ ಕುದುರೆ ಓಡಿಸುವುದು ಎಂದರೆ ಆಗಲ್ಲ. ಹಿಂದೊಮ್ಮೆ ಇದೇ ರೀತಿ ಕುದುರೆ ಸವಾರಿ ಕಲಿಯುತ್ತಿದ್ದಾಗ ಸುಮಾರು 20 ಮೀಟರ್ ದೂರಕ್ಕೆ ನನ್ನನ್ನು ಕುದುರೆ ಎಳೆದೊಯ್ದಿತ್ತು. ಆವಾಗ ಆಗಿರುವ ಭಯ ಇನ್ನೂ ಹೋಗಿಲ್ಲ. ದರ್ಶನ್ ತೋಟಕ್ಕೆ ಹೋಗಿದ್ದಾಗ ಕುದುರೆ ಹತ್ತಲು ಒತ್ತಾಯ ಮಾಡಿದ್ದ. ಆ ಸಂದರ್ಭದಲ್ಲಿ ನೀನೂ ಬೇಡ ನಿನ್ನ ಕುದುರೆ ಸಹವಾಸನೂ ಬೇಡ ಎಂದಿದ್ದೆ. ಆದರೂ ಕುದುರೆ ಹತ್ತಿಸಿದರು. ಆವತ್ತು ಕುದುರೆ ಇಳಿದವನು ಇಲ್ಲಿಯವರೆಗೆ ಹತ್ತಿಲ್ಲ. ಈ ಪೌರಾಣಿಕ ಪಾತ್ರ ಮಾಡಿದರೆ ಮೊದಲು ಯುದ್ಧಕ್ಕೆ ಕುದುರೆ ಹತ್ತಿಸುತ್ತಾರೆ. ಹೀಗಾಗಿ ಬೈಕ್ ಮೇಲೆ ಕುಳಿತುಕೊಳ್ಳುತ್ತೇನೆ, ಬೇಗ ಹೋಗಿ ಬೇಗ ಸಿನಿಮಾ ಮುಗಿಸುತ್ತೇನೆ' ಎನ್ನುತ್ತಾರೆ ಸುದೀಪ್.

'ಮಾಂಗಲ್ಯ'ಕ್ಕೆ ಸುಧಾರಾಣಿ ನಿರೂಪಣೆ



ಸುಧಾರಾಣಿ

ನಟಿ ಸುಧಾರಾಣಿ ಉದಯ ಟಿ.ವಿಯಲ್ಲಿನ ಹೊಸ ಧಾರಾವಾಹಿಯೊಂದನ್ನು ನಿರೂಪಣೆ ಮಾಡಲಿದ್ದಾರೆ.

ಸೆ.2ರಿಂದ ಉದಯ ವಾಹಿನಿಯಲ್ಲಿ 'ಮಾಂಗಲ್ಯ' ಎಂಬ ಹೊಸ ಧಾರಾವಾಹಿ ಆರಂಭವಾಗುತ್ತಿದೆ. ಇದನ್ನು ಸುಧಾರಾಣಿ ನಿರೂಪಣೆ ಮಾಡಲಿದ್ದಾರೆ. ಇದು ದುರ್ಗಾಪುರ ಎಂಬಲ್ಲಿ ನಡೆಯುವ ಕಥೆ. ಮಯೂರಿ ಜವಾಬ್ದಾರಿ ಇರುವ ಬಡ ಕುಟುಂಬದ ಹುಡುಗಿ. ಕೃಷಿ ಕೆಲಸದಲ್ಲೂ ಎತ್ತಿದ ಕೈ. ಆ ಊರಿನ ಶ್ರೀಮಂತ ಕುಟುಂಬದ ತೋಟದ ಉಸ್ತುವಾರಿ ಹೊತ್ತಾಕೆ. ಆ ಕುಟುಂಬದ ತಾರಕ್ ಎಂಬಾತ ತನ್ನ ಅಮ್ಮನ ಶ್ರೀಮಂತಿಕೆಯ ಅಹಂ ಮುರಿಯಲು ಮಯೂರಿಗೆ ತಾಳಿ ಕಟ್ಟುತ್ತಾನೆ. ಇಲ್ಲಿಂದ ಕಥೆ ಆರಂಭವಾಗುತ್ತದೆ ಎಂದಿದೆ ತಂಡ.

ನಟ ಜಗನ್ 'ತಾರಕ್' ಪಾತ್ರಕ್ಕೆ ಬಣ್ಣಹಚ್ಚಿದ್ದು, 'ಮಯೂರಿ'ಯಾಗಿ ಐಶ್ವರ್ಯ ಪಿಸ್ಸೆ ನಟಿಸಿದ್ದಾರೆ. ಜಾನ್ಸಿ, ಬಿ.ಎಂ.ವೆಂಕಟೇಶ್, ಇಂಚರ, ದಿಶಾ, ಹನುಮಂತು, ಜಯಬಾಲು, ಚಿತ್ರಾ, ರೂಪೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಧಾರಾವಾಹಿಯು ಸೆ.2ರಿಂದ ಸಂಜೆ 7 ಗಂಟೆಗೆ ಪ್ರಸಾರವಾಗಲಿದೆ.

'ಏಳುಮಲೆ' ಟ್ರೇಲರ್ ಬಿಡುಗಡೆ



ರಾಣಾ, ಪ್ರಿಯಾಂಕಾ

'ಕಾಟೇರ' ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ 'ಏಳುಮಲೆ' ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾ ಸೆ.5ರಂದು ತೆರೆಕಾಣುತ್ತಿದೆ.

ನಟರಾದ ಶರಣ್, ಡಾಲಿ ಧನಂಜಯ ಹಾಗು ನವೀನ್ ಶಂಕರ್ ಟ್ರೇಲರ್ ಬಿಡುಗಡೆ ಮಾಡಿದರು. ಈ ಟ್ರೇಲರ್ ಸಿನಿಮಾ ಬಗ್ಗೆ ನಿರೀಕ್ಷೆ ಹುಟ್ಟಿಸಿದ್ದು ಆ್ಯಕ್ಷನ್, ಭಾವನಾತ್ಮಕ ಕಥೆ, ಪ್ರೀತಿ ಜೊತೆಗೆ ಥ್ರಿಲ್ಲಿಂಗ್ ಅಂಶಗಳನ್ನೂ ಒಳಗೊಂಡಿದೆ. ಸಿನಿಮಾದಲ್ಲಿ 'ಏಕ್ ಲವ್ ಯಾ' ಮೂಲಕ ಚಂದನವನ ಪ್ರವೇಶಿಸಿದ್ದ ನಟ ರಾಣಾ, 'ಮಹಾನಟಿ' ರಿಯಾಲಿಟಿ ಶೋ ವಿಜೇತೆ ಪ್ರಿಯಾಂಕಾ ಆಚಾರ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಧನಂಜಯ, 'ಈ ರೀತಿಯ ಪ್ರೇಮಕಥೆಯನ್ನು ನೋಡದೆ ಬಹಳ ದಿನವಾಗಿದೆ. ಈ ತಂಡದಲ್ಲಿ ಪ್ರಾಮಾಣಿಕತೆ ಇದೆ. ಆ ಪ್ರಾಮಾಣಿಕತೆಯೇ ಈ ಸಿನಿಮಾವನ್ನು ಗೆಲ್ಲಿಸುತ್ತದೆ. ಸಿನಿಮಾವನ್ನೇ ನಂಬಿಕೊಂಡು ಸಿನಿಮಾದಿಂದ ದುಡಿದು ಮತ್ತೆ ಸಿನಿಮಾ ಮಾಡುವುದು ಸವಾಲು. ಇದನ್ನು ತರುಣ್ ಸಮರ್ಥವಾಗಿ ಮಾಡುತ್ತಿದ್ದಾರೆ' ಎಂದರು.

'ಒಬ್ಬ ನಿರ್ದೇಶಕನಾಗಿ ದುಡಿದು ಬಂದ ಹಣದಿಂದಲೇ ಸಿನಿಮಾ ಮಾಡುತ್ತೇನೆ. ಇಲ್ಲಿ ಅಟ್ಲಾಂಟಾ ನಾಗೇಂದ್ರ ನನಗೆ ಜೊತೆಯಾಗಿದ್ದಾರೆ. ಇದು ಸಂಪೂರ್ಣ ಪುನೀತ್ ಸಿನಿಮಾ. ಏಳುಮಲೆ ಸಿನಿಮಾವು ಪ್ರೀತಿಯೇ ಪರಮಶ್ರೇಷ್ಠ ಎಂದು ಹೇಳುತ್ತದೆ. ಇದನ್ನು ನಾವು ಥ್ರಿಲ್ಲರ್ ಮೂಲಕ ಹೇಳುತ್ತಿದ್ದೇವೆ. ಜನರಿಗೆ ಖಂಡಿತಾ ನಿರಾಶೆಯಾಗುವುದಿಲ್ಲ' ಎನ್ನುತ್ತಾರೆ ತರುಣ್.

ಜಗಪತಿ ಬಾಬು, ಟಿ.ಎಸ್. ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ 'ಏಳುಮಲೆ'ಯ ತಾರಾಬಳಗದಲ್ಲಿದ್ದಾರೆ. ಕರ್ನಾಟಕ - ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯನ್ನು ಹೊಂದಿರುವ ಈ ಸಿನಿಮಾಗೆ ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನವಿದೆ.

ಅನಿಲ್ ಶೆಟ್ಟಿ ಹೊಸ ಸಿನಿಮಾ 'ಲಂಬೋದರ 2.0'



ಅನಿಲ್ ಶೆಟ್ಟಿ

ಸ್ಟಾರ್ಟ್‌ಅಪ್ ಉದ್ಯಮಿ ಅನಿಲ್ ಶೆಟ್ಟಿ ನಟನೆಯ ಹೊಸ ಸಿನಿಮಾದ ಶೀರ್ಷಿಕೆ ಅನಾವರಣಗೊಂಡಿದೆ.

ಚಿತ್ರಕ್ಕೆ 'ಲಂಬೋದರ 2.0' ಎಂಬ ಶೀರ್ಷಿಕೆ ಇಡಲಾಗಿದೆ. ಅನಿಲ್ ಶೆಟ್ಟಿ ಅವರ ಹೋಂ ಬ್ಯಾನರ್ ಮಾಸ್ ಪ್ರೊಡಕ್ಷನ್ ಕಂಪನಿ ನಿರ್ಮಾಣ ಮಾಡುತ್ತಿರುವ ಈ ಸಿನಿಮಾದಲ್ಲಿ ಅನಿಲ್ ನಾಯಕ ನಟನಾಗಿ ನಟಿಸಲಿದ್ದು, ಈ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಡಲಿದ್ದಾರೆ.

'ಬ್ಯಾಚುಲರ್ ಪಾರ್ಟಿ' ಚಿತ್ರದ ನಿರ್ದೇಶಕ ಅಭಿಜಿತ್ ಮಹೇಶ್ ಈ ಚಿತ್ರಕ್ಕೆ ಚಿತ್ರಕಥೆ ಮತ್ತು ಸಂಭಾಷಣೆ ಬರೆಯುತ್ತಿದ್ದು ಸದ್ಯದಲ್ಲೇ ಇಡೀ ಚಿತ್ರತಂಡದ ಘೋಷಣೆಯಾಗಲಿದೆ ಎಂದಿದ್ದಾರೆ ಅನಿಲ್.

'ಮೂರ್ಖರನ್ನಾಗಿ ಮಾಡುವವನೇ ಉತ್ತಮ ನಾಯಕ'



ನಿತಿನ್ ಗಡ್ಕರಿ

ಮುಂಬೈ: 'ಯಾರು ಜನರನ್ನು ಹೆಚ್ಚು ಮೂರ್ಖರನ್ನಾಗಿ ಮಾಡಬಲ್ಲರೋ, ಅವರೇ ಅತ್ಯುತ್ತಮ ನಾಯಕ ಎಂದೆನಿಸಿಕೊಳ್ಳುತ್ತಾರೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನಾಗ್ಪುರದಲ್ಲಿ ನಡೆದ ಅಖಿಲ ಭಾರತೀಯ ಮಹಾನುಭಾವ ಪರಿಷದ್‌ನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಾನು ಕೆಲಸ ಮಾಡುವ ಕ್ಷೇತ್ರದಲ್ಲಿ ಮುಕ್ತವಾಗಿ ಸತ್ಯ ಮಾತನಾಡುವುದನ್ನು ನಿರ್ಬಂಧಿಸಲಾಗಿದೆ. ಎಲ್ಲರಿಗೂ ಅವರದ್ದೇ ಆದ ಉದ್ದೇಶಗಳಿವೆ. ಕೊನೆಗೆ ಯಾರು ಜನರನ್ನು ಹೆಚ್ಚು ಮೂರ್ಖರನ್ನಾಗಿ ಮಾಡಬಲ್ಲರೋ, ಅವರೇ ಅತ್ಯುತ್ತಮ ನಾಯಕ ಎಂದೆನಿಸಿಕೊಳ್ಳುತ್ತಾರೆ. ಆದರೆ, ಒಂದು ಮಾತ್ರ ಸತ್ಯ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿರುವಂತೆ ಅಂತಿಮ ವಿಜಯ ಎಂದಿಗೂ ಸತ್ಯದ್ದೇ ಆಗಿರಲಿದೆ' ಎಂದು ಹೇಳಿದ್ದಾರೆ.

ಇದೇ ವೇಳೆ ಸತ್ಯ ಮತ್ತು ನ್ಯಾಯದ ಮಾರ್ಗದಲ್ಲಿ ಬದುಕುವಂತೆ ಜನರಿಗೆ ಗಡ್ಕರಿ ಕರೆ ನೀಡಿದ್ದಾರೆ.


ಆಕ್ಷೇಪಣೆ ಸಲ್ಲಿಕೆಗೆ ಇನ್ನೂ ಅವಕಾಶ

ಎಸ್‌ಐಆರ್: ಸುಪ್ರೀಂ ಕೋರ್ಟ್‌ಗೆ ಚುನಾವಣಾ ಆಯೋಗ ಮಾಹಿತಿ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಬಿಡುಗಡೆ ಮಾಡಿರುವ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದ ಆಗ್ರಹ, ಆಕ್ಷೇಪಣೆ ಮತ್ತು ತಿದ್ದುಪಡಿ ಅರ್ಜಿಗಳನ್ನು ಸಲ್ಲಿಸಲು ಸೆ.1ರ ಬಳಿಕವೂ ಅವಕಾಶವಿದೆ ಎಂದು ಚುನಾವಣಾ ಆಯೋಗ (ಇ.ಸಿ) ತಿಳಿಸಿದೆ.

ಆದರೆ ಈಗಾಗಲೇ ನಿಗದಿಪಡಿಸಿರುವ ಸೆ.1ರ ಗಡುವಿನ ಬಳಿಕ ಸಲ್ಲಿಕೆಯಾಗುವ ಆಕ್ಷೇಪಣೆಗಳನ್ನು ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿದ ಬಳಿಕ ಪರಿಗಣಿಸಲಾಗುವುದು ಎಂದು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಬಿಹಾರ ಎಸ್‌ಐಆರ್ ಕುರಿತು ಚುನಾವಣಾ ಆಯೋಗವು ಜೂನ್ 24ರಂದು ಹೊರಡಿಸಿದ್ದ ವೇಳಾಪಟ್ಟಿಯ ಪ್ರಕಾರ, ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸುವ ಗಡುವು ಸೋಮವಾರ (ಸೆ.1) ಕೊನೆಗೊಂಡಿದೆ. ಮತದಾರರ ಅಂತಿಮ ಪಟ್ಟಿಯನ್ನು ಸೆಪ್ಟೆಂಬರ್ 30ರಂದು ಪ್ರಕಟಿಸಲಾಗುತ್ತದೆ.



ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಎಂದು ಚುನಾವಣಾ ಆಯೋಗ ಹೇಳಿರುವುದನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಸೋಮವಾರ ಗಮನಿಸಿತು.

ಕರಡು ಮತದಾರರ ಪಟ್ಟಿ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ನೀಡಿದ್ದ ಗಡುವು ವಿಸ್ತರಿಸುವಂತೆ ಕೋರಿ ಆರ್‌ಜೆಡಿ ಮತ್ತು ಎಐಎಂಐಎಂ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ.

'ಸೆಪ್ಟೆಂಬರ್ 1ರ ನಂತರ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳಿಗೆ ಅರ್ಜಿ ಸಲ್ಲಿಸುವುದನ್ನು ನಿರ್ಬಂಧಿಸುವುದಿಲ್ಲ ಎಂದು ಚುನಾವಣಾ ಆಯೋಗ ಸಲ್ಲಿಸಿದ ಟಿಪ್ಪಣಿ ಹೇಳುತ್ತದೆ. ತಿದ್ದುಪಡಿಗಳನ್ನು ಗಡುವಿನ (ಸೆ.1) ನಂತರವೂ ಸಲ್ಲಿಸಬಹುದು. ಆದ್ದರಿಂದ ಆಕ್ಷೇಪಣೆ ಸಲ್ಲಿಕೆ ಮುಂದುವರಿಯಲಿದೆ' ಎಂಬುದನ್ನು ಪೀಠವು ಗಮನಿಸಿತು.

ಚುನಾವಣಾ ಆಯೋಗದ ಟಿಪ್ಪಣಿಗೆ ಪ್ರತಿಕ್ರಿಯೆ ಸಲ್ಲಿಸುವ ಸ್ವಾತಂತ್ರ್ಯವನ್ನು ಪೀಠವು ರಾಜಕೀಯ ಪಕ್ಷಗಳಿಗೆ ನೀಡಿತು.

ಇ.ಸಿ ಪರ ವಾದ ಮಂಡಿಸಿದ ಹಿರಿಯ ವಕೀಲ ರಾಕೇಶ್ ದ್ವಿವೇದಿ, 'ಆಕ್ಷೇಪಣೆ ಸಲ್ಲಿಕೆಯ ಗಡುವು ವಿಸ್ತರಿಸಿದರೆ ಇಡೀ ಎಸ್‌ಐಆರ್ ಪ್ರಕ್ರಿಯೆ ಮತ್ತು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಅಡ್ಡಿಯಾಗಲಿದೆ' ಎಂದು ವಾದಿಸಿದರು.

'ನಿಯಮಗಳ ಪ್ರಕಾರವೇ ಕಾಲಮಿತಿ ನಿಗದಿಪಡಿಸಲಾಗಿದೆ. ಮತದಾರರಿಗೆ ಆಗ್ರಹ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಗರಿಷ್ಠ ಮೂವತ್ತು ದಿನಗಳ ಕಾಲಾವಕಾಶ ನೀಡಲಾಗಿದೆ' ಎಂದರು.

ಎಸ್‌ಐಆರ್ ಅನ್ನು 'ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆ' ಎಂದು ಹೇಳಿರುವ ಆಯೋಗ, ಅಪೂರ್ಣ ದಾಖಲೆ ನೀಡಿರುವ ಮತದಾರರಿಗೆ ಏಳು ದಿನಗಳಲ್ಲಿ ನೋಟಿಸ್ ಕಳುಹಿಸಲಾಗುವುದು ಎಂದಿದೆ.

'ಸ್ವಯಂಸೇವಕರ ನೇಮಿಸಿ'

ಕರಡು ಮತದಾರರ ಪಟ್ಟಿ ಬಗ್ಗೆ ಆಕ್ಷೇಪಣೆಗಳ ಸಲ್ಲಿಕೆಗೆ ಮತದಾರರು ಮತ್ತು ರಾಜಕೀಯ ಪಕ್ಷಗಳಿಗೆ ನೆರವಾಗಲು ಕಾನೂನಿನ ಪೂರಕ ಅಂಶಗಳಲ್ಲಿ ಪರಿಣತರಾಗಿರುವ ಸ್ವಯಂಸೇವಕರನ್ನು ನೇಮಿಸುವಂತೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಪೀಠವು ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 8ಕ್ಕೆ ನಿಗದಿಪಡಿಸಿತು.

ಶೇ 99.5 ಮಂದಿಯಿಂದ ದಾಖಲೆ ಸಲ್ಲಿಕೆ

ಬಿಹಾರದ 7.24 ಕೋಟಿ ಮತದಾರರಲ್ಲಿ ಶೇಕಡ 99.5 ಮತದಾರರು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಅಗತ್ಯದ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ಆರ್‌ಜೆಡಿ ಮತ್ತು ಸಿಪಿಐ-ಎಂಎಲ್ ಪಕ್ಷಗಳು ಹೊರತುಪಡಿಸಿ ಯಾವುದೇ ರಾಜಕೀಯ ಪಕ್ಷಗಳು ನಿಗದಿತ ಸ್ವರೂಪಗಳಲ್ಲಿ ಆಗ್ರಹ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಮತದಾರರಿಗೆ ಸಹಾಯ ಮಾಡಿಲ್ಲ ಎಂದೂ ಆಯೋಗ ಹೇಳಿದೆ.

ಹೆಸರು ಕೈಬಿಡಲು ಕೋರಿ 2.17 ಲಕ್ಷ ಅರ್ಜಿ ಸಲ್ಲಿಕೆ

ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವಂತೆ ಕೋರಿ 2.17 ಲಕ್ಷ ಅರ್ಜಿಗಳು ಬಿಹಾರದಲ್ಲಿ ಸಲ್ಲಿಕೆಯಾಗಿವೆ ಎಂದು ಆಯೋಗ ಸೋಮವಾರ ಮಾಹಿತಿ ನೀಡಿದೆ. 36 ಸಾವಿರಕ್ಕೂ ಅಧಿಕ ಮಂದಿ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಿದೆ.

ಬಿಜೆಪಿಯು ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವಂತೆ ಕೋರಿ 16 ಆಕ್ಷೇಪಣೆಗಳನ್ನು ಸಲ್ಲಿಸಿದೆ. ಹೆಸರುಗಳನ್ನು ತೆಗೆದುಹಾಕುವಂತೆ ಕೋರಿರುವ ರಾಷ್ಟ್ರೀಯ ಪಕ್ಷ ಬಿಜೆಪಿ ಮಾತ್ರ.

ಎಥೆನಾಲ್ ಮಿಶ್ರಿತ ಪೆಟ್ರೋಲ್ 'ಸುಪ್ರೀಂ'ನಿಂದ ಪಿಐಎಲ್ ವಜಾ

ನವದೆಹಲಿ (ಪಿಟಿಐ): ದೇಶದಾದ್ಯಂತ ಶೇ 20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ–20) ಬಳಕೆ ಜಾರಿಗೊಳಿಸುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

'ಇಬಿಪಿ–20' ಮೂಲಕ ದೇಶದ ಲಕ್ಷಾಂತರ ಸವಾರರನ್ನು ತಮ್ಮ ವಾಹನಗಳ ಎಂಜಿನ್‌ಗೆ ಹೊಂದಿಕೆಯಾದ ಇಂಧನ ಬಳಸುವಂತೆ ಒತ್ತಾಯಿಸಲಾಗುತ್ತಿದೆ' ಎಂದು ವಕೀಲ ಅಕ್ಷಯ್ ಮಲ್ಹೋತ್ರಾ ಎಂಬವರು ಪಿಐಎಲ್ ಸಲ್ಲಿಸಿದ್ದರು.

'ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ಎಥೆನಾಲ್ ಮುಕ್ತ ಪೆಟ್ರೋಲ್ ಲಭ್ಯತೆ ಖಾತ್ರಿಪಡಿಸುವ ಲೇಬಲ್ ಪ್ರದರ್ಶಿಸುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು' ಎಂಬ ಅರ್ಜಿದಾರರ ವಾದವನ್ನು ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ಕೆ.ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠ ತಿರಸ್ಕರಿಸಿತು.

'ಕೇಂದ್ರದ ಪರವಾಗಿ ಹಾಜರಾದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು, 'ಪಿಐಎಲ್'ಗೆ ವಿರೋಧ ವ್ಯಕ್ತಪಡಿಸಿ, ಎಥೆನಾಲ್ ಮಿಶ್ರಿತ ಪೆಟ್ರೋಲ್‌ನಿಂದ ಕಬ್ಬು ಬೆಳೆಗಾರರಿಗೆ ಅನುಕೂಲವಾಗುತ್ತದೆ' ಎಂಬುದನ್ನು ಪೀಠದ ಗಮನಕ್ಕೆ ತಂದರು.

'ಪಿಐಎಲ್' ಸಲ್ಲಿಸಿರುವ ವಕೀಲರು ಬೇನಾಮಿ. ಇವರ ಹಿಂದೆ ಬೇರೆ ಲಾಬಿ ಇದೆ. 'ಇಬಿಪಿ–20'ಗೆ ಸಂಬಂಧಿಸಿಂತೆ ಸರ್ಕಾರ ಪ್ರತಿಯೊಂದು ಸಂಗತಿಯನ್ನೂ ವಿವೇಚಿಸುತ್ತದೆ' ಎಂದು ಅಟಾರ್ನಿ ಜನರಲ್ ಪೀಠಕ್ಕೆ ತಿಳಿಸಿದರು.

ಸಂಭಲ್: ಯಥಾಸ್ಥಿತಿ ಮುಂದುವರಿಕೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಸಂಭಲ್ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲು ತಾನು ನೀಡಿರುವ ಆದೇಶವನ್ನು ಸುಪ್ರೀಂ ಕೋರ್ಟ್ ಎರಡು ವಾರಗಳವರೆಗೆ ವಿಸ್ತರಿಸಿದೆ.

ಮಸೀದಿ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಮೇಲ್ಮನವಿ ಸಲ್ಲಿಸಿದ್ದಾರೆ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರ ಪೀಠವು ತಿಳಿಸಿತು. ಈ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಪೀಠ ತನ್ನ ರಿಜಿಸ್ಟ್ರಿಗೆ ಸೋಮವಾರ ಸೂಚಿಸಿದೆ.

ಹಿಂದೂ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ವಿಷ್ಣು ಶಂಕರ್ ಜೈನ್, ಯಥಾಸ್ಥಿತಿ ಕಾಯ್ದುಕೊಳ್ಳುವುದನ್ನು ಇನ್ನಷ್ಟು ವಿಸ್ತರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ಮಸೀದಿ ಸಮಿತಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಹುಝೆಫ ಅಹ್ಮದಿ ಅವರು ವರದಿ ಸಲ್ಲಿಕೆ ತನಕ ಯಥಾಸ್ಥಿತಿಯನ್ನು ವಿಸ್ತರಿಸಬೇಕು ಎಂದು ಕೋರಿದರು.

ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಶಾಹಿ ಜಾಮಾ ಮಸೀದಿ ಮತ್ತು ಹರಿಹರ ದೇವಾಲಯ ವಿವಾದಕ್ಕೆ ಸಂಬಂಧಿಸಿದಂತೆ ಮಸೀದಿ ಆವರಣದಲ್ಲಿ ಸಮೀಕ್ಷೆ ಕೈಗೊಳ್ಳುವಂತೆ ಸಿವಿಲ್ ನ್ಯಾಯಾಲಯ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಸಂಕ್ಷಿಪ್ತ ಸುದ್ದಿ

ಆನೆ ದಾಳಿ: ಮಾವುತ ಸಾವು

ಆಲಪ್ಪುಳ (ಕೇರಳ) (ಪಿಟಿಐ): ಆಲಪ್ಪುಳ ಜಿಲ್ಲೆಯ ಹರಿಪ್ಪಾಡ್ ದೇವಾಲಯದ ಆನೆ ತುಳಿದು ಮಾವುತ ಮೃತಪಟ್ಟಿದ್ದಾರೆ. ಮತ್ತೊಬ್ಬರಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಆಲಪ್ಪುಳ ಜಿಲ್ಲೆಯ ಇಡಪ್ಪೊನ್ಮರಿಯ ಮುರಳೀಧರನ್ ನಾಯರ್ (53) ಎಂದು ಗುರುತಿಸಲಾಗಿದೆ. ಇವರು ಹರಿಪ್ಪಾಡ್‌ನ ಸುಬ್ರಮಣ್ಯ ದೇವಾಲಯಕ್ಕೆ ಸೇರಿದ ಸ್ಕಂದನ್ ಆನೆಯ ಮಾವುತರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮದವೇರಿದ್ದ ಆನೆಯನ್ನು ಕೆಲವು ತಿಂಗಳಿನಿಂದ ದೇಗುಲದ ಅರ್ಚಕರ ಮನೆಯಲ್ಲಿ ಕಟ್ಟಿಹಾಕಲಾಗಿತ್ತು. ಭಾನುವಾರ ಪುಂಡಾಟ ನಡೆಸಿದ ಆನೆ ಮಾವುತ ಸುನೀಲ್ ಕುಮಾರ್ ಮೇಲೆ ದಾಳಿ ಮಾಡಿತು. ಸ್ಥಳಕ್ಕೆ ಧಾವಿಸಿ ಆನೆಯನ್ನು ನಿಯಂತ್ರಣಕ್ಕೆ ತಂದ ಮುರಳೀಧರನ್, ದೇವಾಲಯಕ್ಕೆ ಸ್ಥಳಾಂತರಿಸಿದ್ದಾರೆ. ಬಳಿಕ ಆನೆ ಮತ್ತೊಮ್ಮೆ ಮುರಳೀಧರನ್ ಮೇಲೆ ದಾಳಿ ಮಾಡಿತು.

ಕೆಲನಿಮಿಷಗಳ ಕಾಲ ಮುರಳೀಧರನ್ ಅವರನ್ನು ಆನೆ ನೆಲಕ್ಕೆ ಒತ್ತಿಹಿಡಿಯಿತು. ಬಳಿಕ ಇತರ ಮಾವುತರು ಆನೆಯನ್ನು ನಿಯಂತ್ರಿಸಿ, ಮುರಳೀಧರನ್ ಅವರನ್ನು ಆಸ್ಪತ್ರೆಗೆ ದಾಖಲಿಸಿದರು. ಅಲ್ಲಿ ಅವರು ಮೃತಪಟ್ಟರು. ಗಾಯಗೊಂಡಿದ್ದ ಮತ್ತೊಬ್ಬ ಮಾವುತ ಸುನೀಲ್ ಅವರ ಸ್ಥಿತಿಯು ಗಂಭೀರವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೀಬಾ ಸೋಂಕು: ಇಬ್ಬರು ಸಾವು

ತಿರುವನಂತಪುರಂ: 'ಮಿದುಳು ತಿನ್ನುವ ಅಮೀಬಾ' (ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್) ಸೋಂಕಿಗೆ ತುತ್ತಾಗಿ, ಕೋಯಿಕ್ಕೋಡ್‌ನ ವೈದ್ಯಕೀಯ ಕಾಲೇಜು–ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 3 ತಿಂಗಳ ಹಸುಗೂಸು ಹಾಗೂ ಮತ್ತೊಬ್ಬ ರೋಗಿ ಸಾವಿಗೀಡಾಗಿದ್ದಾರೆ.

ಓಮಶ್ಶೇರಿ ನಿವಾಸಿ ಅಬೂಬಕರ್ ಸಿದ್ದಿಕಿ ಅವರ ಮಗು ಸೋಮವಾರ ಮೃತಪಟ್ಟಿದ್ದು, ಕಾಪ್ಪಿಲ್‌ನ ನಿವಾಸಿ ರಾಮ್ಲಾ ಅವರು ಭಾನುವಾರ ಮೃತಪಟ್ಟಿದ್ದಾರೆ. ಈ ವರ್ಷ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 3ಕ್ಕೆ ಏರಿಕೆಯಾಗಿದೆ.

42 ಮಂದಿಗೆ ಈ ವರ್ಷ ಸೋಂಕು ದೃಢಪಟ್ಟಿದ್ದು, ಇನ್ನೂ 13 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಮೀಬಿಕ್ ಮೆನಿಂಗೊ ಎನ್ಸೆಫಾಲಿಟಿಸ್ ಅಪರೂಪದ ಸೋಂಕು ಆಗಿದ್ದು, ಇದು ಕಲುಷಿತ ನೀರಿನ ಹರಡುತ್ತದೆ.

ಬಿಹಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ನೀಡಿದ 'ಮತದಾರರ ಅಧಿಕಾರ ಯಾತ್ರೆ'

ಒಂದೇ ಕಲ್ಲಿಗೆ ಬಿತ್ತು ಮೂರು ಹಕ್ಕಿ

● ಅಭಯ್ ಕುಮಾರ್

ಮುಖ್ಯಾಂಶಗಳು

- 15 ದಿನಗಳವರೆಗೆ ನಡೆದ ಯಾತ್ರೆ
- ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳಿಗೆ ಬೇಡಿಕೆ

ಸುದ್ದಿ ವಿಶ್ಲೇಷಣೆ

ಪಟ್ನಾ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಿಹಾರದಲ್ಲಿ 'ಮತದಾರರ ಅಧಿಕಾರ ಯಾತ್ರೆ' ನಡೆಸುವ ಮೂಲಕ ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಹೊಡೆದು ಉರುಳಿಸಿದ್ದಾರೆ. ಅಲ್ಲದೆ, ಕಳೆದ ಮೂರು ದಶಕಗಳಲ್ಲಿ ಕಾಂಗ್ರೆಸ್‌ನ ಉನ್ನತ ನಾಯಕತ್ವದ ಅನೇಕರು ಮಾಡಲಾಗದ ಕೆಲಸವನ್ನು ಮಾಡಿದ್ದಾರೆ.

ಮತ ಕಳವು ಕುರಿತ ಆರೋಪವನ್ನು ಸಾಬೀತುಪಡಿಸಲು ಪ್ರಮಾಣಪತ್ರ ಸಲ್ಲಿಸುವಂತೆ ಚುನಾವಣಾ ಆಯೋಗವು ರಾಹುಲ್ ಗಾಂಧಿ ಅವರನ್ನು ಕೇಳುತ್ತಿರಬಹುದು. ಆಡಳಿತ ವ್ಯವಸ್ಥೆ ಹಾಗೂ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಆರೋಪ ಮಾಡಿದ್ದಕ್ಕಾಗಿ ಅವರನ್ನು ಎನ್‌ಡಿಎ ನಾಯಕರು ನಿಂದಿಸುತ್ತಿರಬಹುದು. ಆದರೆ, ಅವರ ಈ ಯಾತ್ರೆಯು ಕಾಂಗ್ರೆಸ್ ಪಕ್ಷದ ಪುನರುಜ್ಜೀವನಕ್ಕೆ ಅಡಿಪಾಯ ಹಾಕಿರುವುದಂತೂ ದಿಟ.

ಹದಿನೈದು ದಿನಗಳ ಯಾತ್ರೆಯಲ್ಲಿ ಪ್ರಮುಖವಾಗಿ 'ಮತ ಕಳವು' ಕೇಂದ್ರೀಕೃತವಾಗಿತ್ತು ಹಾಗೂ ಬಿಜೆಪಿಯ ಹಿಂದೂತ್ವ ಹಾಗೂ ಮಂದಿರ ಕಾರ್ಯಸೂಚಿಯನ್ನು ಮರೆಮಾಚಿತು.

ಬಿಹಾರದ 25 ಜಿಲ್ಲೆಗಳ 110 ವಿಧಾನಸಭಾ ಕ್ಷೇತ್ರಗಳಲ್ಲಿ ರಾಹುಲ್ 1,300 ಕಿ.ಮೀ. ಸಂಚರಿಸಿದ್ದಾರೆ.

1990ರ ಮಾರ್ಚ್‌ನಲ್ಲಿ ಅಧಿಕಾರದಿಂದ ಕೆಳಗಿಳಿದ ಬಳಿಕ ಬಿಹಾರದಲ್ಲಿ ಉಸಿರುಗಟ್ಟಿದ ಸ್ಥಿತಿಯಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೈತನ್ಯವನ್ನು ನೀಡಿದ್ದಾರೆ.

ಈ ಯಾತ್ರೆಯು ಯೋಜನಾಬದ್ಧವಾಗಿ ನಡೆದಿದ್ದು, ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟದವರು ವಿಸ್ಮಯಗೊಳ್ಳುವಂತೆ ಮಾಡಿದೆ.

'ಹೆಚ್ಚಿನ ಸೀಟು ಸಿಗುವ ನಿರೀಕ್ಷೆ'

'2020ರ ಚುನಾವಣೆಯಲ್ಲಿ 70 ಸ್ಥಾನಗಳ ಪೈಕಿ 19 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಏಕೆಂದರೆ, ಅಂತಹ ಸ್ಥಾನಗಳನ್ನು ನಮಗೆ ನೀಡಲಾಗಿತ್ತು. ಆದರೆ, ರಾಹುಲ್ ಅವರ 15 ದಿನಗಳ ಯಾತ್ರೆಯು ನಮ್ಮ ಪಕ್ಷದಲ್ಲಿ ಹೊಸ ಉತ್ಸಾಹ ತುಂಬಿದೆ. ಸೀಟು ಹಂಚಿಕೆ ಸಂಬಂಧ ಆರ್‌ಜೆಡಿಯೊಂದಿಗೆ ಮಾತುಕತೆ ನಡೆಸುವ ಮೂಲಕ ಹೆಚ್ಚಿನ ಸಂಖ್ಯೆಯ ಸೀಟುಗಳು ಸಿಗುವ ನಿರೀಕ್ಷೆ ಇದೆ' ಎಂದು ಕಾಂಗ್ರೆಸ್ ಬಿಹಾರ ಘಟಕದ ಮಾಜಿ ಅಧ್ಯಕ್ಷ ರಾಮ್ ಜತನ್ ಸಿನ್ಹಾ ಹೇಳಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಸೀಟು ನೀಡುವಂತೆ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರೊಂದಿಗೆ ಚೌಕಾಸಿ ನಡೆಸಲು ಸಹಕಾರಿಯಾಗಿದೆ.

'ರಾಹುಲ್ ಅವರು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಹೊಡೆದಿದ್ದಾರೆ. ಒಂದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಷಯದ ಮೂಲಕ ಚುನಾವಣಾ ಆಯೋಗ ಹಾಗೂ ಬಿಜೆಪಿಯನ್ನು ಸಂಕಷ್ಟಕ್ಕೆ ಸಿಲುಕಿಸಿರುವುದು. ಎರಡು, ಗೋಸಂರಕ್ಷಣೆಯ ಸೋಲ್ಲೆದ್ದಿದ್ದ ಕಡೆ ರಾಜಕೀಯವಾಗಿ ನಿರ್ನಾಮವಾಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಹೊಸ ಚೈತನ್ಯವನ್ನು ತಂದುಕೊಟ್ಟಿರುವುದು. ಮೂರನೆಯದಾಗಿ, ಪಕ್ಷವನ್ನು ಪುನರುಜ್ಜೀವನಗೊಳಿಸುವ ಮೂಲಕ, ನವೆಂಬರ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಸಮಾಧಾನಕರ ಸಂಖ್ಯೆಯ ಸೀಟುಗಳಿಗಾಗಿ ಆರ್‌ಜೆಡಿ ನಾಯಕರೊಂದಿಗೆ ಚೌಕಾಸಿ ನಡೆಸುವ ಸ್ಥಿತಿ ತಂದಿರುವುದು' ಎಂದು ರಾಜಕೀಯ ವಿಶ್ಲೇಷಕ ಗಿರಿಧರ್ ಝಾ ಅಭಿಪ್ರಾಯಪಟ್ಟಿದ್ದಾರೆ.

'2020ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಕಳಪೆ ಪ್ರದರ್ಶನ ತೋರಿದ್ದರಿಂದ, ಮತದಾರರ ಅಧಿಕಾರ ಯಾತ್ರೆಗೂ ಮುನ್ನ 243 ವಿಧಾನಸಭಾ ಕ್ಷೇತ್ರಗಳ ಪೈಕಿ 50 ಸೀಟುಗಳನ್ನೂ ನೀಡಲು ತೇಜಸ್ವಿ ಅವರಿಗೆ ಇಷ್ಟವಿರಲಿಲ್ಲ' ಎಂದು ಝಾ ಹೇಳಿದ್ದಾರೆ.

ಬಾಲಕಿ ಸೇರಿ ಏಳು ಮಂದಿ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಭಾರಿ ಮಳೆ ಮುಂದುವರಿದಿದೆ. ಭೂಕುಸಿತದಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ.

ಶಿಮ್ಲಾದ ಹೊರವಲಯದಲ್ಲಿರುವ ಜುಂಗಾ ಪ್ರದೇಶದ ಡುಬ್ಲೂದಲ್ಲಿ ಸಂಭವಿಸಿದ ಭೂಕುಸಿತದಲ್ಲಿ 35 ವರ್ಷದ ವೀರೇಂದರ್ ಕುಮಾರ್ ಹಾಗೂ ಅವರ 10 ವರ್ಷದ ಮಗಳು ಸಾವಿಗೀಡಾಗಿದ್ದಾರೆ. ಮನೆಯ ಹೊರಗಿದ್ದ ವೀರೇಂದರ್ ಪತ್ನಿ ಬದುಕುಳಿದಿದ್ದಾರೆ.

ಮತ್ತೊಂದು ಘಟನೆಯಲ್ಲಿ ಶಿಮ್ಲಾದ ಕೋಟ್‌ಖೈ ಪ್ರದೇಶದ ಚೋಲ್ ಗ್ರಾಮದಲ್ಲಿ ಮನೆಯೊಂದು ಕುಸಿದು, ಕಲಾವತಿ ಎಂಬ ವೃದ್ಧೆ ಸೋಮವಾರ ಮುಂಜಾನೆ ಮೃತಪಟ್ಟಿದ್ದಾರೆ.

ಹೆಚ್ಚುತ್ತಿರುವ ಯಮುನಾ ನದಿ ನೀರಿನ ಮಟ್ಟ; ನವದೆಹಲಿ: ದೆಹಲಿಯ ಹಲವು ಭಾಗಗಳಲ್ಲಿ ಸೋಮವಾರ ಮಳೆ ಸುರಿದಿದ್ದು, ಯಮುನಾ ನದಿ ನೀರಿನ ಮಟ್ಟವು ನಿರಂತರವಾಗಿ ಹೆಚ್ಚಾಗುತ್ತಿದೆ.

ಭೂಕುಸಿತ– ಇಬ್ಬರು ಸಾವು: ಇಲ್ಲಿನ ಕೇದಾರನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ, ಇಬ್ಬರು ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ. ಮುಂಕಟಿಯಾದಲ್ಲಿ, ಚಲಿಸುತ್ತಿದ್ದ ವಾಹನದ ಮೇಲೆ ಭೂಕುಸಿತ ಸಂಭವಿಸಿದೆ. ಮಳೆ ಸಂಬಂಧಿತ ಘಟನೆಗಳಲ್ಲಿ ಭಾನುವಾರ ಇಬ್ಬರು ಸಾವಿಗೀಡಾಗಿದ್ದಾರೆ.

ಪ್ರವಾಹದಲ್ಲಿ 29 ಮಂದಿ ಸಾವು; ಚಂಡೀಗಢ: ಪಂಜಾಬ್‌ನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಸೃಷ್ಟಿಯಾದ ಪ್ರವಾಹದಲ್ಲಿ ಈವರೆಗೆ 29 ಜನರು ಮೃತಪಟ್ಟಿದ್ದಾರೆ. ರಾಜ್ಯದ 2,56,107 ಮಂದಿ ಪ್ರವಾಹ ಪೀಡಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಲೂಧಿಯಾನಾದಲ್ಲಿ ಅತಿ ಹೆಚ್ಚು, 21.67 ಸೆಂ.ಮೀ ಮಳೆ ದಾಖಲಾಗಿದೆ. ಸೆ.3ರವರೆಗೆ ಎಲ್ಲಾ ಶಾಲೆ ಮತ್ತು ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಹಿಮಾಚಲ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಸತಲುಜ್, ಬಿಯಾಸ್ ನದಿಗಳು ಉಕ್ಕಿ ಹರಿಯುತ್ತಿದ್ದು, ಪಂಜಾಬ್ ಪ್ರವಾಹ ಎದುರಿಸುತ್ತಿದೆ. ಪಠಾಣಕೋಟ್ ಜಿಲ್ಲೆಯಲ್ಲಿ 2.56 ಲಕ್ಷ ಜನರ ಜೀವನ ಅಸ್ತವ್ಯಸ್ತಗೊಂಡಿದ್ದು, ಇಲ್ಲಿ ಮೂವರು ಕಾಣೆಯಾಗಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್: ಗೆಲ್ಲುವ ತಂಡಕ್ಕೆ ₹39.55 ಕೋಟಿ!


ದುಬೈ (ಪಿಟಿಐ): ಮುಂಬರುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ನರು ಟೂರ್ನಿಯ ಇತಿಹಾಸದದಲ್ಲೇ ಅತ್ಯಧಿಕ ಮೊತ್ತದ ಬಹುಮಾನ ಮೊತ್ತ ಗಳಿಸಲಿದ್ದಾರೆ. ವಿಜೇತರಿಗೆ ನೀಡುವ ಬಹುಮಾನದ ಹಣವನ್ನು ₹11.65 ಕೋಟಿಯಿಂದ ₹39.55 ಕೋಟಿಗೆ ಏರಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಸೋಮವಾರ ಪ್ರಕಟಿಸಿದೆ.

2023ರ ಪುರುಷರ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡ ₹31.35 ಕೋಟಿ ಗಳಿಸಿತ್ತು.

ಮಹಿಳಾ ವಿಶ್ವಕಪ್‌ನ 13ನೇ ಆವೃತ್ತಿ ಸೆಪ್ಟೆಂಬರ್ 30ರಂದು ಆರಂಭವಾಗಲಿದೆ. ಭಾರತ ಮತ್ತು ಶ್ರೀಲಂಕಾ ಆತಿಥ್ಯ ವಹಿಸಿವೆ. ಎಂಟು ತಂಡಗಳು ಕಣದಲ್ಲಿರುವ ಈ ಟೂರ್ನಿಯ ಬಹುಮಾನ ಮೊತ್ತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ.

ಈ ಬಾರಿ ಟೂರ್ನಿಯ ಒಟ್ಟು ಬಹುಮಾನ ಮೊತ್ತ ₹122.5 ಕೋಟಿ ($13.88 ದಶಲಕ್ಷ). ನ್ಯೂಜಿಲೆಂಡ್‌ನಲ್ಲಿ ಕಳೆದ ಬಾರಿಯ (2022ರ) ಆವೃತ್ತಿಗೆ ಹೋಲಿಸಿದರೆ ಇದು ಶೇ 297ರಷ್ಟು ಅಧಿಕ. ಈ ಏರಿಕೆಯು 2023ರ ಪುರುಷರ ಏಕದಿನ ವಿಶ್ವಕಪ್ ಟೂರ್ನಿಯ ಬಹುಮಾನ ಮೊತ್ತ (ಸುಮಾರು ₹88.26 ಕೋಟಿ) ಮೀರಿಸಿದೆ ಎಂದು ಐಸಿಸಿ ವಿವರಿಸಿದೆ.

ರನ್ನರ್ ಅಪ್ ಸ್ಥಾನ ಪಡೆಯುವ ತಂಡ ₹19.77 ಕೋಟಿ ಮೊತ್ತ ($2.24 ದಶಲಕ್ಷ) ಸಂಪಾದಿಸಲಿದೆ. ಇದು ಕಳೆದ ಬಾರಿಯ ಮೊತ್ತವಾದ ₹5.30 ಕೋಟಿಗೆ ಹೋಲಿಸಿದಲ್ಲಿ ಶೇ. 273ರಷ್ಟು ಹೆಚ್ಚು.



ಸೆಮಿಫೈನಲ್‌ನಲ್ಲಿ ಸೋತ ತಂಡಗಳು ₹9.89 ಕೋಟಿ ಮೊತ್ತ ತಮ್ಮದಾಗಿಸಿಕೊಳ್ಳಲಿವೆ. 2022ರಲ್ಲಿ ಸೆಮಿಫೈನಲ್‌ನಲ್ಲಿ ಸೋತ ತಂಡಗಳು ಪಡೆದ ಬಹುಮಾನ ಮೊತ್ತ ₹2.65 ಕೋಟಿ.

ಗುಂಪು ಹಂತದಲ್ಲಿ ಗೆಲ್ಲುವ ತಂಡಗಳು ₹30.29 ಲಕ್ಷ ಸಂಪಾದಿಸಲಿವೆ. ಐದು ಮತ್ತು ಆರನೇ ಸ್ಥಾನ ಪಡೆಯುವ ತಂಡಗಳಿಗೆ ₹62 ಲಕ್ಷ ದೊರೆಯಲಿದೆ. ಏಳು ಮತ್ತು ಎಂಟನೇ ಸ್ಥಾನ ಪಡೆಯುವ ತಂಡಗಳು ₹24.71 ಲಕ್ಷ ಸಂಪಾದಿಸಲಿವೆ. ಭಾಗವಹಿಸುವ ಪ್ರತಿಯೊಂದು ತಂಡಗಳಿಗೆ ₹22 ಲಕ್ಷ ಸಿಗಲಿದೆ.

'ಮಹಿಳಾ ಕ್ರಿಕೆಟ್‌ಗೆ ಜನಪ್ರಿಯತೆ ಹೆಚ್ಚಿಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. 2024ರ ವಿಶ್ವಕಪ್‌ಗೆ ಮೊದಲು ಘೋಷಿಸಿದಂತೆ ಬಹುಮಾನ ಮೊತ್ತದಲ್ಲಿ ಸಮಾನತೆ ತರುವ ಉದ್ದೇಶದಿಂದಲೂ ಈ ನಿರ್ಧಾರಕ್ಕೆ ಬರಲಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಬಾರಿಯ ವಿಶ್ವಕಪ್ ಪಂದ್ಯಗಳು ಐದು ತಾಣಗಳಲ್ಲಿ– ಭಾರತದ ಗುವಾಹಟಿ, ಇಂದೋರ್, ನವಿ ಮುಂಬೈ, ವಿಶಾಖಪಟ್ಟಣ ಮತ್ತು ಶ್ರೀಲಂಕಾದ ಕೊಲಂಬೊದಲ್ಲಿ (ತಟಸ್ಥ ತಾಣ)– ನಡೆಯಲಿವೆ. ಪಾಕಿಸ್ತಾನ ತನ್ನ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿದೆ.

'ಮಹಿಳಾ ಕ್ರಿಕೆಟ್‌ಗೆ ಆದ್ಯತೆ ನೀಡುವುದು ಈ ಕ್ರಮದ ಹಿಂದಿನ ಉದ್ದೇಶ. ಮಹಿಳಾ ಕ್ರಿಕೆಟ್ ಬೆಳವಣಿಗೆಯ ದೃಷ್ಟಿಯಿಂದ ಇದು ಮಹತ್ವದ ಮೈಲಿಗಲ್ಲಾಗಿದೆ' ಎಂದು ಐಸಿಸಿ ಅಧ್ಯಕ್ಷ ಜಯ್ ಶಾ ತಿಳಿಸಿದರು.

ನವದೆಹಲಿಯಲ್ಲಿ ಮುಂದಿನ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್



ಪ್ಯಾರಿಸ್ (ಪಿಟಿಐ): ಭಾರತವು 2026ರ ವಿಶ್ವಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಅತಿಥ್ಯ ವಹಿಸಿಕೊಂಡಿದೆ. ರಾಜಧಾನಿ ನವದೆಹಲಿಯಲ್ಲಿ 30ನೇ ಆವೃತ್ತಿಯ ಈ ಪ್ರತಿಷ್ಠಿತ ಚಾಂಪಿಯನ್‌ಷಿಪ್ ನಡೆಯಲಿದೆ.

17 ವರ್ಷಗಳ ನಂತರ ಭಾರತಕ್ಕೆ ವಿಶ್ವ ಚಾಂಪಿಯನ್‌ಷಿಪ್ ಮರಳುತ್ತಿದೆ. 2009ರಲ್ಲಿ ಕೊನೆಯ ಬಾರಿ ಈ ಚಾಂಪಿಯನ್‌ಷಿಪ್ ಭಾರತದಲ್ಲಿ (ಹೈದರಾಬಾದಿನಲ್ಲಿ) ನಡೆದಿತ್ತು.

ಪ್ಯಾರಿಸ್‌ನಲ್ಲಿ ಭಾನುವಾರ 29ನೇ ವಿಶ್ವ ಚಾಂಪಿಯನ್‌ಷಿಪ್‌ನ ಸಮಾರೋಪದಲ್ಲಿ ಆತಿಥ್ಯದ ಘೋಷಣೆ ಮಾಡಲಾಯಿತು.

'ಪ್ಯಾರಿಸ್‌ನಲ್ಲಿ ಆಯೋಜನೆಗೊಂಡ ರೀತಿಯಲ್ಲೇ ಈ ಚಾಂಪಿಯನ್‌ಷಿಪ್ ಅನ್ನು ಗುಣಮಟ್ಟ ಮತ್ತು ವೈಭವದಿಂದ ನಡೆಸಲು ಶತಪ್ರಯತ್ನ ಹಾಕಲಿದ್ದೇವೆ. ಬ್ಯಾಡ್ಮಿಂಟನ್ ಪರಿವಾರವನ್ನು ದೆಹಲಿಗೆ ಸ್ವಾಗತಿಸಲು ನಾವು ಎದುರುನೋಡುತ್ತಿದ್ದೇವೆ' ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಗೌರವ ಮಹಾ ಕಾರ್ಯದರ್ಶಿ ಸಂಜಯ್ ಮಿಶ್ರಾ ಅವರನ್ನು ಉಲ್ಲೇಖಿಸಿ ಬಿಎಐ ಪ್ರಕಟಣೆ ತಿಳಿಸಿದೆ.

ಗೋಲುಗಳ ಮಳೆಗರೆದ ಭಾರತ

ಏಷ್ಯಾ ಕಪ್ ಹಾಕಿ: ಕಜಾಕಸ್ತಾನ ವಿರುದ್ಧ 15–0 ಗೋಲುಗಳ ನಿರಾಯಾಸ ಜಯ • ಜಪಾನ್ ನಿರ್ಗಮನ

ಪ್ರಮುಖ ಅಂಶಗಳು
- ಜಪಾನ್ ಎದುರು 2–2ರಿಂದ ಡ್ರಾ ಮಾಡಿಕೊಂಡ ಚೀನಾ
- ಬಿ ಗುಂಪಿನಿಂದ ಮಲೇಷ್ಯಾ, ಕೊರಿಯಾ ಮುನ್ನಡೆ
- ಇಂದಿನಿಂದ ಫೋರ್ ಹಂತದ ಪಂದ್ಯಗಳು

ರಾಜಗೀರ್ (ಪಿಟಿಐ): ಸಂಪೂರ್ಣ ಏಕ ಪಕ್ಷೀಯವಾದ ಪಂದ್ಯದಲ್ಲಿ ಆತಿಥೇಯ ಭಾರತ ತಂಡ 15-0 ಗೋಲುಗಳಿಂದ ದುರ್ಬಲ ಕಜಾಕಸ್ತಾನ ತಂಡವನ್ನು ಸದೆಬಡಿಯಿತು. ಏಷ್ಯಾ ಕಪ್ ಟೂರ್ನಿಯಲ್ಲಿ ಈ ಮೊದಲೇ ಸೂಪರ್ ಫೋರ್‌ಗೆ ಸ್ಥಾನ ಕಾದಿರಿಸಿದ್ದ ಭಾರತ ಮೂರನೇ ಜಯವನ್ನು ಸೋಮವಾರ ನಿರಾಯಾಸವಾಗಿ ಸಾಧಿಸಿ 'ಎ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.

ಅಭಿಷೇಕ್ ನಾಲ್ಕು ಗೋಲುಗಳನ್ನು (5ನೇ, 8ನೇ, 20ನೇ ಮತ್ತು 59ನೇ ನಿಮಿಷ) ಗಳಿಸಿದರೆ, ಸುಖಜೀತ್ ಸಿಂಗ್ (15ನೇ, 32ನೇ ಮತ್ತು 38ನೇ ನಿಮಿಷ) ಮತ್ತು ಜುಗರಾಜ್ ಸಿಂಗ್ (24ನೇ, 31ನೇ ಮತ್ತು 47ನೇ ನಿಮಿಷ) ಅವರೂ ಹ್ಯಾಟ್ರಿಕ್ ಪೂರೈಸಿದರು. ನಾಯಕ ಹರ್ಮನ್‌ಪ್ರೀತ್ ಸಿಂಗ್ (26ನೇ), ಅಮಿತ್ ರೋಹಿದಾಸ್ (29ನೇ), ರಾಜಿಂದರ್ ಸಿಂಗ್ (32ನೇ), ಸಂಜಯ್ (54ನೇ) ಮತ್ತು ದಿಲ್‌ಪ್ರೀತ್ ಸಿಂಗ್ (55ನೇ ನಿಮಿಷ) ಅವರು ಇತರ ಐದು ಗೋಲುಗಳನ್ನು ಹೊಡೆದರು.

ವಿರಾಮದ ವೇಳೆಗೆ ಆತಿಥೇಯ ತಂಡ 7–0 ಗೋಲುಗಳಿಂದ ಮುಂದಿತ್ತು.

ಭಾರತ ತನ್ನ ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ ಚೀನಾ ಮತ್ತು ಜಪಾನ್ ತಂಡಗಳನ್ನು ಸೋಲಿಸಿತ್ತು. ಚೀನಾ ಕೂಡ ಇದೇ ಗುಂಪಿನಿಂದ ಸೂಪರ್ ಫೋರ್ ಹಂತ ತಲುಪಿದೆ.

'ಬಿ' ಗುಂಪಿನಿಂದ ಮಲೇಷ್ಯಾ ಮತ್ತು ಹಾಲಿ ಚಾಂಪಿಯನ್ ಕೊರಿಯಾ ಕೂಡ ಸೂಪರ್ ಫೋರ್ ಹಂತಕ್ಕೆ ಮುನ್ನಡೆದವು.

ಸೂಪರ್ ಫೋರ್ ಹಂತದ ಪಂದ್ಯಗಳ ನಂತರ ಅಗ್ರ ಎರಡು ತಂಡಗಳು ಭಾನುವಾರ ನಡೆಯುವ ಫೈನಲ್‌ನಲ್ಲಿ ಆಡಲಿವೆ.

ಜಪಾನ್ ನಿರ್ಗಮನ: ಇದಕ್ಕೆ ಮೊದಲು, 'ಎ' ಗುಂಪಿನ ದಿನದ ಮೊದಲ ಪಂದ್ಯದಲ್ಲಿ ಬಲಿಷ್ಠ ಜಪಾನ್ ಎದುರು 2–2ರಿಂದ ಡ್ರಾ ಮಾಡಿಕೊಂಡ ಚೀನಾ, ಮುಂದಿನ ಹಂತಕ್ಕೆ ಅರ್ಹತೆ ಗಿಟ್ಟಿಸಿಕೊಂಡಿತು.

ಚೀನಾ ತಾನು ಆಡಿದ ಮೂರು ಪಂದ್ಯಗಳಲ್ಲಿ ಒಂದು ಗೆಲುವು, ಡ್ರಾ ಹಾಗೂ ಸೋಲಿನೊಂದಿಗೆ 4 ಅಂಕ ಸಂಪಾದಿಸಿತ್ತು. ಜಪಾನ್ ತಂಡವೂ ಇಷ್ಟೇ ಅಂಕ ಹೊಂದಿದ್ದರೂ, ಟೂರ್ನಿಯಲ್ಲಿ ಹೆಚ್ಚು ಗೋಲು (18) ಹೊಡೆದಿದ್ದ ಚೀನಾಕ್ಕೆ ಅಂತಿಮ ನಾಲ್ಕರ ಹಂತಕ್ಕೆ ಅವಕಾಶ ದೊರೆಯಿತು.



ಕಜಾಕಸ್ತಾನ ಎದುರಿನ ಪಂದ್ಯದಲ್ಲಿ ಗೋಲು ಹೊಡೆಯಲು ಯತ್ನಿಸಿದ ಭಾರತದ ಅಭಿಷೇಕ್ (ಜೆರ್ಸಿ ಸಂಖ್ಯೆ 5) ಪಿಟಿಐ ಚಿತ್ರ

Hero ASIA CUP RAJGIR, BIHAR 2025

ಮಲೇಷ್ಯಾ, ಕೊರಿಯಾ ಮುನ್ನಡೆ

ಬಿ ಗುಂಪಿನ ಪಂದ್ಯದಲ್ಲಿ ಮಲೇಷ್ಯಾ 15–0 ಯಿಂದ ಚೀನಾ ತೈಪೆ ತಂಡವನ್ನು ಲೀಲಾಜಾಲವಾಗಿ ಸೋಲಿಸಿದರೆ, ಕೊರಿಯಾ 5–1 ಗೋಲುಗಳಿಂದ ಬಾಂಗ್ಲಾದೇಶ ಎದುರು ಗೆಲುವು ಸಾಧಿಸಿತು.

ಗುಂಪು ಹಂತದ ಎಲ್ಲ ಮೂರು ಪಂದ್ಯಗಳನ್ನು ಗೆದ್ದ ಮಲೇಷ್ಯಾ 9 ಪಾಯಿಂಟ್ಸ್‌ಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು. ಅದರೊಂದಿಗೆ ಆತ್ಮವಿಶ್ವಾಸದಿಂದಲೇ ಅಂತಿಮ ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟಿತು. ದಕ್ಷಿಣ ಕೊರಿಯಾ ಎರಡು ಗೆಲುವಿನೊಂದಿಗೆ (6 ಪಾಯಿಂಟ್ಸ್) ಸೂಪರ್ ಫೋರ್ ಹಂತಕ್ಕೆ ಪ್ರವೇಶಿಸಿತು. ಬಾಂಗ್ಲಾದೇಶ (3 ಪಾಯಿಂಟ್ಸ್) ಹಾಗೂ ಚೀನಾ ತೈಪೆ (0) ತಂಡಗಳು ಟೂರ್ನಿಯಿಂದ ನಿರ್ಗಮಿಸಬೇಕಾಯಿತು.

ಪ್ರೊ ಕಬಡ್ಡಿ: ಪೈರೇಟ್ಸ್ ವಿರುದ್ಧ 3 ಪಾಯಿಂಟ್ ಗೆಲುವು

ಯೋಧಾಸ್‌ಗೆ ಎರಡನೇ ಜಯ

ವಿಶಾಖಪಟ್ಟಣ (ಪಿಟಿಐ): ಕೊನೆಯ ಕ್ಷಣದವರೆಗೆ ತೀವ್ರ ಪೈಪೋಟಿ ಕಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡ ಯುಪಿ ಯೋಧಾಸ್ ಸೋಮವಾರ 34–31 ರಿಂದ ಪಟ್ನಾ ಪೈರೇಟ್ಸ್ ವಿರುದ್ಧ ಜಯಗಳಿಸಿತು.

ರಕ್ಷಣಾ ವಿಭಾಗದ ಆಟಗಾರರಾದ ನಾಯಕ ಸುಮಿತ್ ಮತ್ತು ಆಶು ಸಿಂಗ್ ಅವರು ಅರ್ಹವಾಗಿ 'ಹೈ ಫೈವ್ಸ್' ಗಳಿಸಿದರು. ರೇಡಿಂಗ್‌ನಲ್ಲಿ ಕರ್ನಾಟಕದ ರಿಪ್ಪನ್‌ಪೇಟೆಯ ಯುವಕ ಗಗನ್ ಗೌಡ ಏಳು ಪಾಯಿಂಟ್ ಗಳಿಸುವ ಮೂಲಕ ಯುಪಿ ಯೋಧಾಸ್ ತಂಡ ಸತತ ಎರಡನೇ ಗೆಲುವು ದಾಖಲಿಸಿತು.

ಇಲ್ಲಿನ ವಿಶ್ವನಾಥ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಮೊದಲಾರ್ಧದ 10 ನಿಮಿಷಗಳ ಆಟದಲ್ಲಿ ಪೈರೇಟ್ಸ್ 7–6 ಮುನ್ನಡೆ ಗಳಿಸಿತು. ಪಟ್ನಾದ ಉತ್ಸಾಹಿ ಯುವ ರೇಡರ್ ಅಯಾನ್ ಲೋಚಬ್ ಈ ವೇಳೆ ಗಮನ ಸೆಳೆದರು. ಮೂರು ರೇಡ್ ಪಾಯಿಂಟ್‌ಗಳನ್ನು ಗಳಿಸಿದರು. ಕೆಲವೇ ನಿಮಿಷಗಳಲ್ಲಿ ಯುಪಿ ಯೋಧಾಸ್ ಆಲೌಟ್ ಆಯಿತು.

ಅಯಾನ್ ಕೊನೆಗೂ ಸೂಪರ್ ಟ್ಯಾಕಲ್‌ನಲ್ಲಿ ಸಿಲುಕಿದ ನಂತರ ಯೋಧಾಸ್ ಕೊಂಚ ಚೇತರಿಸಿಕೊಂಡಿತು. ವಿರಾಮದ ವೇಳೆಗೆ ಪಟ್ನಾ ತಂಡವೇ 19–13ರಲ್ಲಿ ಮುಂದಿತ್ತು. ಈ ಅವಧಿಯಲ್ಲಿ ಅಯಾನ್ ಎಂಟು ರೇಡ್ ಪಾಯಿಂಟ್ಸ್ ಕಲೆಹಾಕಿ ಮಿಂಚಿದ್ದರು.

ಪಂದ್ಯದ ಮೂವತ್ತನೆಯ ನಿಮಿಷದ ನಂತರ ಪಟ್ನಾ ತನ್ನ ಮುನ್ನಡೆಯನ್ನು 23–19ಕ್ಕೆ ಹೆಚ್ಚಿಸಿತು. ಆದರೆ ಯೋಧಾಸ್ ಪಟ್ಟುಬಿಡಲಿಲ್ಲ. ಭವಾನಿ ರಜಪೂತ್ ಮತ್ತು ಗಗನ್ ಗೌಡ ಅವರ ಯಶಸ್ವಿ ರೇಡ್‌ಗಳ ನೆರವಿನಿಂದ ಹಿನ್ನಡೆ ಕಡಿಮೆಮಾಡಿಕೊಂಡಿತು. ಸುಮಿತ್ ಅಮೋಘ ಟ್ಯಾಕಲ್ ಮೂಲಕ ಅಯಾನ್ ಅವರನ್ನು ಅಂಕಣದಾಚೆ ಕಳುಹಿಸಿದರು. ಪಂದ್ಯ ರೋಚಕ ಸ್ಥಿತಿಗೆ ತಲುಪಿತು. ವಿರಾಮದ ಬಳಿಕ ಎಂಟನೇ ನಿಮಿಷದಲ್ಲಿ ಪಟ್ನಾ ಆಲೌಟ್ ಆಗಿ ಯೋಧಾಸ್ ಸ್ಕೋರ್ ಸಮಮಾಡಿಕೊಂಡಿತು.

ಯೋಧಾಸ್ ಕೊನೆಯ ಹತ್ತು ನಿಮಿಷಗಳಲ್ಲಿ ಹಿಡಿತ ಬಿಗಿಗೊಳಿಸಿತು. ಅಯಾನ್ ಅವರು ಸೂಪರ್ ಟೆನ್ ಗಳಿಸದಂತೆ ತಡೆಯಿತು. ಮೂರು ಪಾಯಿಂಟ್‌ಗಳಿಂದ ಗೆಲುವು ಸಾಧಿಸಿತು.

ಮಂಗಳವಾರದ ಪಂದ್ಯಗಳು:
ದಬಾಂಗ್ ಡೆಲ್ಲಿ–ಬೆಂಗಳೂರು ಬುಲ್ಸ್ (ರಾತ್ರಿ 8)
ಜೈಪುರ ಪಿಂಕ್ ಪ್ಯಾಂಥರ್ಸ್–ಪಟ್ನಾ ಪೈರೇಟ್ಸ್ (ರಾತ್ರಿ 9)



ಪಟ್ನಾ ಪೈರೇಟ್ಸ್ ರೇಡರ್‌ನನ್ನು ಹಿಡಿದ ಯುಪಿ ಯೋಧಾಸ್ ಆಟಗಾರರು ಎಕ್ಸ್ ಚಿತ್ರ

ಪುಣೇರಿ ಜಯಭೇರಿ

ಸಂಘಟಿತ ಆಟ ಆಡಿದ ಪುಣೇರಿ ಪಲ್ಟನ್ ತಂಡವು ಏಕಪಕ್ಷೀಯವಾಗಿ ನಡೆದ ದಿನದ ಎರಡನೇ ಪಂದ್ಯದಲ್ಲಿ 41–19ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿತು.

ಮೊದಲಾರ್ಧದಲ್ಲಿ 17–11ರಿಂದ ಮುನ್ನಡೆ ಸಾಧಿಸಿದ್ದ ಪುಣೇರಿ ಪಲ್ಟನ್, ದ್ವಿತೀಯಾರ್ಧದಲ್ಲಿ ಪಾರಮ್ಯ ಮೆರೆಯಿತು. ರೇಡಿಂಗ್‌ನಲ್ಲಿ ಆದಿತ್ಯ ಶಿಂದೆ 6 ಅಂಕ ಹಾಗೂ ಪಂಕಜ್ ಮೋಹಿತ್ 5 ಪಾಯಿಂಟ್ಸ್ ಪಡೆದರು.

ಪಲ್ಟನ್ ತಂಡದ ಅಭಿನೇಶ್ ನಾದರಾಜನ್ (6), ಗುರ್ದೀಪ್ (4) ಹಾಗೂ ಗೌರವ್ ಖತ್ರಿ (4) ಅವರನ್ನೊಳಗೊಂಡ ಬಲಿಷ್ಠ ರಕ್ಷಣಾ ಕೋಟೆಯನ್ನು ಭೇದಿಸಲು ವಿಫಲವಾದ ಗುಜರಾತ್ ತಂಡವು ಮೂರು ಬಾರಿ ಆಲೌಟ್ ಆಯಿತು. ಜೈಂಟ್ಸ್ ಪರ ರಾಕೇಶ್ ಸುಂಗ್ರೋಯಾ (6) ಏಕಾಂಗಿ ಹೋರಾಟ ತೋರಿದರು.

ಸಂಕ್ಷಿಪ್ತ ಸುದ್ದಿ

4ರಿಂದ ಮೈಸೂರು ರೇಸ್

ಮೈಸೂರು: ಈ ಸಾಲಿನ ಪ್ರಧಾನ ಮೈಸೂರು ಋತುವಿನ ರೇಸ್ ಇದೇ 4ರಂದು ಆರಂಭವಾಗಲಿದ್ದು, ಅಕ್ಟೋಬರ್ 26ರಂದು ಮುಕ್ತಾಯಗೊಳ್ಳಲಿದೆ.

ಈ ಅವಧಿಯಲ್ಲಿ 15 ರೇಸ್ ದಿನಗಳನ್ನು ಏರ್ಪಡಿಸಲಾಗಿದೆ. ಪ್ರತಿಷ್ಠಿತ ಕಪ್ ಮತ್ತು ಟ್ರೋಫಿಗಳು ಹಾಗೂ ಸ್ಟೇಕ್‌ಗಳಿಗಾಗಿ ₹6.63 ಕೋಟಿಗಳನ್ನು ಮೀಸಲಿಡಲಾಗಿದೆ.

ಎಲ್ಲಾ ರೇಸ್ ದಿನಗಳಲ್ಲಿ ಪ್ರವೇಶ ಶುಲ್ಕ ಪಾವತಿಸಿ ಪಡೆದ ಚೀಟಿಗಳಿಗೆ ಹಿಂದಿನಂತೆ ಲಕ್ಕಿ ಡ್ರಾ ಮರುಪರಿಚಯಿಸಲಾಗುತ್ತಿದೆ. ವಿಜೇತರಿಗೆ ಮೊದಲನೇ ಬಹುಮಾನ ₹3,000, ಎರಡನೇ ಬಹುಮಾನ ₹2,000 ಮತ್ತು ಮೂರನೇ ಬಹುಮಾನ ₹1,000 ನೀಡಲಾಗುತ್ತಿದೆ.

ಈ ಋತುವಿನಲ್ಲಿ ಹತ್ತು ಪ್ರಮುಖ ರೇಸ್‌ಗಳನ್ನು ಏರ್ಪಡಿಸಲಾಗಿದೆ. ಡರ್ಬಿ ರೇಸ್ ಅನ್ನು ಸಾಂಪ್ರದಾಯಿಕವಾಗಿ ಋತುವಿನ ಕೊನೆಯ ದಿನ, ಅಂದರೆ ಅ. 26ರಂದು ನಡೆಸಲಾಗುವುದು ಎಂದು ಮೈಸೂರು ಟರ್ಫ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ಡಿಸೆಂಬರ್ 9ರಿಂದ ಟಿಪಿಎಲ್

ಮುಂಬೈ (ಪಿಟಿಐ): ಏಳನೇ ಆವೃತ್ತಿಯ ಟೆನಿಸ್ ಪ್ರೀಮಿಯರ್ ಲೀಗ್ (ಟಿಪಿಎಲ್) ಡಿ. 9ರಿಂದ 14ರವರೆಗೆ ಅಹಮದಾಬಾದ್‌ನಲ್ಲಿ ನಡೆಯಲಿದೆ.

ಎಂಟು ತಂಡಗಳು ಪ್ರಶಸ್ತಿಗಾಗಿ ಸೆಣಸಲಿದ್ದು, ಎರಡು ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ರೋಹನ್ ಬೋಪಣ್ಣ ಸೇರಿ ಪ್ರಮುಖ ಆಟಗಾರರು ಕಣಕ್ಕಿಳಿಯಲಿದ್ದಾರೆ. ಅಹಮದಾಬಾದ್‌ನ ಗುಜರಾತ್ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ. ಟೂರ್ನಿಯು ಇದೇ ಮೊದಲ ಬಾರಿಗೆ ಮಹಾರಾಷ್ಟ್ರದಿಂದ ಹೊರಗೆ ನಡೆಯಲಿದೆ.

ಎಂಪಿಸಿ ಅಧ್ಯಕ್ಷರಾಗಿ ಮಹಾನಆರ್ಯಮನ್ ಸಿಂಧಿಯಾ ಆಯ್ಕೆ

ಇಂದೋರ್ (ಪಿಟಿಐ): ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಪುತ್ರ ಮತ್ತು ಗ್ವಾಲಿಯರ್ ಡಿವಿಷನ್ ಕ್ರಿಕೆಟ್ ಸಂಸ್ಥೆ ಉಪಾಧ್ಯಕ್ಷ ಮಹಾನಆರ್ಯಮನ್ ಸಿಂಧಿಯಾ ಅವರು ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಗ್ವಾಲಿಯರ್‌ನ ರಾಜವಂಶಸ್ಥರಾದ 29 ವರ್ಷ ವಯಸ್ಸಿನ ಮಹಾನಆರ್ಯಮನ್ ಸಿಂಧಿಯಾ ಈ ಸ್ಥಾನಕ್ಕೇರಿದ ಅತಿ ಕಿರಿಯವರು ಹಾಗೂ ರಾಜವಂಶದ ಮೂರನೇ ತಲೆಮಾರಿನವರು.



ಕರ್ನಾಟಕ ಈಜು ಸಂಸ್ಥೆ (ಕೆಎಸ್‌ಎ), ಓಪನ್ ವಾಟರ್ ಈಜುಗಾರರ ಫೌಂಡೇಷನ್ ಹಾಗೂ ಮೌಂಟೆನ್ ಫೆಸ್ಟಿವಲ್ ಅಡ್ವೆಂಚರ್ ಜಂಟಿ ಆಶ್ರಯದಲ್ಲಿ ಗೌರಿಬಿದನೂರು ತಾಲೂಕಿನ ಗುಂಜೂರು ಕೆರೆಯಲ್ಲಿ ಭಾನುವಾರ ನಡೆದ ಓಪನ್ ವಾಟರ್ ಈಜು ಸ್ಪರ್ಧೆಗಳಲ್ಲಿ ವಿಜೇತರಾದ ಈಜುಪಟುಗಳು

ಅಮೆರಿಕ ಓಪನ್ ಟೆನಿಸ್: ಸಬಲೆಂಕಾ ಮುನ್ನಡೆ • ಸೋಲಿನ ಸುಳಿಯಿಂದ ಪಾರಾದ ಬಾರ್ಬರಾ

ಎಂಟರ ಘಟ್ಟಕ್ಕೆ ಅಲ್ಕರಾಜ್, ಜೊಕೊವಿಚ್

ನ್ಯೂಯಾರ್ಕ್ (ಎಎಫ್‌ಪಿ): ಘಟಾನುಘಟಿಗಳಾದ ಕಾರ್ಲೋಸ್ ಅಲ್ಕರಾಜ್ ಮತ್ತು ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿ ದರು. ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಸಹ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಮತ್ತು ಏಳನೇ ಶ್ರೇಯಾಂಕದ ಜೊಕೊವಿಚ್ ಅವರು ಸೆಮಿಫೈನಲ್ ಮುಖಾಮುಖಿಯಾಗುವತ್ತ ಸಾಗಿದ್ದಾರೆ. ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಇಬ್ಬರೂ ನೇರ ಸೆಟ್‌ಗಳ ಗೆಲುವನ್ನು ದಾಖಲಿಸಿದರು.

ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಅಲ್ಕರಾಜ್ 7–6 (7–3), 6–3, 6–4 ರಿಂದ ಫ್ರಾನ್ಸ್‌ನ ಆರ್ಥರ್ ರಿಂಡರ್‌ಕನೆಷ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿದರು. ಈ ಬಾರಿಯ ಅಭಿಯಾನದಲ್ಲಿ ಸ್ಪೇನ್‌ನ ಆಟಗಾರ ಒಂದೂ ಸೆಟ್ ಬಿಟ್ಟುಕೊಟ್ಟಿಲ್ಲ.

22 ವರ್ಷ ವಯಸ್ಸಿನ ಅಲ್ಕರಾಜ್, ಮಂಗಳವಾರ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ 20ನೇ ಶ್ರೇಯಾಂಕದ ಜಿರಿ ಲೆಹೆಕಾ ಅವರನ್ನು ಎದುರಿಸಲಿದ್ದಾರೆ. ಝೆಕ್ ಆಟಗಾರ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಅಡ್ರಿಯಾನ್ ಮನ್ನಾರಿನೊ ಅವರನ್ನು 7–6 (7/4), 6–4, 2–6, 6–2 ರಿಂದ ಸೋಲಿಸಿದರು. ಜಿರಿ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಎಂಟರ ಘಟ್ಟಕ್ಕೆ ತಲುಪುತ್ತಿರುವುದು ಇದು ಎರಡನೇ ಸಲ.

ಜೊಕೊ ಮುನ್ನಡೆ: ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗೆ ಇನ್ನಿಲ್ಲದ ಯತ್ನದಲ್ಲಿರುವ 38 ವರ್ಷ ವಯಸ್ಸಿನ ಜೊಕೊವಿಚ್ 6–3, 6–3, 6–2 ರಿಂದ ಶ್ರೇಯಾಂಕರಹಿತ ಜಾನ್-ಲೆನಾರ್ಡ್ ಸ್ಟ್ರಫ್ (ಜರ್ಮನಿ) ಅವರನ್ನು ಹಿಮ್ಮೆಟ್ಟಿಸಿದರು.

ಮಂಗಳವಾರ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಜೊಕೊವಿಚ್, ನಾಲ್ಕನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರನ್ನು ಎದುರಿಸಲಿದ್ದಾರೆ. ಕಣದಲ್ಲುಳಿದಿರುವ ಅಮೆರಿಕದ ಏಕೈಕ ಆಟಗಾರ ಫ್ರಿಟ್ಜ್ 6–4, 6–3, 6–3 ರಿಂದ ಝೆಕ್ ರಿಪಬ್ಲಿಕ್‌ನ ಥಾಮಸ್ ಮಚಾಕ್ ಅವರನ್ನು ಸೋಲಿಸಲು 1 ಗಂಟೆ 38 ನಿಮಿಷ ತೆಗೆದುಕೊಂಡರು.

ಜೊಕೊವಿಚ್ ಅವರು ಹತ್ತು ಬಾರಿ ಫ್ರಿಟ್ಜ್ ಅವರಿಗೆ ಮುಖಾಮುಖಿಯಾಗಿದ್ದು, ಒಮ್ಮೆಯೂ ಸೋತಿಲ್ಲ.

ಸಬಲೆಂಕಾಗೆ ಜಯ: ಮಹಿಳಾ ವಿಭಾಗದಲ್ಲಿ ಸಬಲೆಂಕಾ ಹೆಚ್ಚಿನ ತಲೆನೋವಿಲ್ಲದೇ 6–1, 6–4 ರಿಂದ ಸ್ಪೇನ್‌ನ ಕ್ರಿಸ್ಟಿನಾ ಬುಕ್ಸಾ ಅವರನ್ನು ಸೋಲಿಸಿದರು. ಮಾಲ್ಡೋವಾ ಸಂಜಾತೆ ಕ್ರಿಸ್ಟಿನಾ ವಿಶ್ವ ಕ್ರಮಾಂಕದಲ್ಲಿ 95ನೇ ಸ್ಥಾನದಲ್ಲಿದ್ದಾರೆ.

ಸಬಲೆಂಕಾ ಅವರು ಸತತ 12ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ನಾಲ್ಕನೇ ಸುತ್ತು ಅಥವಾ ಅದಕ್ಕಿಂತ ಮೇಲೇರಿದ ಸಾಧನೆಗೆ ಪಾತ್ರರಾದರು

ಅವರು ಎಂಟರ ಘಟ್ಟದಲ್ಲಿ ಝೆಕ್ ರಿಪಬ್ಲಿಕ್‌ನ ಮರ್ಕೆತಾ ವಂದ್ರುಸೋವಾ ಅವರನ್ನು ಎದುರಿಸಲಿದ್ದಾರೆ. 2023ರ ವಿಂಬಲ್ಡನ್ ಚಾಂಪಿಯನ್, ಮರ್ಕೆತಾ ಇನ್ನೊಂದು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಒಂಬತ್ತನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಅವರನ್ನು 6–4, 5–7, 6–2 ರಿಂದ ಹೊರದೂಡಿದರು.

ಇನ್ನೊಂದು ರೋಚಕ ಪಂದ್ಯದಲ್ಲಿ ಝೆಕ್ ರಿಪಬ್ಲಿಕ್ ಮತ್ತೊಬ್ಬ ಆಟಗಾರ್ತಿ ಬಾರ್ಬರಾ ಕ್ರಾಚಿಕೋವಾ ಅವರು ಸೋಲಿನ ಸುಳಿಯಿಂದ ಪಾರಾಗಿ ಅಮೆರಿಕದ ಟೇಲರ್ ಟೌನ್ಸೆಂಡ್ ಅವರನ್ನು 1–6, 7–6 (15–13), 6–3ರಿಂದ ಸೋಲಿಸಿದರು. ಶ್ರೇಯಾಂಕರಹಿತ ಬಾರ್ಬರಾ ಎರಡನೇ ಸೆಟ್‌ನ ಒಂದು ಹಂತದಲ್ಲಿ 4–5ರಿಂದ ಹಿಂದೆಯಿದ್ದು, ಏಳು ಸಲ ಮ್ಯಾಚ್ ಪಾಯಿಂಟ್ ಉಳಿಸಿಕೊಂಡರು.

ಕ್ರಾಚಿಕೋವಾ, ಎಂಟರ ಘಟ್ಟದಲ್ಲಿ ನಾಲ್ಕನೇ ಶ್ರೇಯಾಂಕದ ಜೆಸಿಕಾ ಪೆಗುಲಾ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ. ಕಳೆದ ಬಾರಿ ಫೈನಲ್ ತಲುಪಿದ್ದ ಜೆಸಿಕಾ ಆರ್ಥರ್ ಆ್ಯಷ್ ಕೋರ್ಟ್‌ನಲ್ಲಿ 6–1, 6–2 ರಿಂದ ಸ್ವದೇಶದ ಆ್ಯನ್ ಲಿ ಅವರನ್ನು ಮಣಿಸಿದರು.



ಅಮೆರಿಕ ಓಪನ್ ನಾಲ್ಕನೇ ಸುತ್ತಿನಲ್ಲಿ ಜರ್ಮನಿಯ ಜಾನ್–ಲೆನಾರ್ಡ್ ಸ್ಟ್ರಫ್ ವಿರುದ್ಧ ಜಯಗಳಿಸಿದ ನಂತರ ನೊವಾಕ್ ಜೊಕೊವಿಚ್ ಅವರು ರ‍್ಯಾಕೆಟ್‌ಅನ್ನು ವಯೋಲಿನ್ ರೀತಿ ನುಡಿಸಿ ರಂಜಿಸಿದರು ಎಎಫ್‌ಪಿ ಚಿತ್ರ

ನೇಷನ್ಸ್ ಕಪ್: ಭಾರತಕ್ಕೆ ಸೋಲು

ಹಿಸಾರ್ (ತಾಜಿಕಿಸ್ತಾನ) (ಪಿಟಿಐ): ಭಾರತ ಫುಟ್‌ಬಾಲ್ ತಂಡವು ಇಲ್ಲಿ ನಡೆಯುತ್ತಿರುವ ಕಾಫಾ ನೇಷನ್ಸ್ ಕಪ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಇರಾನ್ ಎದುರು 0–3ರಿಂದ ಸೋಲು ಕಂಡಿತು.

ಸೋಮವಾರ ನಡೆದ ಗುಂಪು ಹಂತದ ಪಂದ್ಯದಲ್ಲಿ ಆರಂಭದಿಂದಲೂ ರಕ್ಷಣಾತ್ಮಕ ಆಟವಾಡಿದ ಭಾರತ ಗೋಲು ಗಳಿಸುವಲ್ಲಿ ವಿಫಲವಾಯಿತು. ಮೊದಲಾರ್ಧದಲ್ಲಿ ಗೋಲು ಹೊಡೆಯುವಲ್ಲಿ ಯಶಸ್ಸು ಕಾಣದ ಇರಾನ್, ದ್ವಿತೀಯಾರ್ಧದಲ್ಲಿ ಆಕ್ರಮಣಕಾರಿ ಆಟವಾಡಿ ಮೂರು ಗೋಲು ಗಳಿಸಿತು. ಅದರಲ್ಲೂ, ಕೊನೆಯ ಏಳು ನಿಮಿಷದ ಅವಧಿಯಲ್ಲಿ ಎರಡು ಗೋಲು ಹೊಡೆದು ಪಾರಮ್ಯ ಮೆರೆಯಿತು.

ಫಿಫಾ ರ‍್ಯಾಂಕಿಂಗ್‌ನಲ್ಲಿ ಇರಾನ್ 20ನೇ ಸ್ಥಾನದಲ್ಲಿದ್ದರೆ, ಭಾರತ 133ನೇ ಕ್ರಮಾಂಕ ಪಡೆದಿದೆ.

ಭಾರತ ತಂಡವು ಸೆ. 4ರಂದು ನಡೆಯಲಿರುವ ಗುಂಪು ಹಂತದ ತನ್ನ ಅಂತಿಮ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು ಸೆಣಸಲಿದೆ.

ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್

ತನಿಷ್ಕಾ ಕಾಲಭೈರವಗೆ ಪ್ರಶಸ್ತಿ ಡಬಲ್

ಬೆಳಗಾವಿ: ಯಶಸ್ಸಿನ ಓಟ ಮುಂದುವರಿಸಿದ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ ಅವರು ವಿನಯಾ ಕೋಟ್ಯಾನ್ ಸ್ಮರಣಾರ್ಥ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ 15 ಮತ್ತು 17 ವರ್ಷದೊಳಗಿನವರ ವಿಭಾಗಗಳ ಫೈನಲ್‌ನಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಪ್ರಶಸ್ತಿ ಗೆದ್ದು ಗಮನಸೆಳೆದರು. 19 ವರ್ಷದೊಳಗಿನವರ ವಿಭಾಗದಲ್ಲಿ ರನ್ನರ್ ಅಪ್ ಕೂಡ ಆದರು.

ಟಿಳಕವಾಡಿ ಕ್ಲಬ್‌ನಲ್ಲಿ ನಡೆಯುತ್ತಿರುವ ಟೂರ್ನಿಯ 17 ವರ್ಷದೊಳಗಿನವರ ಫೈನಲ್‌ನಲ್ಲಿ ತನಿಷ್ಕಾ ಫೈನಲ್‌ನಲ್ಲಿ 11–5, 11–4, 15–13ರಲ್ಲಿ ನೇರ ಸೆಟ್‌ಗಳಿಂದ ಶಿವಾನಿ ಮಹೇಂದ್ರನ್ ವಿರುದ್ಧ ಜಯಗಳಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11–6, 11–3, 11–7 ರಿಂದ ರಾಶಿ ರಾವ್ ವಿರುದ್ಧ, ಶಿವಾನಿ 5–11, 11–7, 11–6, 12–10 ರಿಂದ ಕೈರಾ ಬಾಳಿಗಾ ವಿರುದ್ಧ ಗೆಲುವು ಪಡೆದಿದ್ದರು.

15 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ 11–5, 11–7, 11–6 ರಿಂದ ಕೃಷ್ಣಾ ಕರ್ಕೇರ ವಿರುದ್ಧ ಸುಲಭ ಗೆಲುವು ಪಡೆದರು.

19 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ರಾಶಿ ರಾವ್ ಪಾಲಾಯಿತು. ಅವರು ಫೈನಲ್‌ನಲ್ಲಿ ತನಿಷ್ಕಾ ಅವರನ್ನು 6–11, 15–13, 11–9, 11–3, 11–8 ರಿಂದ ಪರಾಭವಗೊಳಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11–5, 11–9, 8–11, 11–8 ರಿಂದ ಕೈರಾ ವಿರುದ್ಧ, ರಾಶಿ 11–8, 11–7, 15–13 ರಿಂದ ಸುಮೇಧಾ ಭಟ್ ವಿರುದ್ಧ ಜಯ ಪಡೆದಿದ್ದರು.

17 ವರ್ಷದೊಳಗಿನ ಬಾಲಕರ ವಿಭಾಗದ ಫೈನಲ್‌ನಲ್ಲಿ ಗೌರವ್ ಗೌಡ 11–5, 11–8, 9–11, 11–9 ರಿಂದ ಶುಭಂ ತ್ರಿವೇದಿ ವಿರುದ್ಧ ಗೆಲುವು ಪಡೆದರು.


ರೇಯಾನ್ಶ್ ಚಾಂಪಿಯನ್: 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ರೇಯಾನ್ಶ್ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ 11–9, 11–8, 11–6 ರಿಂದ ಅಮನ್ ಜಾರ್ಜ್ ಥಾಮಸ್ ಅವರನ್ನು ಸೋಲಿಸಿದರು.

ನಾನ್ ಮೆಡಲಿಸ್ಟ್ ಸಿಂಗಲ್ಸ್ ಫೈನಲ್‌ನಲ್ಲಿ ಆದ್ಯೋತ್ ಯು ಅವರು 11–9, 11–3, 11–6 ರಿಂದ ಅಮನ್ ಜಾರ್ಜ್ ಥಾಮಸ್ ಅವರನ್ನು ಸೋಲಿಸಿದರು.



ವಿಜೇತರು... (ಎಡದಿಂದ): ರಾಶಿ ರಾವ್, ತನಿಷ್ಕಾ ಕಪಿಲ್ ಕಾಲಭೈರವ, ರೇಯಾನ್ಶ್ ಜಲನ್ ಮತ್ತು ಗೌರವ್ ಗೌಡ

ಐಎಲ್ ಟಿ20ಯಲ್ಲಿ ಅಶ್ವಿನ್ ಕಣಕ್ಕೆ?



ನವದೆಹಲಿ (ಪಿಟಿಐ): ಈಚೆಗಷ್ಟೇ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದ ಆರ್. ಅಶ್ವಿನ್ ಅವರು ವಿದೇಶಿ ಟಿ20 ಲೀಗ್‌ನಲ್ಲಿ ಆಡಲು ಆಸಕ್ತಿ ತೋರಿದ್ದಾರೆ.

ಯುಎಇನಲ್ಲಿ ನಡೆಯುವ ಇಂಟರ್‌ನ್ಯಾಷನಲ್ ಲೀಗ್ ಟಿ20 (ಐಎಲ್ ಟಿ20) ಹರಾಜಿಗೆ ತಮ್ಮ ಹೆಸರನ್ನು ನೋಂದಾಯಿಸುವ ಬಗ್ಗೆ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಹರಾಜು ಪ್ರಕ್ರಿಯೆ ಸೆಪ್ಟೆಂಬರ್ 30ರಂದು ದುಬೈನಲ್ಲಿ ನಡೆಯಲಿದೆ.

'ಐಎಲ್ ಟಿ20 ಟೂರ್ನಿಯ ಆಯೋಜಕರೊಂದಿಗೆ ಸಂಪರ್ಕದಲ್ಲಿದ್ದೇನೆ. ಹರಾಜಿಗೆ ನೋಂದಾಯಿಸಿಕೊಂಡರೆ, ಯಾವುದಾದರೂ ಫ್ರ್ಯಾಂಚೈಸಿ ನನ್ನನ್ನು ಖರೀದಿಸುವ ವಿಶ್ವಾಸವಿದೆ' ಎಂದು ಅಶ್ವಿನ್ ಅವರು ಕ್ರಿಕ್‌ಬಜ್ ಜೊತೆಗಿನ ಮಾತುಕತೆ ವೇಳೆ ಹೇಳಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ 2024ರ ಡಿಸೆಂಬರ್‌ನಲ್ಲಿ ವಿದಾಯ ಹೇಳಿದ್ದ ಅಶ್ವಿನ್ ಅವರು ಐಪಿಎಲ್‌ನಿಂದಲೂ ಹೊರಗುಳಿಯುವುದಾಗಿ ಆಗಸ್ಟ್ 27ರಂದು ಪ್ರಕಟಿಸಿದ್ದರು. ಹೀಗಾಗಿ, ಅವರು ಜಗತ್ತಿನಾದ್ಯಂತ ನಡೆಯಲಿರುವ ಯಾವುದೇ ಟಿ20 ಲೀಗ್‌ಗಳಲ್ಲಿ ಆಡಬಹುದಾಗಿದೆ.